ಸೋಮವಾರ, ಜೂನ್ 9, 2025 | ₹ 7.00

www.prajavani.net


prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮರಳಿ ದಡಕ್ಕೆ...
ಮುಂಗಾರು ಆರಂಭವಾಗಿರುವ ಕಾರಣಕ್ಕೆ ಆಳ ಸಮುದ್ರ ಮೀನುಗಾರಿಕೆಗೆ ನಿರ್ಬಂಧ ಹೇರಿರುವುದರಿಂದ ಕೋಯಿಕ್ಕೋಡಿನ ಪುದಿಯಪ್ಪ ಬಂದರಿನಲ್ಲಿ ಮೀನುಗಾರರು ದೋಣಿಯನ್ನು ದಡಕ್ಕೆ ಎಳೆದು ತಂದರು




ಶ್ರೀಗಂಧ
ಸಾಂಸ್ಕೃತಿಕ ಸಂಸ್ಥೆ, ಶಿವಮೊಗ್ಗ
ಸದ್ಭಾವ
ಸದ್ವಿಚಾರ
ಸದಭಿರುಚಿ
ಸತ್ಕಾರ್ಯ
ಶ್ರೀ ಕೆ.ಎಸ್. ಈಶ್ವರಪ್ಪನವರ
77ನೇ ಹುಟ್ಟುಹಬ್ಬದ ಶುಭಾಶಯಗಳು
ದಿನಾಂಕ: 10 ಮತ್ತು 11, 2025 | ಸ್ಥಳ: ಶುಭಮಂಗಳ
ಕಲ್ಯಾಣಮಂಟಪ ಆವರಣ, ವಿನೋಬನಗರ, ಶಿವಮೊಗ್ಗ
ಶ್ರೀ ಕೆ.ಈ. ಕಾಂತೇಶ್
ಕಾರ್ಯಾಧ್ಯಕ್ಷರು
ದಿನಾಂಕ: 10.06.2025ರ ಮಂಗಳವಾರ ಬೆಳಿಗ್ಗೆ 08:00ಕ್ಕೆ
ಲಲಿತ ಸಹಸ್ರನಾಮ ಪಾರಾಯಣ, ವಿಷ್ಣು ಸಹಸ್ರನಾಮ ಪಾರಾಯಣ,
ಚಂಡಿಕಾ ಹೋಮ, ರುದ್ರ ಹೋಮ, 11:00ಕ್ಕೆ ಪೂರ್ಣಾಹುತಿ
ಬೆಳಿಗ್ಗೆ 11:00ರಿಂದ ಧರ್ಮಸಭೆ
ಅಧ್ಯಕ್ಷತೆ: ಶ್ರೀಯುತ ಕೆ.ಎಸ್. ಈಶ್ವರಪ್ಪನವರು, ಮಾಜಿ ಉಪಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ದಿವ್ಯ ಸಾನಿಧ್ಯ: ಪರಮಪೂಜ್ಯರುಗಳಾದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮಿಗಳು, ಪೇಜಾವರ ಮಠ
ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು, ಬೆಕ್ಕಿನಕಲ್ಮಠ
ಶ್ರೀ ಅಭಿನವ ಶಂಕರ ಭಾರತೀ ಮಹಾಸ್ವಾಮಿಗಳು, ಕೂಡ್ಲಿ ಮಠ
ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಮಹಾಸ್ವಾಮಿಗಳು, ಚಿತ್ರದುರ್ಗ
ಶ್ರೀ ಈಶ್ವರಾನಂದಪುರಿ ಸ್ವಾಮಿಗಳು, ಕಾಗಿನೆಲೆ ಗುರುಪೀಠ, ಹೊಸದುರ್ಗ
ಶ್ರೀ ಸಾಯಿನಾಥ ಸ್ವಾಮಿಗಳು, ಆದಿಚುಂಚನಗಿರಿ ಮಠ, ಶಿವಮೊಗ್ಗ
ಮಧ್ಯಾಹ್ನ 12:30ಕ್ಕೆ ಮಂಗಳ ನಿಧಿ ಸಮರ್ಪಣೆ
ಉಪಸ್ಥಿತಿ: ಶ್ರೀ ಸು. ರಾಮಣ್ಣ
ಸಂಜೆ 06:00ರಿಂದ ದಿಕ್ಸೂಚಿ ಭಾಷಣ: ಶ್ರೀ ಚಕ್ರವರ್ತಿ ಸೂಲಿಬೆಲೆ
ಸ್ವಾಭಿಮಾನಿ ಭಾರತ
ವಿಶೇಷ ಅತಿಥಿ: ಶ್ರೀ ಶೈಲೇಶ್ ತಿಲಕ್ (ಶ್ರೀ ಲೋಕಮಾನ್ಯ ಬಾಲಗಂಗಾಧರ ತಿಲಕ್ ಅವರ ಮರಿಮಗ)
ದಿನಾಂಕ: 11.06.2025ರ ಬುಧವಾರ ಸಂಜೆ 06:00ಕ್ಕೆ
ಪ್ರತಿಭಾ ಪುರಸ್ಕಾರ
ಅಧ್ಯಕ್ಷತೆ: ಶ್ರೀಯುತ ಕೆ.ಎಸ್. ಈಶ್ವರಪ್ಪನವರು, ಮಾಜಿ ಉಪಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ದಿವ್ಯ ಸಾನಿಧ್ಯ ಮತ್ತು ಆಶೀರ್ವಚನ ಪರಮಪೂಜ್ಯರುಗಳಾದ
ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮಿಗಳು, ಸಿದ್ದಗಿರಿ ಮಠ, ಕೊಲ್ಹಾಪುರ, ಮಹಾರಾಷ್ಟ್ರ
ಶ್ರೀ ಅಮರೇಶ್ವರ ಮಹಾಸ್ವಾಮಿಗಳು, ಕವಲಗುಡ್ಡ ಗುರುಪೀಠ
2024-25ನೇ ಸಾಲಿನಲ್ಲಿ ನಡೆದ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ವಾರ್ಷಿಕ
ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಸುಮಾರು 1500 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ
"ವಿದ್ಯಾ ಪ್ರೋತ್ಸಾಹ ನಿಧಿ" ನೀಡಿ ಸನ್ಮಾನಿಸಲಾಗುವುದು.
ಮುಖ್ಯ ಅತಿಥಿ: ಡಾ. ಮೋಹನ್ ಆಳ್ವ
ಸರ್ವರಿಗೂ ಆದರದ ಸ್ವಾಗತ

ಸೋಮವಾರ, ಜೂನ್ 9, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 159 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪಾವೊಲಿನಿ–ಸಾರಾಗೆ ಕಿರೀಟ



ಇಟಲಿಯ ಜಾಸ್ಮಿನ್ ಪಾವೊಲಿನಿ (ಎಡ) ಮತ್ತು ಸಾರಾ ಎರಾನಿ ಜೋಡಿಯು ಪ್ಯಾರಿಸ್‌ನಲ್ಲಿ ಭಾನುವಾರ ನಡೆದ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಡಬಲ್ಸ್‌ನಲ್ಲಿ ಜಯಿಸಿದ ಟ್ರೋಫಿಯೊಂದಿಗೆ ಸಂಭ್ರಮಿಸಿದರು ಎಪಿ/ಪಿಟಿಐ ಚಿತ್ರ

ವಿದೇಶ ವಿದ್ಯಮಾನ
ಟ್ರಂಪ್ v/s ಮಸ್ಕ್
ಎಫ್‌ಡಿಐ: ಕರ್ನಾಟಕಕ್ಕೆ 2ನೇ ಸ್ಥಾನ 10
28 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' 6
ಬಿಎನ್‌ಪಿಎಂ ಆರ್ಥಿಕ ನೆರವು
ಅಪೌಷ್ಟಿಕ ಮಕ್ಕಳಿಗೆ ಸಿಎಫ್‌ಟಿಆರ್‌ಐ 'ಕಿಟ್' 4

ಮಣಿಪುರ: ಮತ್ತೊಮ್ಮೆ ಉದ್ವಿಗ್ನ ಸ್ಥಿತಿ

ಇಂಫಾಲ್/ನವದೆಹಲಿ: ಮಣಿಪುರದಲ್ಲಿ 2023ರಲ್ಲಿ ಆರಂಭವಾದ ಹಿಂಸಾಚಾರಕ್ಕೆ ಸಂಬಂಧಿಸಿ ಮೈತೇಯಿ ಬಂಡುಕೋರ ಸಂಘಟನೆ 'ಅರಂಬಾಯ್ ಟೆಂಗೋಲ್'ನ ನಾಯಕ ಕನನ್ ಸಿಂಗ್ ಸೇರಿದಂತೆ ಐವರನ್ನು ಬಂಧಿಸಲಾಗಿದೆ. ಈ ಸುದ್ದಿ ತಿಳಿಯುತ್ತಿದ್ದಂತೆಯೇ ಮಣಿಪುರ ಮತ್ತೊಮ್ಮೆ ಉದ್ವಿಗ್ನಗೊಂಡಿದೆ. 7



ಚಿನಕುರುಳಿ

ಪ್ರಕಾಶ್ ಶೆಟ್ಟಿ



ಡಿಪಿಎಆರ್ ಕಾರ್ಯದರ್ಶಿಗೆ ವಿಧಾನಸೌಧ ಭದ್ರತಾ ವಿಭಾಗದ ಡಿಸಿಪಿ ನೀಡಿದ ಅಭಿಪ್ರಾಯ ಬಹಿರಂಗ

ಆತುರದ ಆಯೋಜನೆ ತಂದ ಆಪತ್ತು

ಐಪಿಎಲ್ ಟ್ರೋಫಿ ಗೆದ್ದ ಆರ್‌ಸಿಬಿ ತಂಡಕ್ಕೆ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸನ್ಮಾನ ಕಾರ್ಯಕ್ರಮ ಆತುರವಾಗಿ ನಡೆಸುವುದರಿಂದ ಎದುರಿಸಬೇಕಾದ ಅಪಾಯಗಳು ಮತ್ತು ಸವಾಲುಗಳ ಬಗ್ಗೆ ಎಚ್ಚರಿಕೆ ನೀಡಿ ಜೂನ್ 4ರಂದೇ ವಿಧಾನಸೌಧದ ಭದ್ರತಾ ವಿಭಾಗದ ಡಿಸಿಪಿ ಎಂ.ಎನ್. ಕರಿಬಸವನಗೌಡ ಅವರು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಕಾರ್ಯದರ್ಶಿಗೆ ಸಲ್ಲಿಸಿದ್ದ ವರದಿ ಬಹಿರಂಗಗೊಂಡಿದೆ. ಈ ಘಟನೆಯಲ್ಲಿ ಸರ್ಕಾರದ ತಪ್ಪಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರೆ, ಸರ್ಕಾರದ ಆತುರ ಮತ್ತು ಬೇಜವಾಬ್ದಾರಿಯ ನಿರ್ಧಾರವೇ ಅವಘಡಕ್ಕೆ ಕಾರಣ ಎಂದು ವಿರೋಧ ಪಕ್ಷಗಳು ಹರಿಹಾಯ್ದಿವೆ. ಸಾಮಾಜಿಕ ಜಾಲತಾಣದಲ್ಲಿ ಬಿಸಿ ಬಿಸಿ ಚರ್ಚೆಯೂ ನಡೆದಿದೆ. ಅಲ್ಲದೇ, ಕಾಲ್ತುಳಿತಕ್ಕೆ ಸಂಬಂಧಿಸಿದಂತೆ ರಾಜ್ಯ ಮಾನವ ಹಕ್ಕುಗಳ ಆಯೋಗವೂ ಕೆಎಸ್‌ಸಿಎಯಿಂದ ವರದಿ ಕೇಳಿದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐಪಿಎಲ್ ಟ್ರೋಫಿ ಗೆದ್ದ ಆರ್‌ಸಿಬಿ ತಂಡಕ್ಕೆ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸನ್ಮಾನ ಕಾರ್ಯಕ್ರಮ ಏರ್ಪಡಿಸಿದರೆ ಲಕ್ಷಾಂತರ ಸಂಖ್ಯೆಯಲ್ಲಿ ಅಭಿಮಾನಿಗಳು ಬರಬಹುದು. ಆತುರದಲ್ಲಿ ಆಯೋಜನೆ ಮಾಡಿದರೆ ಬಂದೋಬಸ್ತ್ ಕರ್ತವ್ಯಕ್ಕೆ ತೊಂದರೆಯಾಗಬಹುದು' ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಕಾರ್ಯದರ್ಶಿಗೆ ವಿಧಾನಸೌಧ ಭದ್ರತಾ ವಿಭಾಗದ ಡಿಸಿಪಿ ವರದಿ ನೀಡಿದ್ದರು.

ಐಪಿಎಲ್ ಟ್ರೋಫಿ ಗೆದ್ದರೆ ಆರ್‌ಸಿಬಿ ಆಟಗಾರರನ್ನು ವಿಧಾನಸೌಧದ ಮೆಟ್ಟಿಲುಗಳ ಮೇಲೆ ಮುಖ್ಯಮಂತ್ರಿಯವರ ಉಪಸ್ಥಿತಿಯಲ್ಲಿ ಸನ್ಮಾನಿಸುವ ಕಾರ್ಯಕ್ರಮ ಆಯೋಜಿಸಲು ಅನುಮತಿ ಕೋರಿ ಕೆಎಸ್‌ಸಿಎ ಪತ್ರ ಬರೆದಿತ್ತು. ಈ ವಿಚಾರವಾಗಿ ಅಭಿಪ್ರಾಯ ನೀಡುವಂತೆ ಡಿಸಿಪಿ ಎಂ.ಎನ್. ಕರಿಬಸವನಗೌಡ ಅವರಿಗೆ ಜೂನ್ 3ರಂದು ಡಿಪಿಎಆರ್ (ಕಾರ್ಯಕಾರಿ ವಿಭಾಗ) ಪತ್ರ ಬರೆದಿತ್ತು.

ಜೂನ್ 4ರಂದೇ ಇದಕ್ಕೆ ಉತ್ತರಿಸಿ ಡಿಸಿಪಿ ಅವರು ಬರೆದಿದ್ದ ಪತ್ರ ಸಾಮಾಜಿಕ ಜಾಲತಾಣಗಳಲ್ಲಿ ಬಹಿರಂಗವಾಗಿದೆ.

'ವಿಧಾನಸೌಧ ಕಟ್ಟಡವು ಪಾರಂಪರಿಕ ಕಟ್ಟಡ ಆಗಿರುವುದರಿಂದ ಭದ್ರತೆಗೆ ಯಾವುದೇ ಧಕ್ಕೆ ಆಗದಂತೆ ನಿಯಮಾನುಸಾರ ಕಾರ್ಯಕ್ರಮ ನಡೆಸಲು ಸಮಯಾವಕಾಶದ ಅವಶ್ಯಕತೆ ಇದೆ. ಆದರೂ ಸರ್ಕಾರ ತೆಗೆದುಕೊಳ್ಳುವ ನಿರ್ಣಯದಂತೆ ನಡೆದುಕೊಳ್ಳಲಾಗುವುದು' ಎಂದೂ ತಮ್ಮ ವರದಿಯಲ್ಲಿ ಡಿಸಿಪಿ ವಿವರಿಸಿದ್ದರು.

4ನೇ ಪುಟ ನೋಡಿ

ಕಾಲ್ತುಳಿತ ಪ್ರಕರಣ

ಸಿಐಡಿ ತನಿಖೆ: ಬಂಧಿತರು, ಪೊಲೀಸರ ವಿಚಾರಣೆಗೆ ಸಿದ್ಧತೆ


ಕಾಲ್ತುಳಿತ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ವಿಶೇಷ ತನಿಖಾ ತಂಡ, ಆರೋಪಿಗಳನ್ನು ವಶಕ್ಕೆ ಪಡೆಯಲು ಸಿದ್ಧತೆ ನಡೆಸಿದೆ.

ಎಸ್‌ಐಟಿ ಎಸ್.ಪಿ ಶುಭನ್ವಿತಾ ನೇತೃತ್ವದ ತನಿಖಾ ತಂಡ, ದುರಂತ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಕ್ರೀಡಾಂಗಣದ ಯಾವ ಪ್ರವೇಶ ದ್ವಾರದಲ್ಲಿ ಕಾಲ್ತುಳಿತ ಉಂಟಾಗಿದೆ ಎಂಬುದರ ಬಗ್ಗೆ ಭದ್ರತಾ ಸಿಬ್ಬಂದಿಯಿಂದ ಮಾಹಿತಿ ಸಂಗ್ರಹಿಸಿತು. ಘಟನೆ ಸಂಬಂಧ ಕ್ರೀಡಾಂಗಣದ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಸಂಗ್ರಹಿಸಿದೆ.

ಪ್ರಕರಣದಲ್ಲಿ ಬಂಧಿತರಾಗಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಮಾರ್ಕೆಟಿಂಗ್ ವಿಭಾಗದ ಮುಖ್ಯಸ್ಥ ನಿಖಿಲ್ ಸೋಸಲೆ, ಡಿಎನ್‌ಎ ಎಂಟರ್‌ಟೈನ್‌ಮೆಂಟ್ ಪ್ರೈವೆಟ್ ಲಿಮಿಟೆಡ್‌ನ ವ್ಯವಸ್ಥಾಪಕ ಕಿರಣ್, ಮ್ಯಾನೇಜ್‌ಮೆಂಟ್ ಸಿಬ್ಬಂದಿ ಸುನಿಲ್ ಮ್ಯಾಥ್ಯೂ ಮತ್ತು ಸುಮಂತ್ ಅವರನ್ನು ವಿಚಾರಣೆಗಾಗಿ ವಶಕ್ಕೆ ಪಡೆಯಲು ತನಿಖಾ ತಂಡವು ಸೋಮವಾರ ನ್ಯಾಯಾಲಯಕ್ಕೆ ಮನವಿ ಸಲ್ಲಿಸಲಿದೆ ಎಂದು ಮೂಲಗಳು ತಿಳಿಸಿವೆ.

4ನೇ ಪುಟ ನೋಡಿ

ವಿಧಾನಮಂಡಲ ವಿಶೇಷ ಅಧಿವೇಶನಕ್ಕೆ ಒತ್ತಾಯ



ಆರ್.ಅಶೋಕ

ಕಾಲ್ತುಳಿತ ದುರಂತ ನಡೆಯಲು ಸರ್ಕಾರ ಮಾಡಿರುವ ತಪ್ಪುಗಳು ಕಾರಣ. ಈ ಬಗ್ಗೆ ಸಾರ್ವಜನಿಕರು ಪ್ರಶ್ನೆ ಮಾಡುತ್ತಿದ್ದಾರೆ. ಇದಕ್ಕಾಗಿ ವಿಧಾನಮಂಡಲದ ವಿಶೇಷ ಅಧಿವೇಶನ ಕರೆದು ಚರ್ಚಿಸಬೇಕು ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಅವರು ಒತ್ತಾಯಿಸಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸರ್ಕಾರ ಈಗಾಗಲೇ ಮೂರು ತನಿಖೆಗಳಿಗೆ ಆದೇಶಿಸಿದ್ದು, ಇದರಲ್ಲಿ ಯಾವ ತನಿಖೆ ನೈಜ ಎಂಬುದು ಗೊತ್ತಾಗುತ್ತಿಲ್ಲ. ಹೈಕೋರ್ಟ್‌ನ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಸಬೇಕು ಎಂಬುದು ನಮ್ಮ ಆಗ್ರಹ' ಎಂದು ಹೇಳಿದರು. 'ನಾವು ಬಿಜೆಪಿ ಶಾಸಕರು ನಮ್ಮ ಒಂದು ತಿಂಗಳ ವೇತನವನ್ನು ಸಂತ್ರಸ್ತ ಕುಟುಂಬಕ್ಕೆ ನೀಡಲಿದ್ದೇವೆ. ಸರ್ಕಾರ ದಿವಾಳಿ ಆಗಿಲ್ಲ ಎಂದಾದರೆ ತಲಾ ₹1 ಕೋಟಿ ಪರಿಹಾರ ನೀಡಲಿ' ಎಂದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಶಕ್ತಿ ಪ್ರದರ್ಶನದ ತಿಕ್ಕಾಟ ನಡೆಯದೇ ಇದ್ದಿದ್ದರೆ ಜನರು ಸಾಯುತ್ತಿರಲಿಲ್ಲ. ಸಂತ್ರಸ್ತರ ಕುಟುಂಬಗಳಿಗೆ ಸಾಂತ್ವನ ಹೇಳಬೇಕಿದ್ದವರು ಕಪ್‌ಗೆ ಮುತ್ತಿಡುತ್ತಿದ್ದರು. ಮಧ್ಯಾಹ್ನವೇ ಮೊದಲ ಸಾವು ಸಂಭವಿಸಿದಾಗ ಪೊಲೀಸರು ಮಾಹಿತಿ ನೀಡಿದ್ದರು. ಕಾರ್ಯಕ್ರಮ ಆರಂಭವಾದಾಗಲೇ ಎಂಟು ಮಂದಿ ಸತ್ತಿದ್ದರು. ಆ ನಂತರವೂ ಕಾರ್ಯಕ್ರಮ ಮಾಡುತ್ತಾರೆಂದರೆ ಇವರೆಲ್ಲರೂ ಕಟುಕ ಮತ್ತು ಕಲ್ಲು ಹೃದಯದವರು' ಎಂದರು.

ನಾಗರಿಕ ಸೇವಾ ಕೇಂದ್ರಗಳಲ್ಲಿ ಮಾಹಿತಿ ನೀಡಲು ಅವಕಾಶ

ಪ್ರಜಾವಾಣಿ ವಾರ್ತೆ

ಒಳ ಮೀಸಲು ಸಮೀಕ್ಷೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಲು ನಡೆಯುತ್ತಿರುವ ಸಮೀಕ್ಷೆಯಲ್ಲಿ ಈವರೆಗೂ ಮಾಹಿತಿ ನೀಡದ ಪರಿಶಿಷ್ಟ ಕುಟುಂಬದವರು ನಾಗರಿಕ ಸೇವಾ ಕೇಂದ್ರಗಳಿಗೆ ತೆರಳಿ ಸೋಮವಾರದಿಂದ (ಜೂನ್ 9) ಜೂನ್ 22ರವರೆಗೆ ಮಾಹಿತಿ ನೀಡಬಹುದು ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ನೇತೃತ್ವದ ಏಕ ಸದಸ್ಯ ಆಯೋಗ ತಿಳಿಸಿದೆ.

ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್ ಕೇಂದ್ರಗಳು ಮತ್ತು ಬಾಪೂಜಿ ಸೇವಾ ಕೇಂದ್ರಗಳಲ್ಲಿಯೂ ಸಮೀಕ್ಷೆಗೆ ಅವಕಾಶ ಕಲ್ಪಿಸಲಾಗುವುದು. ಬಿಬಿಎಂಪಿ ವಾರ್ಡ್ ಕಚೇರಿಗಳಲ್ಲಿಯೂ ಪ್ರತ್ಯೇಕ ಶಿಬಿರದ ವ್ಯವಸ್ಥೆ ಮಾಡಲಾಗಿದೆ. ಆನ್‌ಲೈನ್ (https://schedulecastesurvey.karnataka.gov.in/selfdeclaration) ಲಿಂಕ್ ಮೂಲಕವೂ ಈ ಅವಧಿಯಲ್ಲಿ ಸ್ವಯಂ ಘೋಷಣೆ ಮಾಡಿಕೊಳ್ಳಬಹುದು.

ಈ ಕುರಿತಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಪತ್ರ ಬರೆದಿರುವ ಆಯೋಗ, 'ಮೇ 5ರಿಂದ ಜೂನ್ 6ರವರೆಗೆ ನಡೆದ ಸಮೀಕ್ಷೆಯಲ್ಲಿ ರಾಜ್ಯದಾದ್ಯಂತ ಶೇ 90ರಷ್ಟು ಪ್ರಗತಿ ಸಾಧಿಸಲಾಗಿದೆ. ಶಾಲೆಗಳು ಆರಂಭ ಆಗಿರುವುದರಿಂದ, ಶೈಕ್ಷಣಿಕ ಚಟುವಟಿಕೆಗೆ ತೊಂದರೆ ಆಗದಂತೆ ಶಿಕ್ಷಕರನ್ನು ಸಮೀಕ್ಷೆಯ ಕಾರ್ಯದಲ್ಲಿ ಬಳಸಿಕೊಂಡು ಮತ್ತು ಪರ್ಯಾಯ ವ್ಯವಸ್ಥೆ ಮಾಡಿಕೊಂಡು ಶೇಕಡಾ 100ರಷ್ಟು ಪ್ರಗತಿ ಸಾಧಿಸಬೇಕಾಗಿದೆ. ಈ ಬಗ್ಗೆ ಸಂಬಂಧಪಟ್ಟವರಿಗೆ ಅಗತ್ಯ ಸೂಚನೆಗಳನ್ನು ನೀಡಬೇಕು' ಎಂದಿದೆ.

ಸುಹಾಸ್ ಹತ್ಯೆ ತನಿಖೆ ಎನ್‌ಐಎಗೆ



ಸುಹಾಸ್ ಶೆಟ್ಟಿ

ಮಂಗಳೂರು: ಬಜರಂಗದಳ ಕಾರ್ಯಕರ್ತ ಹಾಗೂ ರೌಡಿ ಶೀಟರ್ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವಹಿಸಿ ಕೇಂದ್ರ ಗೃಹ ಸಚಿವಾಲಯ ಶನಿವಾರ ಆದೇಶಿಸಿದೆ.

ಈ ಆದೇಶದ ಪ್ರತಿಯನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ, ಈ ಪ್ರಕರಣದ ತನಿಖೆಯನ್ನು ಎನ್‌ಐಎಗೆ ವಹಿಸಿದ್ದಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಧನ್ಯವಾದ ಸಲ್ಲಿಸಿದ್ದಾರೆ.

ಆದೇಶದಲ್ಲಿ ಏನಿದೆ: ಸುಹಾಸ್ ಶೆಟ್ಟಿ 2025ರ ಮೇ 1ರಂದು ಇತರ ಕೆಲವು ವ್ಯಕ್ತಿಗಳೊಂದಿಗೆ ಕಾರಿನಲ್ಲಿ ತೆರಳುವಾಗ ಸಫ್ವಾನ್ ಮತ್ತು ಇತರ ಎಂಟು ಮಂದಿ ಸೇರಿಕೊಂಡು ಅವರ ಮೇಲೆ ದಾಳಿ ನಡೆಸಿದ್ದು, ಬಳಿಕ ಆಸ್ಪತ್ರೆಯಲ್ಲಿ ಅವರು ಅಸುನೀಗಿದ್ದಾರೆ.

6ನೇ ಪುಟ ನೋಡಿ

ಗಾಯಾಳು ವೆಚ್ಚ ಭರಿಸಿದ ಆರ್‌ಸಿಬಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣ ಬಳಿ ಸಂಭವಿಸಿದ ಕಾಲ್ತುಳಿತದಲ್ಲಿ ಗಾಯಗೊಂಡಿರುವ ಕೆಲವರ ಚಿಕಿತ್ಸೆಯ ವೆಚ್ಚವನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಫ್ರಾಂಚೈಸಿ ಭರಿಸಿದೆ. ಈ ವಿಚಾರವನ್ನು ಗಾಯಾಳುವೊಬ್ಬರ ಸಹೋದರ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ಕಾಲ್ತುಳಿತದಿಂದ ಗಾಯಗೊಂಡು ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದ ಯುವಕನ ಸಹೋದರರೊಬ್ಬರು ಈ ಕುರಿತು ಮಾಹಿತಿ ಹಂಚಿಕೊಂಡಿದ್ದು, 'ನಮಗೆ ಮಣಿಪಾಲ್ ಆಸ್ಪತ್ರೆಯಿಂದ ಕರೆ ಮಾಡಿ ಹಣವನ್ನು ಮರುಪಾವತಿ ಮಾಡಿದ್ದಾರೆ. 2-3 ಆಸ್ಪತ್ರೆಗಳಲ್ಲಿ ಫ್ರಾಂಚೈಸಿ ವತಿಯಿಂದ ಮಾತನಾಡಿ ವ್ಯವಸ್ಥೆ ಕಲ್ಪಿಸಿರುವ ಮಾಹಿತಿ ಲಭ್ಯವಾಗಿದೆ. ಗಾಯಾಳುಗಳು ಚಿಕಿತ್ಸೆ ಪಡೆದಿರುವ ದಾಖಲೆಗಳನ್ನು ನೀಡಿದರೆ ಸಂಪೂರ್ಣ ಚಿಕಿತ್ಸಾ ವೆಚ್ಚವನ್ನು ಮರುಪಾವತಿ ಮಾಡಲಾಗುತ್ತದೆ' ಎಂದು ಹೇಳಿದ್ದಾರೆ.

'ಅವಘಡದಿಂದಾಗಿ ಮೃತಪಟ್ಟವರ ಜೀವಗಳಿಗೆ ಯಾರೂ ಬೆಲೆ ಕಟ್ಟಲು ಸಾಧ್ಯವಿಲ್ಲ. ಅವರ ಕುಟುಂಬಗಳಿಗೆ ದುಃಖ ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸಬೇಕು' ಎಂದು ವಿಡಿಯೊ ಮೂಲಕ ಅವರು ತಿಳಿಸಿದ್ದಾರೆ.

ವಿಡಿಯೊವನ್ನು ಗುರು ಎಂಬುವರು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಆರ್‌ಸಿಬಿ ವಿಜಯೋತ್ಸವ ಸಂದರ್ಭದಲ್ಲಿ ಕಾಲ್ತುಳಿತ ಪ್ರಕರಣ: ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ

ಸಿ.ಎಂ, ಡಿಸಿಎಂ ರಾಜೀನಾಮೆಗೆ ಬಿಜೆಪಿ ಆಗ್ರಹ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಇದು ಸರ್ಕಾರಿ ಪ್ರಾಯೋಜಿತ ಹತ್ಯೆ: ಆರ್.ಅಶೋಕ ಆರೋಪ
- 'ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ವಿರುದ್ಧ ಪ್ರಕರಣ ದಾಖಲಿಸಲಿ'

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವ ಸಂದರ್ಭದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 11 ಮಂದಿಯ ಸಾವಿಗೆ ರಾಜ್ಯ ಸರ್ಕಾರವೇ ಕಾರಣವಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಒತ್ತಾಯಿಸಿದರು.

ಬಿಜೆಪಿ ವತಿಯಿಂದ ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಇದು ಸರ್ಕಾರಿ ಪ್ರಾಯೋಜಿತ ಹತ್ಯೆಯಾಗಿದೆ. ಆದ್ದರಿಂದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ವಿರುದ್ಧ ಪ್ರಕರಣ ದಾಖಲಿಸಬೇಕು ಎಂದು ಆಗ್ರಹಿಸಿದರು.

'ಜೂನ್ 4 ರಂದು ವಿಧಾನಸೌಧದ ಡಿಸಿಪಿಯವರು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದಿದ್ದು ಆತುರದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ, ಸಿಬ್ಬಂದಿ ಕೊರತೆ ಇರುವುದರಿಂದ ಬಂದೋಬಸ್ತ್‌ಗೆ ತೊಂದರೆ ಆಗಲಿದೆ ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಆದರೆ, ಮುಖ್ಯಕಾರ್ಯದರ್ಶಿ ಅವರಿಂದ ಹಿಡಿದು ಎಲ್ಲರೂ ಇದನ್ನು ನಿರ್ಲಕ್ಷಿಸಿದ್ದಾರೆ' ಎಂದು ಅಶೋಕ ಕಿಡಿಕಾರಿದರು.

'ಇಲಾಖೆ ಸಿಬ್ಬಂದಿ ಮತ್ತು ಕುಟುಂಬದವರು ಬರಬಾರದು ಎಂದು ಕೂಡ ಪೊಲೀಸರು ಸೂಚಿಸಿದ್ದರು. ಆದರೆ, ಅಲ್ಲಿ ಎಲ್ಲರ ಕುಟುಂಬದವರು ಇದ್ದರು. ಸಿಸಿಟಿವಿ ಕ್ಯಾಮೆರಾ ಬೇಕೆಂದು ಹೇಳಿದ್ದರೂ ಅದನ್ನು ಪಾಲಿಸಿಲ್ಲ ಡ್ರೋನ್‌ಗೆ ಅವಕಾಶ ಇಲ್ಲ ಎಂದೂ ಹೇಳಲಾಗಿದೆ. ಎಲ್ಲಾ ಸೂಚನೆಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರಲಾಗಿದೆ' ಎಂದರು.



ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಬಿಜೆಪಿ ನಾಯಕರು ಭಾನುವಾರ ಪ್ರತಿಭಟನೆ ನಡೆಸಿದರು

'ವೇದಿಕೆಯಲ್ಲಿ 20 ರಿಂದ 30 ಜನರು ಮಾತ್ರ ಇರಬೇಕು ಎಂಬ ಸೂಚನೆಯನ್ನು ಉಲ್ಲಂಘಿಸಲಾಗಿದೆ. 11 ಆಟಗಾರರ ಸೇರಿ ಒಟ್ಟು 200 ಜನರು ವೇದಿಕೆಯಲ್ಲಿದ್ದರು. ಇದು ಸರ್ಕಾರಿ ಕಾರ್ಯಕ್ರಮ ಎಂದು ಆದೇಶ ತಿದ್ದಲಾಗಿದ್ದರೂ, ಸಿದ್ದರಾಮಯ್ಯ ಅವರು ಸರ್ಕಾರಿ ಕಾರ್ಯಕ್ರಮ ಅಲ್ಲ ಎಂದಿದ್ದಾರೆ' ಎಂದು ಅಶೋಕ ದೂರಿದರು.

'ಇಲ್ಲಿ ಕಾನೂನು ಉಲ್ಲಂಘನೆ ಮಾಡಿದ್ದಾರೆ, ಕೊನೆಗೆ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ರಸ್ತೆಯಲ್ಲಿ ನಿಂತು ಸಂಚಾರ ನಿಯಂತ್ರಿಸುತ್ತಿದ್ದ ಪೊಲೀಸರ ವಿರುದ್ಧ ಕ್ರಮಕೈಗೊಳ್ಳಲಾಗಿದೆ. ಠಾಣೆ ಪೊಲೀಸರನ್ನು ಕೂಡ ಅಮಾನತು ಮಾಡಿದ್ದಾರೆ' ಎಂದು ಹೇಳಿದರು.

'ಕಪ್ ಗೆಲ್ಲುವುದು ಹೊಸ ಸಂಗತಿಯಲ್ಲ. ಪ್ರತಿ ರಾಜ್ಯಗಳ ತಂಡ ಕಪ್ ಗೆದ್ದಾಗಲೂ ಈ ರೀತಿಯ ಘಟನೆ ನಡೆದಿಲ್ಲ. ಯಾವುದೇ ರಾಜ್ಯದಲ್ಲಿ ಮುಖ್ಯಮಂತ್ರಿಗಳು ಹೋಗಿ ಪ್ರಚಾರ ಪಡೆದಿಲ್ಲ' ಎಂದು ಅಶೋಕ ಹೇಳಿದರು.

'ಐಪಿಎಲ್ ನಿಷೇಧಿಸಿ'

ಬೆಂಗಳೂರು: ಕೇವಲ ಕ್ರೀಡೆಯಾಗಿ ಉಳಿಯದೇ ಬೆಟ್ಟಿಂಗ್ ದಂಧೆಯಾಗಿರುವ ಐಪಿಎಲ್ ಅನ್ನು ಸರ್ಕಾರ ನಿಷೇಧಿಸಬೇಕು ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಉಪಾಧ್ಯಕ್ಷ ರಘು ಜಾಣಗೆರೆ ಆಗ್ರಹಿಸಿದರು.

ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಕಾಲ್ತುಳಿತದಿಂದ ಮೃತಪಟ್ಟವರಿಗೆ ಕೆಆರ್‌ಎಸ್ ಪಕ್ಷ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡಿ, 'ಮುಖ್ಯಮಂತ್ರಿ, ಸಚಿವರ ಮಕ್ಕಳು ಕ್ರಿಕೆಟ್ ತಾರೆಯರೊಂದಿಗೆ ಫೋಟೋಶೂಟ್ ನಡೆಸಲು ಮಾಡಿದ ಕಾರ್ಯಕ್ರಮ ಇದಾಗಿತ್ತು' ಎಂದರು.

ಕಬ್ಬನ್ ಪಾರ್ಕ್‌ನಲ್ಲಿ ಗಿಡ, ಮರಗಳಿಗೆ ಹಾನಿ: ಠಾಣೆಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಸಿಬಿ ತಂಡದ ವಿಜಯೋತ್ಸವ ವೇಳೆ ಉಂಟಾದ ಕಾಲ್ತುಳಿತದಿಂದ ಕಬ್ಬನ್ ಪಾರ್ಕ್‌ನ ಗಿಡ, ಮರಗಳಿಗೂ ಹಾನಿ ಉಂಟಾಗಿದ್ದು, ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಕಬ್ಬನ್‌ಪಾರ್ಕ್ ನಡಿಗೆದಾರರ ಸಂಘವು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ದೂರು ನೀಡಿದೆ.

'ಆರ್‌ಸಿಬಿ ವಿಜಯೋತ್ಸವದ ಅಂಗವಾಗಿ ವಿಧಾನಸೌಧ ಹಾಗೂ ಕ್ರೀಡಾಂಗಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಿದ್ದರು. ಆದರೆ, ಸರ್ಕಾರ ಸೂಕ್ತ ಕ್ರಮ ಕೈಗೊಳ್ಳದ ಕಾರಣ ಉದ್ಯಾನಕ್ಕೆ ನುಗ್ಗಿದ ಜನರು, ಗಿಡಗಳನ್ನು ತುಳಿದು ಹಾಕಿ, ಮರದ ರೆಂಬೆಗಳನ್ನು ಮುರಿದು ಹಾಕಿದ್ದಾರೆ. ಬೇಲಿಯನ್ನು ಕಿತ್ತು ಹಾಕಿದ್ದಾರೆ' ಎಂದು ಸಂಘದ ಅಧ್ಯಕ್ಷ ಎಸ್. ಉಮೇಶ್ ಸಲ್ಲಿಸಿರುವ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಕಬ್ಬನ್ ಉದ್ಯಾನದಲ್ಲಿ ಆಗಿರುವ ಹಾನಿಯ ಬಗ್ಗೆ ಈವರೆಗೂ ಅಂದಾಜು ಮಾಡಿಲ್ಲ. ಉದ್ಯಾನ ರಕ್ಷಣೆ ಮಾಡುವ ಬದಲು ಹಾಳು ಮಾಡಲಾಗಿದೆ. ಹಾಗಾಗಿ ರಾಜ್ಯ ಸರ್ಕಾರ, ಕೆಎಸ್‌ಸಿಎ, ಡಿಎನ್‌ಎ ಎಂಟರ್‌ಟೈನ್‌ಮೆಂಟ್ ಪ್ರೈವೇಟ್ ಲಿಮಿಟೆಡ್, ಆರ್‌ಸಿಬಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಹಾನಿಗೆ ಸಂಬಂಧಿಸಿದಂತೆ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಚಿತ್ರಗಳು, ವರದಿಗಳನ್ನು ಒಳಗೊಂಡ ಸಿ.ಡಿ ಅನ್ನು ಲಗತ್ತಿಸಲಾಗಿದೆ ಎಂದು ಹೇಳಿದ್ದಾರೆ.

ಬಿಎಂಟಿಸಿ ಬಸ್ ಡಿಕ್ಕಿ: ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬಿಎಂಟಿಸಿ ಬಸ್ ಡಿಕ್ಕಿಯಾಗಿ ದ್ವಿಚಕ್ರ ವಾಹನ ಸವಾರ ಮೃತಪಟ್ಟು, ಮೂವರು ಗಾಯಗೊಂಡಿರುವ ಘಟನೆ ಹೆಬ್ಬಾಳದ ವರ್ತುಲ ರಸ್ತೆಯ ಕಲ್ಯಾಣ ನಗರದ ಬಳಿ ಭಾನುವಾರ ನಡೆದಿದೆ.

ವೈಟ್‌ಫೀಲ್ಡ್‌ನ ಹೂಡಿ ನಿವಾಸಿ ಮೊಹಮ್ಮದ್ ಜಮ್ಷೀರ್ (42) ಮೃತ ವ್ಯಕ್ತಿ. ಇವರು ಸ್ವಂತ ಗ್ಯಾರೇಜ್ ನಡೆಸುತ್ತಿದ್ದರು. ಮಹದೇವಪುರದ ಕಾವೇರಿ ನಗರದಿಂದ ಡಿ.ಜೆ ಹಳ್ಳಿಯಲ್ಲಿರುವ ಅತ್ತೆ ಮನೆಗೆ ಪತ್ನಿ ಹಾಗೂ ಇಬ್ಬರು ಮಕ್ಕಳೊಂದಿಗೆ ಬೆಳಿಗ್ಗೆ 11 ಗಂಟೆ ಸಮಯದಲ್ಲಿ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ವೇಳೆ ವೇಗವಾಗಿ ಬಂದ ಬಸ್ ಡಿಕ್ಕಿ ಹೊಡೆದಿದೆ. ಕೆಳಗೆ ಬಿದ್ದ ಜಮ್ಷೀರ್ ಅವರ ತಲೆ ಮೇಲೆ ಬಸ್ ಚಕ್ರಗಳು ಹರಿದಿವೆ.

ಕೆಳಗೆ ಬಿದ್ದ ಪತ್ನಿ ಆಯಿಷಾ ಅವರ ಬಲಗೈ ಹಾಗೂ ಕಾಲು ಮುರಿದಿದೆ. ಮಕ್ಕಳಾದ ಅಫೀಯಾ (1.5 ವರ್ಷ) ಮತ್ತು ಅಲೀಜಾ (4 ವರ್ಷ) ಅವರ ಕೈ, ಕಾಲಿಗೂ ಪೆಟ್ಟು ಬಿದ್ದಿದೆ. ಮೂವರಿಗೆ ಅಂಬೇಡ್ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಜಮ್ಷೀರ್ ಅವರ ಮರಣೋತ್ತರ ಪರೀಕ್ಷೆ ನಡೆಸಿ, ವಾರಸುದಾರರಿಗೆ ನೀಡಲಾಯಿತು. ಬಾಣಸವಾಡಿ ಠಾಣೆ ಸಂಚಾರ ಪೊಲೀಸರು ಬಿಎಂಟಿಸಿ ಬಸ್ ಚಾಲಕನನ್ನು ಬಂಧಿಸಿ, ಬಸ್ ವಶಕ್ಕೆ ಪಡೆದುಕೊಂಡು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಚೀಟಿ ವ್ಯವಹಾರ: ಹಣದ ಜತೆಗೆ ದಂಪತಿ ಪರಾರಿ

ಚೀಟಿ ವ್ಯವಹಾರ ನಡೆಸುತ್ತಿದ್ದ ದಂಪತಿ, ಲಕ್ಷಾಂತರ ರೂಪಾಯಿ ತೆಗೆದುಕೊಂಡು ರಾತ್ರೋರಾತ್ರಿ ಮನೆ ಖಾಲಿ ಮಾಡಿರುವ ಘಟನೆ ಪುಟ್ಟೇನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಜರಗನಹಳ್ಳಿಯ ಸಂತ್ರಸ್ತೆ ಪುಷ್ಪಲತಾ ಅವರ ದೂರು ಆಧರಿಸಿ, ಸುಧಾ, ಸಿದ್ದಾಚಾರಿ, ಯಶವಂತ್, ವರ್ಷಿಣಿ ವಿರುದ್ಧ ಪೊಲೀಸರು, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಜರಗನಹಳ್ಳಿಯ ಸುಧಾ, ಸಿದ್ದಾಚಾರಿ ದಂಪತಿ ಚೀಟಿ ವ್ಯವಹಾರ ನಡೆಸುತ್ತಿದ್ದರು. ₹ 5 ಲಕ್ಷದ ಚೀಟಿಗೆ ತಿಂಗಳಿಗೆ ₹12,500 ಮತ್ತು ₹10 ಲಕ್ಷದ ಚೀಟಿಗೆ ₹25 ಸಾವಿರ ಕಟ್ಟಿಸಿಕೊಳ್ಳುತ್ತಿದ್ದರು. ಬಡಾವಣೆಯ ಜನರ ವಿಶ್ವಾಸ ಗಳಿಸಿದ್ದರು. ಅದೇ ನಂಬಿಕೆ ಮೇಲೆ ಹಲವರು ಕಷ್ಟ ಕಾಲಕ್ಕೆ ಸಹಾಯವಾಗಲಿದೆ ಎಂಬ ಕಾರಣಕ್ಕೆ ಚೀಟಿಗೆ ಹಣ ಕಟುತ್ತಿದ್ದರು.

ಜೂನ್ 3ರ ರಾತ್ರಿ ಮಕ್ಕಳೊಂದಿಗೆ ದಂಪತಿ ಮನೆ ಬಿಟ್ಟು ಹೋಗಿದ್ದು, ಹಲವರು ಪುಟ್ಟೇನಹಳ್ಳಿ ಠಾಣೆಗೆ ದೂರು ನೀಡಿದ್ದಾರೆ. ದಂಪತಿ ವಿರುದ್ಧ ವಂಚನೆ ಪ್ರಕರಣ ದಾಖಲಾಗಿದೆ.

ಚಾಲಕನಿಗೆ ಚಾಕು ಇರಿತ

ಮದ್ಯ ಸೇವಿಸಿ ಗಲಾಟೆ ಮಾಡುತ್ತಿದ್ದ ಟೆಕಿಯೊಬ್ಬ ಆಟೊ ಚಾಲಕನಿಗೆ ಚಾಕುವಿನಿಂದ ಹಲ್ಲೆ ನಡೆಸಿರುವ ಘಟನೆ ಗೋವಿಂದಪುರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಕಮ್ಮನಹಳ್ಳಿ ನಿವಾಸಿ ಆಟೊ ಚಾಲಕ ರಾಮ್ ಕುಮಾರ್ ಹಲ್ಲೆಗೊಳಗಾಗಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ತೆರಳಿದ್ದಾರೆ. ಗಲಾಟೆಯಲ್ಲಿ ಗಾಯಗೊಂಡಿದ್ದ ಟೆಕಿ ವಿಷ್ಣು ಸಹ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ಹೆಣ್ಣೂರು ಜಂಕ್ಷನ್‌ನಲ್ಲಿ ತಡರಾತ್ರಿ 1 ಗಂಟೆ ಸುಮಾರಿಗೆ ವಿಷ್ಣು ಅವರು ಮದ್ಯದ ಅಮಲಿನಲ್ಲಿ ಗಲಾಟೆ ಮಾಡುತ್ತಿದ್ದರು. ಅಲ್ಲಿಗೆ ಬಂದ ಹೊಯ್ಸಳ ಪೊಲೀಸರು ಅವರನ್ನು ಹಿಡಿಯಲು ಯತ್ನಿಸಿದ್ದಾರೆ. ಅಲ್ಲಿಯೇ ಇದ್ದ ರಾಮ್ ಕುಮಾರ್, ಆರೋಪಿ ಹಿಡಿಯಲು ಪೊಲೀಸರಿಗೆ ನೆರವಾದರು. ಆಗ ಆರೋಪಿ ತನ್ನ ಬಳಿಯಿದ್ದ ಚಾಕುವಿನಿಂದ ರಾಮ್‌ಕುಮಾರ್‌ಗೆ ಇರಿದ ಪರಿಣಾಮ, ಹೊಟ್ಟೆ ಭಾಗದಲ್ಲಿ ಸಣ್ಣಪ್ರಮಾಣದಲ್ಲಿ ಗಾಯವಾಗಿದೆ.

ಈ ಬಗ್ಗೆ ರಾಮ್‌ಕುಮಾರ್ ದೂರು ಆಧರಿಸಿ, ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಮನೆಯ ಟೆರೇಸ್‌ನಿಂದ ಬಿದ್ದು ನೌಕರ ಸಾವು

ಮದ್ಯ ಸೇವಿಸುತ್ತಿದ್ದ ಖಾಸಗಿ ಕಂಪನಿ ನೌಕರರೊಬ್ಬರು ತಮ್ಮ ಮನೆಯ ಟೆರೇಸ್ ಮೇಲಿಂದ ಕೆಳಗೆ ಬಿದ್ದು ಮೃತಪಟ್ಟಿರುವ ಘಟನೆ ಶನಿವಾರ ರಾತ್ರಿ ಜ್ಞಾನಭಾರತಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಮಲ್ಲತ್ತಹಳ್ಳಿ ಕದಂಬ ಲೇಔಟ್‌ನ ನಿವಾಸಿ ಮಂಜುನಾಥ್ (36) ಮೃತರು. ರಾತ್ರಿ 11.30ರ ಸುಮಾರಿಗೆ ಮನೆಯ ಟೆರೇಸ್ ಮೇಲೆ ಕುಳಿತು ಮದ್ಯ ಸೇವಿಸಿದರು. ಸ್ವಲ್ಪ ಹೊತ್ತಿನ ಬಳಿಕ ಇಳಿದು ಬರುವಾಗ ಆಯತಪ್ಪಿ ಬಿದ್ದು, ತೀವ್ರವಾಗಿ ಗಾಯಗೊಂಡರು.

ಶಬ್ದ ಕೇಳಿ ಬಂದ ಕುಟುಂಬದ ಸದಸ್ಯರು ಅವರನ್ನು ಆಸ್ಪತ್ರೆಗೆ ಕರೆದೊಯ್ದುರು. ಪರೀಕ್ಷಿಸಿದ ವೈದ್ಯರು, ಮಾರ್ಗಮಧ್ಯೆ ಮೃತಪಟ್ಟಿರುವುದನ್ನು ದೃಢಪಡಿಸಿದರು.

ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ನೀಡಲಾಯಿತು. ಜ್ಞಾನಭಾರತಿ ಠಾಣೆ ಪೊಲೀಸರು, ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನಕಲಿ ಕೀ ಬಳಸಿ ಚಿನ್ನಾಭರಣ ಕಳವು

ಅಪರಾಧ ಸುದ್ದಿ

ಬೆಂಗಳೂರು: ಬಕ್ರಿದ್ ಹಬ್ಬದ ಪ್ರಯುಕ್ತ ಮನೆಗೆ ಬೀಗ ಹಾಕಿ ಕುಟುಂಬ ಸಮೇತ ಹೊರಗೆ ಹೋಗಿದ್ದ ವೇಳೆ ನಕಲಿ ಕೀ ಬಳಸಿ ಕಳ್ಳರು ನಗದು ಸೇರಿ ₹1.25 ಲಕ್ಷ ಮೌಲ್ಯದ ಚಿನ್ನಾಭರಣ ದೋಚಿರುವ ಘಟನೆ ಡಿ.ಜೆ.ಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಎಂಎಂ ಲೇಔಟ್ ನಿವಾಸಿ ಶಹತಾಜ್ ಬೇಗಂ ಅವರು ಹಬ್ಬದ ಪ್ರಯುಕ್ತ ಮನೆಗೆ ಬೀಗ ಹಾಕಿ ಎಲ್ಲರೂ ಹೊರಗೆ ಹೋಗಿದ್ದರು. ಸಂಜೆ ಮನೆಗೆ ಬಂದು ನೋಡಿದಾಗ ಕಳ್ಳತನವಾಗಿರುವುದು ಗೊತ್ತಾಗಿದೆ.

'ಮನೆಯಲ್ಲಿ ಪರಿಶೀಲನೆ ನಡೆಸಿದಾಗ ಕಳ್ಳರು ನಕಲಿ ಕೀ ಬಳಸಿ ಬೀಗ ತೆಗೆದು, ಬೀರುವಿನಲ್ಲಿದ್ದ ನಗದು, ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ' ಎಂದು ಶಹತಾಜ್ ಅವರು ದೂರು ನೀಡಿದ್ದಾರೆ.

ಡಿ.ಜಿ. ಹಳ್ಳಿ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಆರೋಪಿ ಬಂಧನಕ್ಕೆ ಶೋಧ ನಡೆಸುತ್ತಿದ್ದಾರೆ.

ಬೆಂಗಳೂರು ನಗರ ವಿ.ವಿ ಘಟಿಕೋತ್ಸವ 11ಕ್ಕೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ನಾಲ್ಕನೇ ಘಟಿಕೋತ್ಸವ ಜೂನ್ 11ರಂದು ಬೆಳಿಗ್ಗೆ 11 ಗಂಟೆಗೆ ಅರಮನೆ ರಸ್ತೆಯ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿದೆ.

ಘಟಿಕೋತ್ಸವದ ಅಧ್ಯಕ್ಷತೆಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ವಹಿಸಲಿದ್ದಾರೆ. ಬಿಹಾರ ಹೈಕೋರ್ಟ್‌ನ ನ್ಯಾಯಮೂರ್ತಿ ಪಿ.ಬಿ ಭಜಂತ್ರಿ ಮುಖ್ಯ ಅತಿಥಿಯಾಗಿ ಭಾಗವಹಿಸಲ್ಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ ಸುಧಾಕರ್, ಪ್ರಭಾರ ಕುಲಪತಿ ಪ್ರೊ ಕೆ.ಆರ್. ಜಲಜಾ ಪಾಲ್ಗೊಳ್ಳಲಿದ್ದಾರೆ ಎಂದು ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರಣಿ ಸಭೆ ನಡೆಸಿದ ಕಮಿಷನರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ನೂತನ ಪೊಲೀಸ್ ಕಮಿಷನರ್ ಆಗಿ ಸೀಮಂತ್ ಕುಮಾರ್ ಸಿಂಗ್ ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ಭಾನುವಾರ ಅಧಿಕಾರಿಗಳ ಸರಣಿ ಸಭೆ ನಡೆಸಿದರು.



ಸೀಮಂತ್ ಕುಮಾರ್ ಸಿಂಗ್


ಬೆಳಿಗ್ಗೆಯಿಂದ ಕಚೇರಿ ಆಡಳಿತ ವಿಭಾಗದ ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿದ ಕಮಿಷನರ್, ಮಧ್ಯಾಹ್ನದ ಬಳಿಕ ಸಂಚಾರ ವಿಭಾಗ, ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ, ಎಸಿಪಿ ಮತ್ತು ಇನ್‌ಸ್ಪೆಕ್ಟರ್ ಹಂತದ ಅಧಿಕಾರಿಗಳ ಸಭೆ ನಡೆಸಿದರು.

ಸಭೆಯಲ್ಲಿ ರಿಯಲ್ ಎಸ್ಟೇಟ್, ರೌಡಿಶೀಟರ್‌ಗಳು, ಕಾನೂನುಬಾಹಿರ ಚಟುವಟಿಕೆ ನಡೆಸುವವರು, ಸೈಬರ್ ವಂಚಕರು, ಮಾದಕ ವಸ್ತು ಮಾರಾಟಗಾರರ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕು. ಜತೆಗೆ ರಿಯಲ್ ಎಸ್ಟೇಟ್ ಏಜೆಂಟ್ ರೀತಿ ಕೆಲಸ ಮಾಡಿದರೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ಬಳಿಕ ಮಾಧ್ಯಮಗಳ ಜತೆ ಮಾತನಾಡಿದ ಸೀಮಂತ್ ಕುಮಾರ್ ಸಿಂಗ್, 'ರೌಡಿ, ಮಟ್ಕಾ, ಬೆಟ್ಟಿಂಗ್, ಮಾದಕ ವಸ್ತು ಮಾರಾಟ ನಿಯಂತ್ರಿಸಲು ಸೂಚಿಸಲಾಗಿದೆ. ಪೊಲೀಸರಿಗೆ ಸಾರ್ವಜನಿಕರ ಜತೆಗೆ ಉತ್ತಮ ಸಂಬಂಧ ಇರಬೇಕು. ಇನ್ನು ಕೆಲವು ಹೊಸ ಠಾಣೆ ಬೆಂಗಳೂರು ನಗರಕ್ಕೆ ಸೇರಿಸಲಾಗಿದೆ. ಅಂತಹ ಠಾಣೆಗಳಿಗೆ ಹೆಚ್ಚುವರಿ ಅಧಿಕಾರಿ-ಸಿಬ್ಬಂದಿ ನೀಡಲಾಗುವುದು' ಎಂದರು.

ನಿಧನ ವಾರ್ತೆ

ಎಚ್.ವಿ.ನಾಗರಾಜು




ಬೆಂಗಳೂರು: ಬಸವೇಶ್ವರ ನಗರದ ನಿವಾಸಿ, ನಿವೃತ್ತ ಖಜಾನೆ ಅಧಿಕಾರಿ ಎಚ್.ವಿ.ನಾಗರಾಜು(78) ಶನಿವಾರ ನಿಧನರಾದರು. ಮೃತರಿಗೆ ಪತ್ನಿ ಮತ್ತು ಇಬ್ಬರು ಪುತ್ರರಿದ್ದಾರೆ. ಸೋಮವಾರ ಬೆಳಿಗ್ಗೆ 10 ಗಂಟೆಗೆ ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಅಂದಾಜು ವೆಚ್ಚ ಅಧಿಕವಾಗಲು ಕಾರಣವೇನು ಎಂದು ಕೇಳಿದ ವಸತಿ, ನಗರ ವ್ಯವಹಾರಗಳ ಸಚಿವಾಲಯ

ಕೆಂಪು ಮಾರ್ಗ: ಅನುಮತಿ ನೀಡದ ಕೇಂದ್ರ

ಪ್ರಜಾವಾಣಿ ವಾರ್ತೆ



'ನಮ್ಮ ಮೆಟ್ರೊ' ಕೆಂಪು ಮಾರ್ಗ

ಬೆಂಗಳೂರು: 'ನಮ್ಮ ಮೆಟ್ರೊ'ದ ಸರ್ಜಾಪುರ-ಹೆಬ್ಬಾಳ ಮಾರ್ಗಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಿ ಆರು ತಿಂಗಳು ಕಳೆದರೂ ಕೇಂದ್ರ ಸರ್ಕಾರ ಇನ್ನೂ ಅನುಮತಿ ನೀಡಿಲ್ಲ. ಈ ಮಧ್ಯೆ ಯೋಜನೆಯ ಅಂದಾಜು ವೆಚ್ಚ ಏಕೆ ಅಧಿಕವಾಗಿದೆ ಎಂಬ ಬಗ್ಗೆ ವಿವರ ನೀಡುವಂತೆ ಬಿಎಂಆರ್‌ಸಿಎಲ್‌ಗೆ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಸೂಚನೆ ನೀಡಿದೆ.

ಸರ್ಜಾಪುರ- ಹೆಬ್ಬಾಳದವರೆಗೆ 36.59 ಕಿ.ಮೀ ಉದ್ದದ 'ಕೆಂಪು' ಮಾರ್ಗವು 22.14 ಕಿ.ಮೀ. ಎತ್ತರಿಸಿದ ಮಾರ್ಗ, 14.45 ಕಿ.ಮೀ. ಸುರಂಗ ಮಾರ್ಗ ಒಳಗೊಂಡಿದೆ. ಎತ್ತರಿಸಿದ ಮಾರ್ಗದಲ್ಲಿ 17 ನಿಲ್ದಾಣ, ಸುರಂಗ ಮಾರ್ಗದಲ್ಲಿ 11 ನಿಲ್ದಾಣಗಳು ಇರಲಿವೆ. ₹ 28,405 ಕೋಟಿ ಅಂದಾಜು ವೆಚ್ಚ ಅಂದರೆ ಪ್ರತಿ ಕಿಲೋ ಮೀಟರ್‌ಗೆ ₹776.3 ಕೋಟಿ ಎಂದು ವಿಸ್ತೃತ ಯೋಜನಾ ವರದಿಯಲ್ಲಿ ತಿಳಿಸಲಾಗಿತ್ತು.

ಕೇಂದ್ರ ಸರ್ಕಾರದ ಸಾಲ, ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆದ ನಂತರ ಸಿವಿಲ್ ಕಾಮಗಾರಿ ಆರಂಭಿಸಲು ರಾಜ್ಯ ಸರ್ಕಾರವು 2024ರ ಡಿಸೆಂಬರ್ 6ರಂದು ಒಪ್ಪಿಗೆ ನೀಡಿತ್ತು. ಆ ನಂತರ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಕೇಂದ್ರ ಸರ್ಕಾರದಿಂದ ಆರು ತಿಂಗಳ ಒಳಗೆ ಒಪ್ಪಿಗೆ ಸಿಗುವ ನಿರೀಕ್ಷೆಯಲ್ಲಿ ಬಿಎಂಆರ್‌ಸಿಎಲ್ ಇತ್ತು. ಆದರೆ, 'ನಿಗದಿತ ಮಾನದಂಡಕ್ಕಿಂತ ಇದು ಅಧಿಕವಾಗಿದೆ. ಈ ಬಗ್ಗೆ ಪರಿಶೀಲಿಸಿ ವರದಿ ನೀಡಿ' ಎಂದು ಕೇಂದ್ರ ಸರ್ಕಾರ ಸೂಚಿಸಿರುವುದರಿಂದ ಒಪ್ಪಿಗೆ ಸಿಗುವುದು ಇನ್ನಷ್ಟು ತಡವಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

'ನಿರ್ಮಾಣ ಹಂತದಲ್ಲಿರುವ ಕಾಳೇನ ಅಗ್ರಹಾರ- ನಾಗವಾರ ನಡುವಿನ ಗುಲಾಬಿ ಮಾರ್ಗವನ್ನು ಮಾನದಂಡವಾಗಿ ಇಟ್ಟುಕೊಂಡು ಕೆಂಪು ಮಾರ್ಗಕ್ಕೆ ಅಂದಾಜು ವೆಚ್ಚ ತಯಾರಿಸಲಾಗಿತ್ತು. ಇನ್ನು ಸ್ವತಂತ್ರ ಸಲಹಾ ಸಮಿತಿ ನೇಮಕ ಮಾಡಿ ಅವರು ನೀಡುವ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕು. ಈ ಪ್ರಕ್ರಿಯೆಗಳು ಮೂರು ತಿಂಗಳಲ್ಲಿ ನಡೆಯಲಿವೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ನಗರದ ಹೊರಗೆ ಮೆಟ್ರೊ ಕಾಮಗಾರಿ ನಡೆಸುವುದಕ್ಕೂ ನಗರದ ಒಳಗೆ ಕಾಮಗಾರಿ ನಡೆಸುವುದಕ್ಕೂ ಬಹಳ ವ್ಯತ್ಯಾಸವಿದೆ. ಅದರಲ್ಲೂ ನಗರ ದೊಳಗೆ 11 ಕಿ.ಮೀ. ಸುರಂಗ ಮಾರ್ಗ ನಿರ್ಮಿಸಲು ಭಾರಿ ವೆಚ್ಚವಾಗುತ್ತದೆ. ಭೂಸ್ವಾಧೀನ, ಮಾರ್ಗ ರಚನೆ, ಹಳಿ ಜೋಡಣೆ, ನಿಲ್ದಾಣದ ಕಟ್ಟಡಗಳ ನಿರ್ಮಾಣ, ವಿದ್ಯುತ್ ಸರಬರಾಜು ವ್ಯವಸ್ಥೆ, ಸಿಗ್ನಲಿಂಗ್, ದೂರಸಂಪರ್ಕ, ಡಿಪೊಗಳು, ರೈಲು ಕೋಚ್ ಪೂರೈಕೆ ಹೀಗೆ ಒಟ್ಟು 13 ಅಂಶಗಳನ್ನು ಪರಿಗಣಿಸಿ ಅಂದಾಜು ವೆಚ್ಚವನ್ನು ತಯಾರಿಸಲಾಗಿದೆ.

ಸುರಂಗ ಮಾರ್ಗದಲ್ಲಿ ನಿರ್ಮಿಸುವ ಮೆಟ್ರೊ ನಿಲ್ದಾಣಗಳು ಎತ್ತರಿಸಿದ ಮಾರ್ಗದ ಮೇಲೆ ನಿರ್ಮಿಸುವ ನಿಲ್ದಾಣಗಳಿಗಿಂತ 10 ಪಟ್ಟು ಅಧಿಕ ಶಕ್ತಿಯುತವಾಗಿರಬೇಕಾಗುತ್ತದೆ. ಆರು ಕೋಚ್‌ಗಳ ರೈಲು ನಿಲುಗಡೆಗೆ ಸುರಂಗ ಮಾರ್ಗದಲ್ಲಿ 240-265 ಮೀಟರ್ ಉದ್ದದ ನಿಲ್ದಾಣ ನಿರ್ಮಿಸಲಾಗುತ್ತದೆ. ಅದೇ ಅಂದಾಜನ್ನು ಕೆಂಪು ಮಾರ್ಗದಲ್ಲಿಯೂ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಮುಖ್ಯಾಂಶಗಳು

- ಸಿವಿಲ್ ಕಾಮಗಾರಿ ನಡೆಸಲು ಡಿ.6ರಂದು ಒಪ್ಪಿಗೆ ನೀಡಿದ್ದ ರಾಜ್ಯ ಸರ್ಕಾರ
- ಸುರಂಗ ಮಾರ್ಗ ನಿರ್ಮಿಸಲು ಭಾರಿ ವೆಚ್ಚ
- ಮೂರು ತಿಂಗಳೊಳಗೆ ವರದಿ ನೀಡಲಿರುವ ಸ್ವತಂತ್ರ ಸಮಿತಿ



ಕೆಂಪು ಮಾರ್ಗದ ನಿರ್ಮಾಣಕ್ಕಾಗಿ ತಯಾರಿಸಿದ ಅಂದಾಜು ವೆಚ್ಚ ಯಾಕೆ ಹೆಚ್ಚಿದೆ ಎಂದು ಕೇಂದ್ರ ಸರ್ಕಾರ ಕೇಳಿದೆ. ಅದಕ್ಕೆ ಕಾರಣ ಏನು ಎಂಬ ಸಮರ್ಥನೆಯನ್ನು ನೀಡಲಿದ್ದೇವೆ.

ಎಂ. ಮಹೇಶ್ವರ ರಾವ್, ವ್ಯವಸ್ಥಾಪಕ ನಿರ್ದೇಶಕ, ಬಿಎಂಆರ್‌ಸಿಎಲ್

ಒಂದು ವರ್ಷ ವಿಳಂಬ?

ನಗರದ ಪ್ರಮುಖ ವಹಿವಾಟು ಪ್ರದೇಶಗಳಲ್ಲಿ ಒಂದಾಗಿರುವ ಕೋರಮಂಗಲವನ್ನು ಹಾದು ಹೋಗುವ ಕೆಂಪು ಮಾರ್ಗದ ಕಾಮಗಾರಿಯನ್ನು ಪೂರ್ಣಗೊಳಿಸಿ 2030ರ ಹೊತ್ತಿಗೆ ರೈಲು ಸಂಚರಿಸುವಂತೆ ಮಾಡಬೇಕು ಎಂಬ ಗುರಿಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿತ್ತು. ಕೇಂದ್ರ ಸರ್ಕಾರದ ಒಪ್ಪಿಗೆ ಸಿಗುವುದು ತಡವಾಗುತ್ತಿರುವುದರಿಂದ ಒಂದು ವರ್ಷ ವಿಳಂಬವಾಗಲಿದೆ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ.

ಹೆಬ್ಬಾಳದಲ್ಲಿ ಕೇಸರಿ ಮತ್ತು ನೀಲಿ ಮಾರ್ಗವನ್ನು, ಕೆ.ಆರ್. ಸರ್ಕಲ್‌ನಲ್ಲಿ ನೇರಳೆ ಮಾರ್ಗವನ್ನು, ಡೇರಿ ಸರ್ಕಲ್‌ನಲ್ಲಿ ಗುಲಾಬಿ ಮಾರ್ಗವನ್ನು ಮತ್ತು ಅಗರದಲ್ಲಿ ಮತ್ತೆ ನೀಲಿ ಮಾರ್ಗವನ್ನು ಸಂಪರ್ಕಿಸಲಿದ್ದು, ಅಲ್ಲೆಲ್ಲ ಇಂಟರ್ ಚೇಂಜ್‌ಗಳಿರಲಿವೆ. ಇದರಿಂದ ಪ್ರಯಾಣಿಕರಿಗೆ ಮಾರ್ಗ ಬದಲಾವಣೆಗೆ ಹೆಚ್ಚಿನ ಅವಕಾಶ ಸಿಗಲಿದೆ. ನೀಲಿ ಮಾರ್ಗದ ಸಂಪರ್ಕದಿಂದಾಗಿ 'ಟೆಕ್ ಹಬ್'ನಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಚರಿಸುವವರಿಗೆ ಅನುಕೂಲವಾಗಲಿದೆ. ಈ ವರ್ಷ ಡಿಸೆಂಬರ್ ಅಂತ್ಯದ ಒಳಗೆ ಕೇಂದ್ರ ಸರ್ಕಾರದಿಂದ ಅನುಮೋದನೆ ದೊರಕಿದರೆ 2031ಕ್ಕೆ ಯೋಜನೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಅಧಿಕಾರಿಯೊಬ್ಬರು ವಿವರಿಸಿದರು.

ನೈಸ್ ಕಾರ್ಯಕ್ಷಮತೆ ಪರಿಶೀಲನೆ

ಖಾಸಗಿ ಸಲಹಾ ಸಂಸ್ಥೆ ನೇಮಿಸಲು ರಾಜ್ಯ ಸರ್ಕಾರ ನಿರ್ಧಾರ

• ನವೀನ್ ಮಿನೇಜಸ್

ಬೆಂಗಳೂರು: ನಂದಿ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸ್‌ನ (ನೈಸ್) ಪೂರ್ಣಗೊಂಡ, ಪೂರ್ಣವಾಗದ ಕಾಮಗಾರಿಗಳು ಮತ್ತು ಈ ಯೋಜನೆಯ ಕಾರ್ಯಕ್ಷಮತೆ ಪರಿಶೀಲನೆಗೆ ಖಾಸಗಿ ಸಲಹಾ ಸಂಸ್ಥೆಯನ್ನು ನೇಮಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ನೈಸ್ ಜೊತೆಗಿನ ಮೂರು ದಶಕಗಳಷ್ಟು ಹಳೆಯದಾದ ಒಪ್ಪಂದವು ಸಂಕೀರ್ಣ ಮತ್ತು ವಿವಾದಗಳಲ್ಲಿ ಸಿಲುಕಿರುವ ಕಾರಣ ಸರ್ಕಾರವು ಈ ನಿರ್ಧಾರಕ್ಕೆ ಬಂದಿದೆ.

ಸಚಿವ ಸಂಪುಟದ ಉಪ ಸಮಿತಿಯ ಶಿಫಾರಸಿನ ಮೇರೆಗೆ ರಾಜ್ಯ ಸಚಿವ ಸಂಪುಟವು ಈ ನಿರ್ಧಾರವನ್ನು ತೆಗೆದು ಕೊಂಡಿದೆ.

ಸಲಹಾ ಸಂಸ್ಥೆಯು ಭೂಸ್ವಾಧೀನ ವಿವಾದ, ಪರಿಸರ ಕಾಳಜಿ, ರಾಜಕೀಯ ವಿವಾದ, ಕಾನೂನು ಮತ್ತು ನಿಯಂತ್ರಣ ಸಮಸ್ಯೆಗಳು ಸೇರಿದಂತೆ ಸಂಕೀರ್ಣ ಸವಾಲುಗಳನ್ನು ಪರಿಣಾಮಕಾರಿಯಾಗಿ ಬಗೆಹರಿಸುವ ಸಂಬಂಧ ಸಲಹೆಗಳನ್ನು ನೀಡುವ ನಿರೀಕ್ಷೆಯಿದೆ ಎಂದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.


ನೈಸ್ ರಸ್ತೆ

ಪ್ರಜಾವಾಣಿ ವಿಶೇಷ

ಈ ಕೆಲಸಕ್ಕಾಗಿ ಇತ್ತೀಚೆಗೆ ಟೆಂಡರ್ ಕರೆಯಲಾಗಿದೆ.

ಬೆಂಗಳೂರು - ಮೈಸೂರು ನಡುವೆ 111 ಕಿ.ಮೀ ಉದ್ದದ ಎಕ್ಸ್‌ಪ್ರೆಸ್‌ವೇ ನಿರ್ಮಾಣದ ಕಾರ್ಯಸಾಧ್ಯತೆ, 41 ಕಿ.ಮೀ. ಪೆರಿಫೆರಲ್ ರಸ್ತೆ ಮತ್ತು 9.8 ಕಿ.ಮೀ. ಲಿಂಕ್ ರಸ್ತೆಯಲ್ಲಿ ಟೋಲ್ ಸಂಗ್ರಹದಿಂದ ಬರುವ ಆದಾಯವನ್ನು ಮೌಲ್ಯಮಾಪನ ಮಾಡುವುದು. ಯೋಜನೆಗಾಗಿ ಈಗಾಗಲೇ ಸ್ವಾಧೀನ ಪಡಿಸಿಕೊಂಡಿರುವ ಖಾಲಿ ಜಮೀನಿನ ಮೌಲ್ಯವನ್ನು ಪರಿಶೀಲಿಸುವುದು ಸಹಿತ ವಿವಿಧ ಅಂಶಗಳು ಇದರ ಕಾರ್ಯವ್ಯಾಪ್ತಿಯಲ್ಲಿ ಬರಲಿವೆ. ಕೆಲಸ ಪೂರ್ಣಗೊಳಿಸಲು ಖಾಸಗಿ ಸಲಹಾ ಸಂಸ್ಥೆಗೆ ಒಂದು ತಿಂಗಳ ಕಾಲಾವಕಾಶ ನೀಡಲಾಗುತ್ತದೆ.

1995ರ ಒಪ್ಪಂದದ ಮೂಲ ಚೌಕಟ್ಟನ್ನು ಉಲ್ಲಂಘಿಸಿದ್ದಕ್ಕಾಗಿ ನೈಸ್ ಯೋಜನೆಯು ವಿವಾದಕ್ಕೆ ಸಿಲುಕಿತ್ತು. ಮೂಲ ಒಪ್ಪಂದದ ಪ್ರಕಾರ ಎಕ್ಸ್‌ಪ್ರೆಸ್‌ವೇ ಉದ್ದಕ್ಕೂ ಐದು ಪಟ್ಟಣಗಳ ಅಭಿವೃದ್ಧಿ ಮಾಡುವುದು ಸಹ ಒಳಗೊಂಡಿದೆ.

ಈ ಹಿಂದೆ ಟಿ.ಬಿ. ಜಯಚಂದ್ರ ನೇತೃತ್ವದ ಸದನ ಸಮಿತಿಯು ಹಲವು ಅಕ್ರಮಗಳನ್ನು ಬಹಿರಂಗಪಡಿಸಿತ್ತು. ಅಲ್ಲದೆ ನೈಸ್ ಸಂಸ್ಥೆಯ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಶಿಫಾರಸು ಮಾಡಿತ್ತು. ಅವಶ್ಯಕತೆಗಿಂತ ಅಧಿಕವಾಗಿ 13,000 ಎಕರೆ ಜಾಗವನ್ನು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಸ್ವಾಧೀನಪಡಿಸಿಕೊಂಡಿದೆ ಎಂದು ಸಮಿತಿ ತಿಳಿಸಿತ್ತು. ಇದಕ್ಕೆ ಸಂಬಂಧಿಸಿದ 374ಕ್ಕೂ ಹೆಚ್ಚು ಪ್ರಕರಣಗಳು ಸುಪ್ರೀಂ ಕೋರ್ಟ್, ಹೈಕೋರ್ಟ್ ಮತ್ತು ಸಿವಿಲ್ ನ್ಯಾಯಾಲಯಗಳಲ್ಲಿವೆ.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್‌ಆ್ಯಪ್ ಮಾಡಿ: 9606038256

'ತೆರವಾಗದ ಕಸದ ರಾಶಿ'


ಮಲ್ಲೇಶ್ವರದ ನಾಲ್ಕನೇ ಮುಖ್ಯರಸ್ತೆಯ 17ನೇ ಅಡ್ಡರಸ್ತೆಯಲ್ಲಿರುವ ಕಸದ ರಾಶಿ

ಮಲ್ಲೇಶ್ವರದ ನಾಲ್ಕನೆ ಮುಖ್ಯ ರಸ್ತೆಯ 17 ಮತ್ತು 18ನೇ ಅಡ್ಡ ರಸ್ತೆಯಲ್ಲಿ ಕಸದ ರಾಶಿಗಳಿವೆ. ಹಲವು ದಿನಗಳಿಂದ ಇರುವ ಈ ಕಸದ ರಾಶಿಯನ್ನು ತೆರವು ಮಾಡುತ್ತಿಲ್ಲ. ಪೌರಕಾರ್ಮಿಕರು ಅಥವಾ ಸಂಬಂಧಪಟ್ಟವರು ಈ ಬಗ್ಗೆ ಗಮನ ಹರಿಸುತ್ತಿಲ್ಲ. ಇದರಿಂದಾಗಿ ಕಸದ ರಾಶಿ ಬೆಳೆಯುತ್ತಲೇ ಇದೆ. ಸ್ಥಳೀಯ ನಿವಾಸಿಗಳು ಹಾಗೂ ಪಾದಚಾರಿಗಳು ಸಮಸ್ಯೆ ಎದುರಿಸುತ್ತಿದ್ದಾರೆ. ಈ ಕಸವು ರಸ್ತೆಯನ್ನೂ ಆವರಿಸಿಕೊಳ್ಳುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ, ತುರ್ತಾಗಿ ಕಸ ತೆರವಿಗೆ ಕ್ರಮವಹಿಸಬೇಕು.

ಜನಾರ್ದನ, ಮಲ್ಲೇಶ್ವರ


'ಅವೈಜ್ಞಾನಿಕ ಇಂಗುಗುಂಡಿ'



ನಾಗದೇವನಹಳ್ಳಿಯ ಕೆ.ಸಿ.ಎಚ್.ಎಸ್. ಬಡಾವಣೆಯ ಗಣೇಶ ದೇವಸ್ಥಾನ ಉದ್ಯಾನದಲ್ಲಿ ಅವೈಜ್ಞಾನಿಕವಾಗಿ ಇಂಗುಗುಂಡಿ ನಿರ್ಮಾಣ ಮಾಡಲಾಗಿದೆ. ಅಂತರ್ಜಲ ವೃದ್ಧಿಗೆ ಸಹಕಾರಿಯಾಗಬೇಕಾದ ಈ ಇಂಗು ಗುಂಡಿ, ನಿರರ್ಥಕವಾಗುತ್ತಿದೆ. ಇದು ನೆಲದಿಂದ ಒಂದು ಅಡಿ ಮೇಲೆ ಇರುವುದರಿಂದ ನೀರು ಗುಂಡಿಗೆ ಹೋಗದೆ, ವ್ಯರ್ಥವಾಗುತ್ತಿದೆ. ಸಂಬಂಧಪಟ್ಟವರು ಗುಂಡಿಯ ಎತ್ತರವನ್ನು ತಗ್ಗಿಸುವ ಮೂಲಕ ನೀರು ಇಂಗುವಂತೆ ನೋಡಿಕೊಳ್ಳಬೇಕು.

ಎಸ್.ಎಂ. ನಾಗರಾಜ್
ನಾಗದೇವನಹಳ್ಳಿ

'ರಸ್ತೆಯುದ್ದಕ್ಕೂ ಗುಂಡಿ'



ಕೆಂಗೇರಿ ಉಪನಗರದಲ್ಲಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವಿಶ್ವೇಶ್ವರಯ್ಯ ಬಡಾವಣೆಯ ಮೊದಲ ಹಂತದ ಎರಡನೇ ಮುಖ್ಯ ರಸ್ತೆ ಗುಂಡಿಗಳಿಂದ ಕೂಡಿದೆ. ರಸ್ತೆಗೆ ಹಾಕಿದ್ದ ಡಾಂಬರು ಕಿತ್ತು ಹೋಗಿದ್ದು, ವಾಹನ ಸವಾರರು ಸಂಚರಿಸು ವುದು ಕಷ್ಟವಾಗಿದೆ. ಮಾರುದ್ದದ ಗುಂಡಿಗಳು ಅಲ್ಲಲ್ಲಿ ಕಂಡು ಬರುತ್ತವೆ. ಇಲ್ಲಿನ ಸಂಚಾರ ಅಪಾಯಕ್ಕೆ ಆಹ್ವಾನ ನೀಡುತ್ತಿದೆ. ದ್ವಿಚಕ್ರ ವಾಹನ ಸವಾರರು ಈ ರಸ್ತೆಯಲ್ಲಿ ಭಯದಲ್ಲೇ ಸಂಚರಿಸ ಬೇಕಾದ ದುಃಸ್ಥಿತಿ ಇದ್ದು, ನಿಯಂತ್ರಣ ತಪ್ಪಿ ಬೀಳುವುದು ಸಾಮಾನ್ಯವಾಗಿದೆ. ಅಪಘಾತ ಗಳೂ ಹೆಚ್ಚುತ್ತಿವೆ. ಹಲವು ತಿಂಗಳಿಂದ ರಸ್ತೆ ಹಾಳಾಗಿದ್ದರೂ ಅಧಿಕಾರಿಗಳು ದುರಸ್ತಿಗೆ ಕ್ರಮ ಕೈಗೊಂಡಿಲ್ಲ. ಶಾಸಕ ಎಸ್.ಟಿ. ಸೋಮಶೇಖರ್ ಅವರು ಈ ಬಗ್ಗೆ ಕ್ರಮವಹಿಸಬೇಕು.

ಸಿ.ಎನ್.ಭಂಡಾರೆ
ವಿಶ್ವೇಶ್ವರಯ್ಯ ಬಡಾವಣೆ

ಅಗಲಿದ ಕವಿಯನ್ನು ಸ್ಮರಿಸಿಕೊಂಡ ಒಡನಾಡಿಗಳು

'ಎಚ್ಚೆಸ್ವಿ'ಗೆ ಗೀತ–ನುಡಿ ನಮನ

ಪ್ರಜಾವಾಣಿ ವಾರ್ತೆ


ಕಾರ್ಯಕ್ರಮದಲ್ಲಿ ಎಚ್‌.ಎಸ್‌. ವೆಂಕಟೇಶಮೂರ್ತಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ವತ್ಸಲಾ ಮೋಹನ್‌, ಬಿ.ಜಯಶ್ರೀ, ಶ್ರೀನಿವಾಸ ಜಿ. ಕಪ್ಪಣ್ಣ, ಪ್ರೊ.ಕೆ.ಈ. ರಾಧಾಕೃಷ್ಣ, ಜೋಗಿ (ಗಿರೀಶ್ ರಾವ್ ಹತ್ವಾರ್), ಐ.ಎಂ. ವಿಠಲಮೂರ್ತಿ, ಚಾರ್ಲ್ಸ್ ಲಸ್ರಾಡೊ, ಸುಂದರ್ ವೀಣಾ, ಮಲ್ಲೇಪುರಂ ಜಿ. ವೆಂಕಟೇಶ್‌, ಹಂಪ ನಾಗರಾಜಯ್ಯ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಸಾಹಿತಿ ಎಚ್‌.ಎಸ್‌. ವೆಂಕಟೇಶಮೂರ್ತಿ ಅವರು ರಚಿಸಿದ ಗೀತೆಗಳನ್ನು ಹಾಡುವ ಮೂಲಕ ಗಾಯಕಿ ಎಂ.ಡಿ. ಪಲ್ಲವಿ ನೆರೆದಿದ್ದವರನ್ನು ಭಾವಪರವಶಗೊಳಿಸಿದರೆ, ಅವರ ಒಡನಾಡಿಗಳು ಕನ್ನಡ ಕಾವ್ಯ ಪರಂಪರೆಗೆ 'ಎಚ್ಚೆಸ್ವಿ' ನೀಡಿದ ಕೊಡುಗೆಗಳ ಬಗ್ಗೆ ಗುಣಗಾನ ಮಾಡಿದರು.

ಕಪ್ಪಣ್ಣ ಅಂಗಳ ಹಾಗೂ ಸಮಂಜಸ ಬೆಂಗಳೂರು ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಕಾವ್ಯ ಕಾಮಧೇನು ಎಚ್‌ಎಸ್‌ವಿ' ಕಾರ್ಯಕ್ರಮದಲ್ಲಿ ಇತ್ತೀಚೆಗೆ ನಿಧನರಾದ ಎಚ್.ಎಸ್. ವೆಂಕಟೇಶಮೂರ್ತಿ ಅವರಿಗೆ ಗೀತ ಗೌರವ ಹಾಗೂ ನುಡಿ ನಮನ ಸಲ್ಲಿಸಲಾಯಿತು.

ಕವಿ ಬಿ.ಆರ್. ಲಕ್ಷ್ಮಣ ರಾವ್, 'ವೆಂಕಟೇಶಮೂರ್ತಿ ಅವರು ಕೇವಲ ಭಾವಗೀತೆ ಕವಿಯಾಗದೆ, ಕನ್ನಡದ ಶ್ರೇಷ್ಠ ಕವಿಯಾಗಿದ್ದಾರೆ. ಸತ್ವಯುಕ್ತ ಮತ್ತು ಸಮೃದ್ಧವಾದ ಕಾವ್ಯ ಅವರದ್ದಾಗಿದೆ. ಕನ್ನಡ ಕಾವ್ಯಕ್ಕೆ ಅವರು ಅಕ್ಷಯಪಾತ್ರೆಯಾಗಿದ್ದು, ಕನ್ನಡ ಭಾಷೆ ಇರುವವರೆಗೆ ಅವರು ಇರುತ್ತಾರೆ' ಎಂದು ಹೇಳಿದರು.

ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್, 'ಪುತಿನ ಅವರ ಭಾಗವತ ಪ್ರಜ್ಞೆ, ಕುವೆಂಪು ಅವರ ಭಾವ ಶಕ್ತಿ ಗ್ರಹಿಕೆ, ಬೇಂದ್ರೆ ಅವರ ನಾದ ಗುಣವನ್ನು ವೆಂಕಟೇಶಮೂರ್ತಿ ಮೈಗೂಡಿಸಿಕೊಂಡಿದ್ದರು. ಅವರು ಕಾವ್ಯ ಪ್ರತಿಭೆಯ ಪರಮೋಚ್ಚ ಜ್ಯೋತಿಯಾಗಿದ್ದಾರೆ' ಎಂದರು.

ರಂಗಕರ್ಮಿ ಬಿ.ಜಯಶ್ರೀ ಅವರು ವೆಂಕಟೇಶಮೂರ್ತಿ ಅವರಿಗೆ ರಂಗ ಗೌರವ ಸಲ್ಲಿಸಿದರು.

'ಒಂದು ದೇಶ, ಒಂದು ಚುನಾವಣೆ ಜನರೇ ಅಭಿಯಾನ ನಡೆಸಲಿ'

ಪ್ರಜಾವಾಣಿ ವಾರ್ತೆ


ಶಿವರಾಜ್ ಸಿಂಗ್ ಚೌಹಾಣ್

ಬೆಂಗಳೂರು: 'ದೇಶದಲ್ಲಿ ಒಂದಿಲ್ಲೊಂದು ಚುನಾವಣೆ ನಡೆಯುತ್ತಲೇ ಇರುತ್ತದೆ. ವರ್ಷವೊಂದರಲ್ಲಿ 6 ತಿಂಗಳು ಆಡಳಿತಾತ್ಮಕ ಕೆಲಸಗಳು ನಡೆಯುವುದೇ ಇಲ್ಲ. ಒಂದು ದೇಶ, ಒಂದು ಚುನಾವಣೆಯೇ ಇದಕ್ಕೆ ಪರಿಹಾರ. ಇದನ್ನು ಎಲ್ಲರೂ ಬೆಂಬಲಿಸಬೇಕು. ಇದಕ್ಕಾಗಿ ಸಾರ್ವಜನಿಕರೇ ಅಭಿಯಾನ ನಡೆಸಬೇಕು' ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಪ್ರತಿಪಾದಿಸಿದರು.

'ಒಂದು ದೇಶ, ಒಂದು ಚುನಾವಣೆ' ಕುರಿತು ಸಾಮಾಜಿಕ ಜಾಲತಾಣಗಳ ಇನ್‌ಫ್ಲುಯೆನ್ಸರ್‌ಗಳ ಜತೆಗೆ ನಗರದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಸಂವಾದದಲ್ಲಿ ಮಾತನಾಡಿದ ಅವರು, 'ಸದಾ ಕಾಲ ಚುನಾವಣೆ ನಡೆಯುವುದ ರಿಂದ ಏನೆಲ್ಲಾ ಸಮಸ್ಯೆ ಆಗುತ್ತದೆ ಎಂಬುದರ ಬಗ್ಗೆ ನನ್ನ ಅನುಭವವನ್ನೇ ನಿಮ್ಮ ಮುಂದೆ ಇರಿಸುತ್ತೇನೆ' ಎಂದರು.

'2023ರಲ್ಲಿ ನಾನು ಮಧ್ಯ ಪ್ರದೇಶದ ಮುಖ್ಯಮಂತ್ರಿ ಆಗಿದ್ದೆ. ಅದೇ ವರ್ಷದ ಸೆಪ್ಟೆಂಬರ್‌ನಿಂದ ಮಧ್ಯ ಪ್ರದೇಶ ವಿಧಾನಸಭೆ ಚುನಾವಣಾ ಪ್ರಕ್ರಿಯೆಗಳು ಆರಂಭವಾದವು. ಆ ನಾಲ್ಕು ತಿಂಗಳು ಯಾವುದೇ ಕೆಲಸ ಮಾಡಲು ಸಾಧ್ಯ ವಾಗಲಿಲ್ಲ. ಚುನಾವಣೆ ಮುಗಿದು, ಹೊಸ ಸರ್ಕಾರ ಬಂದ ಎರಡೇ ತಿಂಗಳಲ್ಲಿ ಲೋಕಸಭಾ ಚುನಾವಣೆ ಘೋಷಣೆಯಾಯಿತು' ಎಂದರು.

'ಲೋಕಸಭಾ ಚುನಾವಣೆ ಮುಗಿದು, ಮೋದಿ ಅವರು ಮತ್ತೆ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದರು. ನಾನೂ ಕೃಷಿ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದೆ. ಸಚಿವಾಲಯದ ಕೆಲಸಗಳನ್ನು ಅರ್ಥ ಮಾಡಿಕೊಳ್ಳುವ ವೇಳೆಗೆ ಜಾರ್ಖಂಡ್ ವಿಧಾನಸಭಾ ಚುನಾವಣೆಗೆ ವೀಕ್ಷಕರಾಗಿ ಹೋಗುವಂತೆ ಸೂಚಿಸಿದರು. ಒಂದಿಡೀ ವರ್ಷ ಕೆಲಸ ಮಾಡಲು ಆಗಲಿಲ್ಲ. ಅದೇ ಸಂದರ್ಭದಲ್ಲಿ ಸರ್ಕಾರವೂ ಕೆಲಸ ಮಾಡಲಾಗಲಿಲ್ಲ' ಎಂದರು.

'ಈ ಸಮಸ್ಯೆಯ ನಿವಾರಣೆಗೆ ಒಂದು ದೇಶ, ಒಂದು ಚುನಾವಣೆಯೇ ಪರಿಹಾರ' ಎಂದು ಹೇಳಿದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್, ಬಿಜೆಪಿ ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್ ಅವರು ಸಂವಾದದಲ್ಲಿ ಭಾಗಿಯಾಗಿದ್ದರು.

'ಇಂದಿರಾ ಗಾಂಧಿ ಹಾಳುಗೆಡವಿದ್ದು'

'ಸ್ವಾತಂತ್ರ್ಯ ಬಂದು ಮೊದಲ ಸರ್ಕಾರ ರಚನೆಯಾದ ನಂತರದ 15 ವರ್ಷ ದೇಶದಾದ್ಯಂತ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಒಮ್ಮೆಗೇ ಚುನಾವಣೆ ನಡೆಸಲಾಗುತ್ತಿತ್ತು. 1967ರ ನಂತರ ಇಂದಿರಾ ಗಾಂಧಿ ಆಡಳಿತದಲ್ಲಿ, ಹಲವು ರಾಜ್ಯಗಳಲ್ಲಿ ಇದ್ದ ಕಾಂಗ್ರೆಸ್ಸೇತರ ಸರ್ಕಾರಗಳನ್ನು ಬೀಳಿಸಿದರು. ಆನಂತರವೇ ಬೇರೆ-ಬೇರೆ ಅವಧಿಯಲ್ಲಿ ಚುನಾವಣೆ ನಡೆಯಲಾರಂಭಿಸಿತು' ಎಂದು ಬಿಜೆಪಿ ನಾಯಕ ಅನಿಲ್ ಆ್ಯಂಟನಿ ಹೇಳಿದರು.

'ಇಂದಿರಾ ಗಾಂಧಿ ಅವರು ಹಾಳುಗೆಡವಿದ್ದ ಈ ವ್ಯವಸ್ಥೆಯನ್ನು ಹೊಸ ರೂಪದಲ್ಲಿ ಮತ್ತೆ ಜಾರಿಗೆ ತರಲು ಪ್ರಧಾನಿ ನರೇಂದ್ರ ಮೋದಿ ಅವರು ಮುಂದಾಗಿದ್ದಾರೆ' ಎಂದರು.

'ಒಳ ಮೀಸಲು ಸಮೀಕ್ಷೆ: ಹೆಸರು, ಜಾತಿ ಬಹಿರಂಗಪಡಿಸಿ'

ಪ್ರಜಾವಾಣಿ ವಾರ್ತೆ


ಅನಂತರಾಯಪ್ಪ

ಬೆಂಗಳೂರು: 'ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಕಲ್ಪಿಸಲು ನಡೆಯುತ್ತಿರುವ ಸಮೀಕ್ಷೆಯು ಪೂರ್ಣಗೊಂಡ ತಕ್ಷಣ ಆಯಾ ಜಾತಿಗಳ ಜನರ ಹೆಸರು ಮತ್ತು ಮೂಲ ಜಾತಿಯನ್ನು ಗ್ರಾಮ ಪಂಚಾಯಿತಿ ಮತ್ತು ವಾರ್ಡ್ ಕಚೇರಿಗಳಲ್ಲಿ ಬಹಿರಂಗಪಡಿಸಬೇಕು. ಆ ಮೂಲಕ, ತಪ್ಪುಗಳಿದ್ದರೆ ಆಕ್ಷೇಪಣೆ ಸಲ್ಲಿಸಲು ಮತ್ತು ತಿದ್ದುಪಡಿಗೆ ಅವಕಾಶ ನೀಡಬೇಕು' ಎಂದು ಆಗ್ರಹಿಸಿ ನಿವೃತ್ತ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನದಾಸ್ ನೇತೃತ್ವದ ಏಕಸದಸ್ಯ ಆಯೋಗಕ್ಕೆ ಕರ್ನಾಟಕ ನವ ಜಾಗೃತಿ ವೇದಿಕೆ ಮನವಿ ಸಲ್ಲಿಸಿದೆ.

'ಸಮೀಕ್ಷೆಯಲ್ಲಿ ಪ್ರಶ್ನಾವಳಿ ಸುದೀರ್ಘವಾಗಿದ್ದ ಕಾರಣ ಗಣತಿದಾರರು ನಮೂದಿಸಿರುವ ಹೆಸರು, ಜಾತಿ ಮತ್ತಿತರ ಮಾಹಿತಿ ಸರಿಯಾಗಿ ದಾಖಲಾಗಿದೆಯೇ ಎಂಬ ಬಗ್ಗೆ ಶೇ 90ಕ್ಕೂ ಹೆಚ್ಚು ಜನರಿಗೆ ತಿಳಿದಿಲ್ಲ. ದಾಖಲಿಸಿಕೊಂಡಿರುವ ಮಾಹಿತಿಯನ್ನು ಮೊಬೈಲ್‌ನಲ್ಲಿಯೇ ಪರಿಶೀಲಿಸಿಕೊಳ್ಳಬಹುದು ಎಂದು ಆಯೋಗ ಹೇಳಿದ್ದರೂ ಅದು ಕಾರ್ಯಸಾಧ್ಯವಾಗಿಲ್ಲ' ಎಂದು ವೇದಿಕೆ ಅಧ್ಯಕ್ಷ ಅನಂತರಾಯಪ್ಪ ಮನವಿಯಲ್ಲಿ ಉಲ್ಲೇಖಿಸಿದ್ದಾರೆ.

'ಪರಿಶಿಷ್ಟ ಜಾತಿಗೆ ಸೇರಿದ ಕೆಲವರು ಗಣತಿದಾರರು ತಮ್ಮ ಜಾತಿಯ ಜನಸಂಖ್ಯೆ ಜಾಸ್ತಿಯಾಗಲು ಬೇರೆ ಉಪ ಜಾತಿಯವನ್ನು ತಮ್ಮ ಜಾತಿಯವರೆಂದು ದಾಖಲು ಮಾಡಿಕೊಂಡಿರುವ ಆರೋಪಗಳೂ ಇವೆ. ಲಿಂಗಸಗೂರು ತಾಲ್ಲೂಕಿನ ತಾಂಡದಲ್ಲಿ ನಡೆದ ಇಂತಹ ಘಟನೆ ಬಹಿರಂಗವಾಗಿದೆ' ಎಂದಿದ್ದಾರೆ.


ನಗರದಲ್ಲಿ ಇಂದು

ಪ್ರೊ.ಬಿ. ಕೃಷ್ಣಪ್ಪ ಅವರ 87ನೇ ಜನ್ಮದಿನದ ಅಂಗವಾಗಿ ಬಹುಜನರ ಏಕತಾ ದಿನ ಸಮಾರಂಭ: ಕೋಡಿಹಳ್ಳಿ ಚಂದ್ರಶೇಖರ್, ಎಂ. ಗೋಪಿನಾಥ್, ಆರ್. ಮೋಹನ್ ರಾಜ್, ಶೇಖರ್ ಹಾವಂಜೆ, ಸ್ವಪ್ನ ಮೋಹನ್, ಆಯೋಜನೆ: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ–ಕರ್ನಾಟಕ, ಕರ್ನಾಟಕ ದಲಿತ ಸಂಘರ್ಷ ಸಮಿತಿ–ಭೀಮವಾದ, ಸ್ಥಳ: ಕೃಷಿ ತಂತ್ರಜ್ಞಾನ ಸಂಸ್ಥೆ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 11

67ನೇ ಪ್ರತಿಷ್ಠಾಪನಾ ವರ್ಧಂತಿ ಮಹೋತ್ಸವ: ಬೆಳಿಗ್ಗೆ 10ಕ್ಕೆ ಸುವಿದ್ಯೇಂದ್ರತೀರ್ಥ ಸ್ವಾಮೀಜಿ ಅವರಿಂದ ಸಂಸ್ಥಾನ ಪೂಜೆ, ಸಂಜೆ 6.30ಕ್ಕೆ ಸಭಾ ಕಾರ್ಯಕ್ರಮ, ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಮಹನೀಯರಿಗೆ ಗೌರವ ಸಮರ್ಪಣೆ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ಪ್ರಕಾಶನಗರ

ಕನಕ ಪತ್ರಿಕೆ ಸುವರ್ಣ ಮಹೋತ್ಸವ ಹಾಗೂ 'ಕನಕ ಚೇತನ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ನಿರಂಜನಾನಂದಪುರಿ ಸ್ವಾಮೀಜಿ, ಈಶ್ವರಾನಂದಪುರಿ ಸ್ವಾಮೀಜಿ, ಸಿದ್ದರಾಮಾನಂದ ಸ್ವಾಮೀಜಿ, ಶಿವಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಯುಪಿಎಸ್‌ಸಿ ಸಾಧಕರಿಗೆ ಸನ್ಮಾನ: ಬೈರತಿ ಸುರೇಶ್, ಪ್ರಶಸ್ತಿ ಪ್ರದಾನ: ಯತೀಂದ್ರ ಸಿದ್ದರಾಮಯ್ಯ, ಕನಕ ಸಿರಿ ಸ್ಮರಣ ಸಂಚಿಕೆ ಬಿಡುಗಡೆ: ಆರ್. ರಾಮಯ್ಯ, ಪುಸ್ತಕ ವಿತರಣೆ: ಕೆ.ಎಂ. ರಾಮಚಂದ್ರಪ್ಪ, ಪ್ರಾಸ್ತಾವಿಕ ನುಡಿ: ಬಿ.ಕೆ. ರವಿ, ಆಯೋಜನೆ: ಕನಕ ಎಕ್ಸ್‌ಪ್ರೆಸ್ ಮೀಡಿಯಾ ಗ್ರೂಪ್ಸ್, ಕನಕ ಆಫೀಸರ್ಸ್ ಅಕಾಡೆಮಿ, ಸ್ಥಳ: ಕನಕ ಭವನ, ಚಂದ್ರಾಲೇಔಟ್, ಸಂಜೆ 5

ಎಚ್.ಎಸ್.ವೆಂಕಟೇಶಮೂರ್ತಿ ಅವರಿಗೆ ನುಡಿ–ಗೀತ ನಮನ: ಅತಿಥಿಗಳು: ಕೆ.ಎಂ. ಗಾಯತ್ರಿ, ಎಚ್.ಆರ್. ರಂಗನಾಥ್, ಸಿ. ಸೋಮಶೇಖರ್, ಟಿ.ಎನ್. ಸೀತಾರಾಮ್, ಅಧ್ಯಕ್ಷತೆ: ವೈ.ಕೆ. ಮುದ್ದುಕೃಷ್ಣ, ಪ್ರಾಸ್ತಾವಿಕ ನುಡಿ: ಕೆ.ವಿ. ನಾಗರಾಜ ಮೂರ್ತಿ, ಉಪಸ್ಥಿತಿ: ಬಿ.ಆರ್. ಲಕ್ಷ್ಮಣರಾವ್, ಎಸ್.ಜಿ. ಸಿದ್ಧರಾಮಯ್ಯ, ಆನೂರು ಅನಂತಕೃಷ್ಣಶರ್ಮ, ಡುಂಡಿರಾಜ್, ನಾ. ದಾಮೋದರ ಶೆಟ್ಟಿ, ಪ್ರವೀಣ್ ಡಿ. ರಾವ್, ಟಿ.ಎಸ್. ನಾಗಾಭರಣ, ಲಹರಿ ವೇಲು, ಲಕ್ಷ್ಮಣ ಕೊಡಸೆ, ಜಯಂತ ಕಾಯ್ಕಿಣಿ, ವಿ. ಮನೋಹರ್, ಮುನಿಕೃಷ್ಣ, ಬಿ.ಜಯಶ್ರೀ, ವೇಮಗಲ್ ನಾರಾಯಣಸ್ವಾಮಿ, ಮುದ್ದುಮೋಹನ್, ಶ್ರೀನಿವಾಸ ಜಿ. ಕಪ್ಪಣ್ಣ, ಜೋಗಿ, ಆಯೋಜನೆ: ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 5.30


ಎಚ್.ಎಸ್. ವೆಂಕಟೇಶ ಮೂರ್ತಿ

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಪೂರಕ ಪೌಷ್ಟಿಕ ಆಹಾರದ ಕಿಟ್; ಬಿಎನ್‌ಪಿಎಂ ಆರ್ಥಿಕ ನೆರವು • ಮಕ್ಕಳಿಗೆ ಶಕ್ತಿ ತುಂಬುವ ಕಾರ್ಯ

ಅಪೌಷ್ಟಿಕ ಮಕ್ಕಳಿಗೆ ಸಿಎಫ್‌ಟಿಆರ್‌ಐ 'ಕಿಟ್'

• ಎಂ. ಮಹೇಶ್

ಮೈಸೂರು: ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರಗಳಲ್ಲಿ ಆಳವಾದ ಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿರುವ ಇಲ್ಲಿನ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ (ಸಿಎಫ್‌ಟಿಆರ್‌ಐ) ಅಂಗನವಾಡಿ ಕೇಂದ್ರಗಳ ಮಕ್ಕಳ ಅಪೌಷ್ಟಿಕತೆ ನಿವಾರಣೆಗೆ ಕೈಜೋಡಿಸಿದೆ.

ಜಿಲ್ಲೆಯಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವ 2ರಿಂದ 5 ವರ್ಷದೊಳಗಿನ 2,100 ಮಕ್ಕಳನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಗುರುತಿಸಲಾಗಿದೆ. ಅದರಲ್ಲಿ ಮೊದಲ ಹಂತದಲ್ಲಿ 650 ಮಕ್ಕಳಲ್ಲಿನ ಅಪೌಷ್ಟಿಕತೆ ಹೋಗಲಾಡಿಸಲು ಆರು ತಿಂಗಳವರೆಗೆ 'ಪೂರಕ ಪೌಷ್ಟಿಕ ಆಹಾರ ಪೂರೈಕೆ'ಯ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತರಲಾಗಿದೆ.

ಈ ಬಡ ಹಾಗೂ ಮಧ್ಯಮ ವರ್ಗದವರ ಮಕ್ಕಳಿಗೆ 'ಶಕ್ತಿ' ತುಂಬುವ ಕಾರ್ಯಕ್ಕೆ ಸಿಎಫ್‌ಟಿಆರ್‌ಐ ಜೊತೆ ಮೈಸೂರಿನದ್ದೇ ಆದ ಬ್ಯಾಂಕ್ ನೋಟ್ ಪೇಪರ್ ಮಿಲ್ (ಬಿಎನ್‌ಪಿಎಂ– ನೋಟು ಕಾಗದ ಮುದ್ರಣ ಕಾರ್ಖಾನೆ) ತನ್ನ ಸಿಎಸ್‌ಆರ್ (ಕಾರ್ಪೊರೇಟ್ ಸಂಸ್ಥೆಗಳ ಸಾಮಾಜಿಕ ಜವಾಬ್ದಾರಿ) ನಿಧಿಯೊಂದಿಗೆ ಕೈಜೋಡಿಸಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಕಾರ ನೀಡಿವೆ.

ಮುಖ್ಯಾಂಶಗಳು

- ಜಿಲ್ಲೆಯಲ್ಲಿ 2,100 ಅಪೌಷ್ಟಿಕ ಮಕ್ಕಳು ಗುರುತು
- ಮೊದಲ ಹಂತದಲ್ಲಿ 650 ಮಕ್ಕಳಿಗೆ ಆಹಾರದ ಕಿಟ್
- ಬಿಎನ್‌ಪಿಎಂನಿಂದ ಸಿಎಸ್‌ಆರ್‌ನಲ್ಲಿ ಅನುದಾನ

ಈಗ ಗುರುತಿಸಲಾಗಿರುವ ಅಪೌಷ್ಟಿಕ ಮಕ್ಕಳ ರಕ್ತಪರೀಕ್ಷೆ ನಡೆಸಲಾಗಿದೆ. ಆರು ತಿಂಗಳ ನಂತರ ಮತ್ತೊಮ್ಮೆ ನಡೆಸಿ ಆರೋಗ್ಯದ ಸ್ಥಿತಿ ವಿಶ್ಲೇಷಿಸಲಾಗುವುದು

ಸಿರಾಜ್ ಮಹಮದ್
ಜಿಲ್ಲಾ ಆರ್‌ಸಿಎಚ್ ಅಧಿಕಾರಿ



ಕಿಟ್‌ನಲ್ಲೇನಿರಲಿದೆ?

ಸಿಎಫ್‌ಟಿಆರ್‌ಐ ಸಿದ್ಧಪಡಿಸುವ ಪೌಷ್ಟಿಕ ಆಹಾರದ ಕಿಟ್‌ಗಳನ್ನು ಅಂಗನವಾಡಿ ಕೇಂದ್ರಗಳ ಮೂಲಕ ಮಕ್ಕಳಿಗೆ ನೀಡಲಾಗುತ್ತದೆ.

ಸೋಮವಾರ ಮತ್ತು ಗುರುವಾರ 8.1 ಗ್ರಾಂ. ಪ್ರೊಟೀನ್, 4 ಮಿ.ಗ್ರಾಂ. ಕಬ್ಬಿಣಾಂಶ, 100 ಮಿಗ್ರಾಂ ಕ್ಯಾಲ್ಸಿಯಂ ಒಳಗೊಂಡಿರುವ ಬರ್ಫಿ, ಮಂಗಳವಾರ 5 ಗ್ರಾಂ. ಪ್ರೊಟೀನ್, 4 ಮಿ.ಗ್ರಾಂ. ಕಬ್ಬಿಣಾಂಶ ಒಳಗೊಂಡಿರುವ ಬಿಸ್ಕತ್ತುಗಳನ್ನು, 3.8 ಮಿ.ಗ್ರಾಂ. ಸತುವನ್ನು ಒಳಗೊಂಡಿರುವ ಮಾವಿನ ಬಾರ್, ಬುಧವಾರ 4. ಗ್ರಾಂ. ಪ್ರೊಟೀನ್ ಮತ್ತು 1.3 ಗ್ರಾಂ. ಕಬ್ಬಿಣಾಂಶ ಒಳಗೊಂಡಿರುವ ಸ್ಪಿರುಲಿನಾ ಚಿಕ್ಕಿ, ಶುಕ್ರವಾರ 40 ಮಿ.ಗ್ರಾಂ. ವಿಟಮಿನ್ 'ಸಿ' ಮತ್ತು 3 ಮಿ.ಗ್ರಾಂ. ಕಬ್ಬಿಣಾಂಶ ಒಳಗೊಂಡಿರುವ ಮ್ಯಾಂಗೊಬಾರ್ ಮತ್ತು ಗ್ಲೂಕೋಸ್ ಆಮ್ಲ ಪಾನೀಯ; ಶನಿವಾರ ಸ್ಪಿರುಲಿನಾ ಚಿಕ್ಕಿಯನ್ನು ವಿತರಿಸಲಾಗುತ್ತದೆ.

ಯಶಸ್ಸು ಆಧರಿಸಿ ವಿಸ್ತರಣೆ: ಈ ಮಕ್ಕಳಿಗೆ ಸಿಎಫ್‌ಟಿಆರ್‌ಐ ವಿಜ್ಞಾನಿಗಳ ತಾಂತ್ರಿಕ ಹಾಗೂ ವೈಜ್ಞಾನಿಕ ಸಲಹೆಯನ್ನು ಆಧರಿಸಿ, ಪ್ರೊಟೀನ್ ಮತ್ತು ಸೂಕ್ಷ್ಮ ಪೋಷಕಾಂಶಗಳ ಕೊರತೆಯನ್ನು ನೀಗಿಸುವ 'ಸಿದ್ಧಪಡಿಸಿದ ಆಹಾರದ ಕಿಟ್'ಗಳನ್ನು ವಿತರಣೆಗೆ ಚಾಲನೆ ನೀಡಲಾಗಿದೆ. ಇದನ್ನು ಸೇವಿಸುವುದರಿಂದ ಆ ಮಕ್ಕಳಲ್ಲಿ ಆಗಬಹುದಾದ ಬದಲಾವಣೆ ಅಥವಾ ಸುಧಾರಣೆಯನ್ನು ವಿಶ್ಲೇಷಿಸಲಾಗುವುದು. ಇದರ ಯಶಸ್ಸನ್ನು ಆಧರಿಸಿ ಇತರ ಮಕ್ಕಳಿಗೂ 'ಸಿದ್ಧಪಡಿಸಿದ ಆಹಾರದ ಕಿಟ್' ನೀಡುವುದಕ್ಕೆ ಉದ್ದೇಶಿಸಲಾಗಿದೆ.



ಮೈಸೂರಿನ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ

ಮಕ್ಕಳನ್ನು ಪರೀಕ್ಷೆಗೆ ಒಳಪಡಿಸಿ, ಅಪೌಷ್ಟಿಕತೆಗೆ ಕಾರಣವಾದ ಅಂಶಗಳನ್ನು ಅವಲೋಕಿಸಿ ಅವರಿಗೆ ಎಂತಹ ಪೂರಕ ಪೌಷ್ಟಿಕ ಆಹಾರ ಕೊಡಬೇಕು ಎಂಬುದನ್ನು ನಿರ್ಣಯಿಸಲಾಗಿದೆ. ಯಾವ ಪೋಷಕಾಂಶ ಪ್ರಮಾಣ ಕಡಿಮೆ ಇದೆ ಎಂಬುದನ್ನು ಗುರುತಿಸಲಾಗಿದ್ದು, ಅದಕ್ಕೆ ತಕ್ಕಂತೆ ಪೋಷಕಾಂಶ ಲಭ್ಯವಾಗುವಂತೆ ಮಾಡಲಾಗುತ್ತಿದೆ.

'ಮಕ್ಕಳಲ್ಲಿನ ಅಪೌಷ್ಟಿಕತೆ ಹೋಗಲಾಡಿ ಸಲು ಪೂರಕ ಪೋಷಕಾಂಶ ಒದಗಿಸುವ ಇಂತಹ ಕಾರ್ಯಕ್ರಮಗಳು ಅಗತ್ಯವಿದೆ. ಸಿಎಫ್‌ಟಿಆರ್‌ನಿಂದ ನೀಡಲಾಗುವ ಆಹಾರದ ಕಿಟ್‌ಗಳನ್ನು ಅಂಗನವಾಡಿಗಳಲ್ಲಿ ಗುರುತಿಸಲಾದ ಮಕ್ಕಳಿಗೆ ವಿತರಿಸಲಾಗುವುದು. ಸಾಂಕೇತಿಕವಾಗಿ ಕೆಲವು ಮಕ್ಕಳಿಗೆ ವಿತರಿಸಲಾಗಿದೆ. ಉಳಿದವುಗಳನ್ನು ಸಿದ್ಧಪಡಿಸುವ ಕೆಲಸವನ್ನು ಸಂಶೋಧನಾಲಯ ಮಾಡುತ್ತಿದೆ' ಎಂದು ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಬಸವರಾಜು 'ಪ್ರಜಾವಾಣಿ'ಗೆ ತಿಳಿಸಿದರು.

'ಜಿಲ್ಲೆಯ ನಂಜನಗೂಡು ಮತ್ತು ಪಶ್ಚಿಮ ಬಂಗಾಳದ ಪುರುಲಿಯಾದಲ್ಲಿ ಪ್ರಾಯೋಗಿಕವಾಗಿ ನಡೆಸಿದ್ದ ಪೂರಕ ಪೌಷ್ಟಿಕ ಆಹಾರ ವಿತರಣೆ ಕಾರ್ಯಕ್ರಮದ ಯಶಸ್ಸನ್ನು ಆಧರಿಸಿ ಇಲ್ಲೂ ತಾಂತ್ರಿಕ ಸಹಕಾರದೊಂದಿಗೆ ಕಿಟ್ ವಿತರಣೆಗೆ ಕ್ರಮ ವಹಿಸಲಾಗಿದೆ' ಎನ್ನುತ್ತಾರೆ ಸಿಎಫ್‌ಟಿಆರ್‌ಐ ನಿರ್ದೇಶಕಿ ಶ್ರೀದೇವಿ ಅನ್ನಪೂರ್ಣಾ ಸಿಂಗ್.

ಸುದ್ದಿ 2 ನಿಮಿಷ

2ನೇ ಮದುವೆಗೆ ಮುಂದಾಗಿದ್ದ ವ್ಯಕ್ತಿಗೆ ಕಲ್ಯಾಣ ಮಂಟಪದಲ್ಲೇ ಥಳಿತ

ಚಿತ್ರದುರ್ಗ: ಎರಡನೇ ಮದುವೆಗೆ ಮುಂದಾಗಿದ್ದ ಗಂಡನಿಗೆ ಕಲ್ಯಾಣ ಮಂಟಪದಲ್ಲೇ ಪತ್ನಿ ಚಪ್ಪಲಿಯಿಂದ ಹೊಡೆದಿದ್ದಾರೆ. ನಗರದ ಗಾಯತ್ರಿ ಕಲ್ಯಾಣ ಮಂಟಪದಲ್ಲಿ ಶನಿವಾರ ರಾತ್ರಿ ಈ ಪ್ರಸಂಗ ನಡೆದಿದೆ.

ಚಿಕ್ಕಮಗಳೂರು ಜಿಲ್ಲೆ ಅರಸೀಕೆರೆಯ ತಿಪ್ಪಘಟ್ಟದ ಎಂ.ಕಾರ್ತಿಕ್ ನಾಯ್ಕ ಎರಡನೇ ವಿವಾಹಕ್ಕೆ ಸಿದ್ಧತೆ ನಡೆಸಿದ್ದರು. ವಿಷಯ ತಿಳಿದ ದಾವಣಗೆರೆ ಜಿಲ್ಲೆ ನ್ಯಾಮತಿ ತಾಲ್ಲೂಕಿನ ಮುಸ್ಸೇನಾಳ್‌ನ ತನುಜಾ, ಕುಟುಂಬದವರೊಂದಿಗೆ ಕಲ್ಯಾಣ ಮಂಟಪಕ್ಕೆ ಬಂದಿದ್ದರು.

ಕಾರ್ತಿಕ್, ಹೊಸ ಬಟ್ಟೆ ತೊಟ್ಟು ಆರತಕ್ಷತೆಗೆ ಸಿದ್ಧವಾಗಿದ್ದರು. ಅವರಿದ್ದ ಕೊಠಡಿಗೆ ನುಗ್ಗಿದ ತನುಜಾ ಕಡೆಯವರು ಹಲ್ಲೆ ನಡೆಸಿದ್ದಾರೆ. ಇದನ್ನು ಕಂಡು ವಧುವಿನ ಕಡೆಯವರು ವಿಚಲಿತರಾಗಿದ್ದಾರೆ. ತನುಜಾ ಸಂಬಂಧಿಕರು ಕಾರ್ತಿಕ್‌ನ ವಂಚನೆಯ ಬಗ್ಗೆ ತಿಳಿಸಿದ ಬಳಿಕ ಮದುವೆ ರದ್ದುಮಾಡಲಾಗಿದೆ.

'ಕಾರ್ತಿಕ್ ಹಾಗೂ ತನುಜಾ ನಾಲ್ಕು ವರ್ಷಗಳ ಹಿಂದೆ ವಿವಾಹವಾಗಿದ್ದರು. ಮನಸ್ತಾಪದ ಕಾರಣ ಕೆಲ ಸಮಯದಿಂದ ದೂರ ಇದ್ದರು. ಇದೀಗ ವರದಕ್ಷಿಣೆ ಆಸೆಗೆ ಆತ ಎರಡನೇ ಮದುವೆಗೆ ಮುಂದಾಗಿದ್ದ' ಎಂದು ಕುಟುಂಬದವರು ಆರೋಪಿಸಿದ್ದಾರೆ. ಘಟನೆಯಿಂದ ಆಘಾತಕ್ಕೊಳಗಾಗಿರುವ ತನುಜಾ, ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಾರ್ತಿಕ್ ವಿರುದ್ಧ ನಗರ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಾವೇರಿ ಆರತಿ: ವಿರೋಧದ ನಡುವೆಯೂ ಕಾಮಗಾರಿ



ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆ ಸಮೀಪ, ಬೃಂದಾವನದ ಬಳಿ ನಡೆಸಲು ಉದ್ದೇಶಿಸಿರುವ ₹92.3 ಕೋಟಿ ವೆಚ್ಚದ 'ಕಾವೇರಿ ಆರತಿ' ಕಾರ್ಯಕ್ರಮಕ್ಕಾಗಿ ಸಿದ್ಧತಾ ಕಾಮಗಾರಿ ಭಾನುವಾರದಿಂದ ಆರಂಭಿಸಲಾಗಿದೆ. ರೈತರು, ಪ್ರಗತಿಪರ ಸಂಘಟನೆಗಳ ವಿರೋಧದ ನಡುವೆಯೂ ತಯಾರಿ ಮಾಡಿಕೊಳ್ಳಲಾಗುತ್ತಿದೆ.

ದೋಣಿ ವಿಹಾರ ಕೇಂದ್ರಕ್ಕೆ ಕೂಗಳತೆ ದೂರದಲ್ಲಿ ನದಿಗೆ ಸೋಪಾನ ಕಟ್ಟೆ ನಿರ್ಮಿಸಲು ಮಣ್ಣು ತುಂಬಲಾಗುತ್ತಿದೆ. ಕಾಮಗಾರಿ ಗುತ್ತಿಗೆ ಪಡೆದಿರುವ ಕಂಪನಿಯು ಆರತಿ ನಡೆಯುವ ಸ್ಥಳದ ಸಮತಟ್ಟು ಕಾರ್ಯ ಆರಂಭಿಸಿದೆ.

ನದಿ ತೀರದ ಹಳ್ಳ–ಕೊಳ್ಳಗಳಿಗೆ ಮಣ್ಣು ತುಂಬಲಾಗುತ್ತಿದೆ. ಆರತಿ ನಡೆಸಲು 45X45 ಮೀಟರ್ ಅಳತೆಯ ಸೋಪಾನ ಮತ್ತು ಜನರು ಕುಳಿತು ಕಾರ್ಯಕ್ರಮ ವೀಕ್ಷಿಸಲು 75X75 ಮೀಟರ್ ಅಳತೆಯ ಅಂಕಣ ಸಿದ್ಧಗೊಳ್ಳಲಿದೆ ಎಂದು ಆ ಕಂಪನಿಗಳ ಪ್ರತಿನಿಧಿಗಳು ತಿಳಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಪ್ರತ್ಯೇಕ ವೇದಿಕೆ ನಿರ್ಮಾಣವಾಗಲಿದೆ. ಇದರ ಪಕ್ಕದಲ್ಲೇ ಸಂಗೀತ ನೃತ್ಯ ಕಾರಂಜಿ ಕೂಡ ಇರಲಿದೆ. ಅಕ್ಟೋಬರ್ ಮೊದಲ ವಾರದಲ್ಲಿ ಕಾಮಗಾರಿ ಪೂರ್ಣಗೊಳಿಸಿ ಕಾವೇರಿ ಆರತಿ ಕಾರ್ಯಕ್ರಮ ನಡೆಸಲು ಯೋಜಿಸಲಾಗಿದೆ ಎಂದು ಕಾವೇರಿ ನೀರಾವರಿ ನಿಗಮದ ಮೂಲಗಳು ತಿಳಿಸಿವೆ.

'ಪರಿಹಾರ ಕೊಟ್ಟರೆ ಮಗ ಬರ್ತಾನ?'

ತುಮಕೂರು: 'ಮುಂದಿನ ತಿಂಗಳು ಮಗನ ಹುಟ್ಟುಹಬ್ಬ ಇತ್ತು. ಅವನಿಗಾಗಿ ಹೊಸ ಬೈಕ್ ಬುಕ್ ಮಾಡಿದ್ದೆ, ಇದ್ದ ಒಬ್ಬ ಮಗನೂ ನಮ್ಮನ್ನು ಅಗಲಿದ್ದಾನೆ'

ಜೂನ್ 4ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿದಲ್ಲಿ ಮೃತಪಟ್ಟ ಮನೋಜ್‌ಕುಮಾರ್ ತಂದೆ ದೇವರಾಜು ಮಾತನಾಡುತ್ತಲೇ ಮಗನನ್ನು ನೆನೆದು ಕಣ್ಣೀರು ಹಾಕಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಭಾನುವಾರ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ₹25 ಲಕ್ಷ ಪರಿಹಾರದ ಚೆಕ್ ವಿತರಿಸಿದರು. ಈ ವೇಳೆ ಅವರು ಮಗನ ನೆನಪಲ್ಲಿ ಕಂಬನಿ ಮಿಡಿದರು.

ಕುಣಿಗಲ್ ತಾಲ್ಲೂಕಿನ ನಾಗಸಂದ್ರದ ದೇವರಾಜು ಬೆಂಗಳೂರಿನಲ್ಲಿ ತಳ್ಳುವ ಗಾಡಿಯಲ್ಲಿ ಪಾನಿಪೂರಿ ವ್ಯಾಪಾರ ಮಾಡುತ್ತಿದ್ದಾರೆ. ಕಷ್ಟಗಳ ಮಧ್ಯೆ ಮಗನಿಗೆ ಉತ್ತಮ ಶಿಕ್ಷಣ ಕೊಡಿಸಿದ್ದರು. ಮನೋಜ್ ಬೆಂಗಳೂರಿನಲ್ಲಿ ಬಿಬಿಎಂ ಕೋರ್ಸ್ ಓದುತ್ತಿದ್ದ.

'ಸರ್ಕಾರ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕಿತ್ತು. ಜೀವನಕ್ಕೆ ಆಧಾರವಾಗಿದ್ದ ಮಕ್ಕಳನ್ನು ಕಳೆದುಕೊಂಡವರ ಸ್ಥಿತಿ ಏನಾಗಬೇಡ. ಎಷ್ಟೇ ಹಣ ಕೊಟ್ಟರೂ ಮಗ ವಾಪಸ್ ಬರಲ್ಲ. ನಮ್ಮ ಬೆನ್ನೆಲುಬಾಗಿ ನಿಂತುಕೊಳ್ಳುತ್ತಾನೆ ಎಂಬ ಆಸೆ ಇತ್ತು. ಅವನು ದುಡಿಯದಿದ್ದರೂ ಪರವಾಗಿಲ್ಲ, ಕಣ್ಣ ಮುಂದೆ ಇದ್ದಿದ್ದರೆ ಸಾಕಿತ್ತು' ಎಂದು ದೇವರಾಜ್ ಅಸಹಾಯಕತೆ ವ್ಯಕ್ತಪಡಿಸಿದರು.

'ಕಾಲ್ತುಳಿತ ಪ್ರಕರಣ: ಸರ್ಕಾರದ ತಪ್ಪಿಲ್ಲ'

ಲೋಪ ಎಸಗಿದ್ದರಿಂದಲೇ ದಯಾನಂದ ಸೇರಿದಂತೆ ಹಲವರ ವಿರುದ್ಧ ಕ್ರಮ: ಸಿ.ಎಂ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮೈಸೂರು: 'ಬೆಂಗಳೂರು ಕಾಲ್ತುಳಿತ ಪ್ರಕರಣದಲ್ಲಿ ರಾಜ್ಯ ಸರ್ಕಾರದ್ದು ಯಾವುದೇ ತಪ್ಪಿಲ್ಲ. ಈ ವಿಚಾರದಲ್ಲಿ ಬಿಜೆಪಿ–ಜೆಡಿಎಸ್ ರಾಜಕೀಯವಾಗಿ ಆರೋಪ ಮಾಡುತ್ತಿವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದರು.

ಇಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಪ್ರಕರಣದಲ್ಲಿ ಮೇಲ್ನೋಟಕ್ಕೆ ಯಾರ್‍ಯಾರ ಲೋಪ ಇದೆಯೋ ಅವರ ಮೇಲೆ ಕ್ರಮ ಜರುಗಿಸಲಾಗಿದೆ. ವಿರೋಧ ಪಕ್ಷಗಳ ಬೇಡಿಕೆಯಂತೆ ನ್ಯಾಯಾಂಗ ತನಿಖೆಗೆ ಆದೇಶಿಸಿದ್ದೇನೆ. ಯಾರ ಮೇಲೂ ಏಕಮುಖವಾಗಿ ಕ್ರಮ ಕೈಗೊಂಡಿಲ್ಲ' ಎಂದರು.

'ಕಾರ್ಯಕ್ರಮದ ಬಂದೋಬಸ್ತ್ ಬಗ್ಗೆ ಬೆಂಗಳೂರು ಪೊಲೀಸ್ ಕಮಿಷನರ್ ನನಗೆ ಮಾಹಿತಿ ನೀಡಿರಲಿಲ್ಲ. ಅದು ಪೊಲೀಸರ ಲೋಪ. ಪೊಲೀಸ್ ಕಮಿಷನರ್ ಅವರನ್ನು ಮಾತ್ರ ಅಮಾನತು ಮಾಡಿಲ್ಲ. ಐವರು ಹಿರಿಯ ಅಧಿಕಾರಿ ಗಳನ್ನು ಅಮಾನತು ಮಾಡಿದ್ದು, ಗುಪ್ತಚರ ವಿಭಾಗದವರನ್ನು ವರ್ಗಾವಣೆ ಮಾಡಿದ್ದೇವೆ.



ಕಾಲ್ತುಳಿತದಂತಹ ಘಟನೆ ಯಾರ ಕಾಲದಲ್ಲೂ ನಡೆಯಬಾರದು. ಇದರಿಂದ ಎಲ್ಲರಂತೆ ನನಗೂ ನೋವಾಗಿದೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಗೋವಿಂದರಾಜು ಅವರನ್ನು ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ತೆಗೆಯಲಾಗಿದೆ' ಎಂದರು.

ವಿಧಾನಸೌಧ ಕಾರ್ಯಕ್ರಮಕ್ಕೆ ಮಾತ್ರ ಆಹ್ವಾನ: 'ಕಾರ್ಯಕ್ರಮ ಸಂಬಂಧ ಕೆಎಸ್‌ಸಿಎ ಕಾರ್ಯದರ್ಶಿ ಹಾಗೂ ಖಜಾಂಚಿ ನನ್ನನ್ನು ಆಹ್ವಾನಿಸಿದ್ದರು. ವಿಧಾನಸೌಧದ ಎದುರಿಗೆ ನಡೆದ ಕಾರ್ಯಕ್ರಮಕ್ಕೆ ಅನುಮತಿ ನೀಡಿ ಎಂದು ಅಧಿಕಾರಿಗಳಿಗೆ ಹೇಳಿದ್ದೆ. ಅದರಲ್ಲಿ ರಾಜ್ಯಪಾಲರೂ ಪಾಲ್ಗೊಂಡಿದ್ದರು. ಅಲ್ಲಿ ಯಾವುದೇ ಲೋಪ ಆಗಿಲ್ಲ. ಆದರೆ, ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿದ್ದು, ಅಲ್ಲಿ ಭದ್ರತಾ ಲೋಪ ಎಸಗಿದ ಪೊಲೀಸರ ಮೇಲೆ ಕ್ರಮ ಜರುಗಿಸಲಾಗಿದೆ. ಮಧ್ಯಾಹ್ನ 3.50ಕ್ಕೆ ಕಾಲ್ತುಳಿತದಿಂದ ಸತ್ತದ್ದು ವರದಿಯಾಗಿದ್ದರೂ, ನನಗೆ ಸಂಜೆ 5.45ಕ್ಕೆ ಮಾಹಿತಿ ತಿಳಿಯಿತು' ಎಂದರು.

'ಬಿಜೆಪಿಯವರೇ ಆಟಗಾರರ ಮೆರವಣಿಗೆಗೆ ಅನುಮತಿ ನೀಡುವಂತೆ ಕೋರಿ ಪತ್ರ ಬರೆದಿದ್ದರು. ಈಗ ಉಲ್ಟಾ ಹೊಡೆದಿದ್ದಾರೆ. ವಿಧಾನಸೌಧದ ಮುಂಭಾಗ ಮಾಡಿ ಎಂದು ನಾನು ಹೇಳದೇ ಹೋಗಿದ್ದರೆ ಬಿಜೆಪಿಯವರು ಬೇರೆಯದ್ದೇ ಬಣ್ಣ ಕಟ್ಟುತ್ತಿದ್ದರು' ಎಂದು 'ಬಿಜೆಪಿ ಕರ್ನಾಟಕ' ಮಾಡಿದ್ದ 'ಎಕ್ಸ್' ಪೋಸ್ಟ್ ಪ್ರದರ್ಶಿಸಿದರು.

'ಕುಂಭಮೇಳದಲ್ಲಿ 50–60 ಜನ ಸತ್ತಾಗ ಯಾರಾದರೂ ಮೋದಿ ರಾಜೀನಾಮೆ ಕೇಳಿದ್ದರಾ? ಅವರು ಕೊಟ್ಟರಾ? ಸೇತುವೆ ಬಿದ್ದು ನೂರಾರು ಮಂದಿ ಸತ್ತು ಹೋದರಲ್ಲಾ, ಆಗ ರಾಜೀನಾಮೆ ಕೇಳಿದ್ದರಾ?' ಎಂದರು.

'ಕ್ರಿಕೆಟ್ ಮೈದಾನವನ್ನು ಬೆಂಗಳೂರು ಹೊರವಲಯಕ್ಕೆ ಸ್ಥಳಾಂತರಿಸುವ ಸಂಬಂಧ ಪರಿಶೀಲಿಸಲಾಗುವುದು. ದೊಡ್ಡ ಜಾಗ ಬೇಕಾಗುತ್ತದೆ' ಎಂದರು. 'ಸುಹಾಸ್ ಶೆಟ್ಟಿ ಕೊಲೆ ಪ್ರಕರಣ ವನ್ನು ಎನ್‌ಐಎಗೆ ವಹಿಸಿರುವ ಸಂಬಂಧ ಅಡ್ವೊಕೇಟ್ ಜನರಲ್ ಜತೆ ಚರ್ಚಿಸಲು ಡಿಐಜಿಗೆ ಸೂಚಿಸಿದ್ದೇನೆ' ಎಂದರು.

'ಸರ್ಕಾರದ ಬೇಜಾವಾಬ್ದಾರಿ, ಜನ ಮರೆಯಲ್ಲ'



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತ ಪ್ರಕರಣದಲ್ಲಿ ಅಧಿಕಾರಿಗಳನ್ನು ಅಮಾನತುಗೊಳಿಸಿ ಜನರ ಆಕ್ರೋಶ ತಣ್ಣಗಾಗಿಸಿ, ಪ್ರಕರಣವನ್ನು ಮರೆಸಲು ಸರ್ಕಾರ ಯತ್ನಿಸುತ್ತಿದೆ. ಈ ಪ್ರಕರಣವನ್ನು ಜನರು ಮರೆಯಲ್ಲ. ಪ್ರಕರಣ ಕೋರ್ಟ್‌ನಲ್ಲಿದೆ. ಕೋರ್ಟ್ ಕಠಿಣ ಕ್ರಮ ಕೈಗೊಳ್ಳುವ ವಿಶ್ವಾಸ ಇದೆ

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

'ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಿ'



ಆರ್‌ಸಿಬಿ ಗೆಲುವಿನ ಗಾಂಭೀರ್ಯ ಅರ್ಥ ಮಾಡಿಕೊಳ್ಳದೆ, ಆತುರದ ಪ್ರಚಾರಕೋಸ್ಕರ ಕರ್ನಾಟಕದ ಮರ್ಯಾದೆ ಹಾಳು ಮಾಡಿದ್ದೀರಿ. ಜನರಿಗೆ ನೋವು ನೀಡಿದ್ದೀರಿ. ನಿಮ್ಮ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಿ

ವಿ. ಸೋಮಣ್ಣ, ರೈಲ್ವೆ ಖಾತೆ ರಾಜ್ಯ ಸಚಿವ

'ಪ್ರಧಾನಿ ರಾಜೀನಾಮೆ ಕೇಳಿದ್ದೆವೇ?'



ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಗೆ 26 ಜನ ಮೃತಪಟ್ಟರು. ಅದು ಕೇಂದ್ರ ಸರ್ಕಾರದ ವೈಫಲ್ಯ ಅಲ್ಲವೆ, ನಾವು ಪ್ರಧಾನಿ ರಾಜೀನಾಮೆ ಕೇಳಿದ್ದೆವೇ. ಹಿಂದಿನ ಸರ್ಕಾರಗಳಿದ್ದಾಗ ಬಹಳಷ್ಟು ಘಟನೆಗಳು ನಡೆದಿವೆ. ನಾವು ರಾಜೀನಾಮೆ ಕೇಳಿರಲಿಲ್ಲ

ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ

'ನಾವೇ ಹಣ ಕೊಡುತ್ತೇವೆ ಮಗಳನ್ನು ಕೊಡಿ'

ಪ್ರಜಾವಾಣಿ ವಾರ್ತೆ

ಕೋಲಾರ: 'ಅತ್ಯಂತ ಮುದ್ದಾಗಿ ಮಗನಂತೆ ಬೆಳೆಸಿದ್ದ ಮಗಳೇ ಇಲ್ಲವಾದ ಮೇಲೆ ಈ ಚೆಕ್ ಪಡೆದು ಏನು ಪ್ರಯೋಜನ? ಮಗಳನ್ನು ವಾಪಸ್ ತರಲು ಸಾಧ್ಯವೇ? ಮಗಳು ಈಜು, ಡ್ರೈವಿಂಗ್‌ನಲ್ಲೂ ಪರಿಣತಿ ಹೊಂದಿದ್ದಳು. ಅಂತಹ ಮಗಳನ್ನೇ ಕಳೆದುಕೊಂಡಿದ್ದೇವೆ. ಈ ಹಣ ನಮಗೆ ಬೇಡ' ಎಂದು ಮೃತ ಸಹನಾ ಅವರ ಪೋಷಕರು ಕಣ್ಣೀರಿಟ್ಟರು.

ಆರ್‌ಸಿಬಿ ವಿಜಯೋತ್ಸವ ವೇಳೆ ಕಾಲ್ತುಳಿತದಲ್ಲಿ ಮೃತಪಟ್ಟ ಸಾಫ್ಟ್‌ವೇರ್ ಎಂಜಿನಿಯರ್ ಸಹನಾ ಅವರ ಕುಟುಂಬಕ್ಕೆ ರಾಜ್ಯ ಸರ್ಕಾರ ಘೋಷಿಸಿರುವ ₹25 ಲಕ್ಷ ಪರಿಹಾರದ ಮೊತ್ತದ ಚೆಕ್‌ಅನ್ನು ಪೋಷಕರಿಗೆ ಹಸ್ತಾಂತರಿಸಲು ನಗರದ ಎಸ್‌.ಜಿ.ಬಡಾವಣೆಯ ಅವರ ನಿವಾಸಕ್ಕೆ ಜಿಲ್ಲಾಧಿಕಾರಿ ಎಂ.ಆರ್.ರವಿ ಭಾನುವಾರ ಭೇಟಿ ನೀಡಿದಾಗ ಈ ಹೃದಯ ಹಿಂಡುವ ಸನ್ನಿವೇಶ ಎದುರಾಯಿತು. ಆಗ ಜಿಲ್ಲಾಧಿಕಾರಿ ರವಿ ಹಾಗೂ ಸ್ನೇಹಿತರು ಶಿಕ್ಷಕ ದಂಪತಿ ಸುರೇಶ್ ಬಾಬು, ಮಂಜುಳಾ ಅವರ ಮನವೊಲಿಸಲು ಪ್ರಯತ್ನಿಸಿದರು.

ದಂಪತಿ ಹಾಗೂ ಅವರ ಮತ್ತೊಬ್ಬಳು ಮಗಳಿಗೆ ಸಾಂತ್ವನ ಹೇಳಿದ ಜಿಲ್ಲಾಧಿಕಾರಿ, 'ಕ್ರೀಡೆ, ಓದಿನಲ್ಲೂ ಸಾಧಕಿಯಾಗಿದ್ದ 24 ವರ್ಷದ ಮಗಳನ್ನು ಕಳೆದುಕೊಂಡ ತಮ್ಮ ನೋವು ನಮಗೆ ಅರ್ಥವಾಗುತ್ತದೆ. ಪ್ರಥಮ ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿರುವ ಇನ್ನೊಬ್ಬ ಪುತ್ರಿಯ ಉನ್ನತ ವ್ಯಾಸಂಗಕ್ಕೆ ಈ ಹಣ ಬಳಸಿಕೊಳ್ಳಿ' ಎಂದು ಮನವೊಲಿಸಿ ಚೆಕ್ ಹಸ್ತಾಂತರಿಸಿದರು.

ಸಹನಾ ಅವರ ತಂಗಿ ಚಂದನಾ ಕೈಗೆ ಜಿಲ್ಲಾಧಿಕಾರಿ ಚೆಕ್ ನೀಡಿದರು. ಎಲ್ಲರ ಒತ್ತಾಯಕ್ಕೆ ಮಣಿದು ಪೋಷಕರು ಕೈ ಜೋಡಿಸಿದರು. ಆಗ ಮತ್ತೆ ಅವರ ದುಃಖ ಕಟ್ಟೆಯೊಡೆಯಿತು.



ರಾಜ್ಯ ಸರ್ಕಾರದ ₹25 ಲಕ್ಷ ಪರಿಹಾರ ಮೊತ್ತದ ಚೆಕ್ ಅನ್ನು ಸಹನಾ ಅವರ ಪೋಷಕರು ಹಾಗೂ ಸಹೋದರಿಗೆ ಜಿಲ್ಲಾಧಿಕಾರಿ ಎಂ.ಆರ್.ರವಿ ಹಸ್ತಾಂತರಿಸಿದರು

ಶಿಕ್ಷಕ ದಂಪತಿ ಸುರೇಶ್ ಬಾಬು ಹಾಗೂ ಮಂಜುಳಾ ಅವರ ಹಿರಿಯ ಪುತ್ರಿ ಸಹನಾ (24) ಎಂಜಿನಿಯರಿಂಗ್ ಪದವಿ ಮುಗಿಸಿ ಬೆಂಗಳೂರಿನ ಬಾಷ್ ಕಂಪನಿಯಲ್ಲಿ ಉದ್ಯೋಗದಲ್ಲಿದ್ದರು.

ಆರ್‌ಸಿಬಿ ತಂಡದ ಅಭಿಮಾನಿಯಾಗಿದ್ದ ಸಹನಾ, ಜೂನ್ 4ರಂದು ಮಧ್ಯಾಹ್ನ ಕೆಲಸಕ್ಕೆ ಅರ್ಧದಿನ ರಜೆ ಹಾಕಿ ಐಪಿಎಲ್ ಚಾಂಪಿಯನ್ ಆರ್‌ಸಿಬಿ ತಂಡದ ವಿಜಯೋತ್ಸವ ನೋಡಲು ಸ್ನೇಹಿತರೊಂದಿಗೆ ಎಂ.ಚಿನ್ನಸ್ವಾಮಿ ಕ್ರೀಡಾಂಗಣ ಬಳಿ ತೆರಳಿದ್ದರು. ಈ ವೇಳೆ ನೂಕು ನುಗ್ಗಲಿನಿಂದ ಉಂಟಾದ ಕಾಲ್ತುಳಿತದಲ್ಲಿ ಅಸ್ವಸ್ಥಗೊಂಡು ಮೃತಪಟ್ಟರು. ಹುಟ್ಟೂರು ಕೆಜಿಎಫ್ ತಾಲ್ಲೂಕಿನ ಬಡಮಾಕನಹಳ್ಳಿಯಲ್ಲಿ ಜೂನ್ 5 ರಂದು ಅಂತ್ಯಕ್ರಿಯೆ ನಡೆದಿತ್ತು.

ಅಖಿಲ ಭಾರತ ಭಟ್ಟಾರಕ ಸಮ್ಮೇಳನ ಹಾಗೂ ಜೈನ ಸಮಾವೇಶದಲ್ಲಿ ಎಚ್ಚರಿಕೆ

'ಬೇಡಿಕೆ ಈಡೇರಿಸದಿದ್ದರೆ ಸಮಾಧಿ ಸಲ್ಲೇಖನ ವ್ರತ'

ಪ್ರಜಾವಾಣಿ ವಾರ್ತೆ

ಕಾಗವಾಡ (ಬೆಳಗಾವಿ ಜಿಲ್ಲೆ): 'ಜೈನ ಸಮುದಾಯದ ಕಲ್ಯಾಣಕ್ಕಾಗಿ ಪ್ರತ್ಯೇಕ ಅಭಿವೃದ್ಧಿ ನಿಗಮ–ಮಂಡಳಿ ಸ್ಥಾಪಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ರಾಜ್ಯ ಸರ್ಕಾರಕ್ಕೆ 12 ತಿಂಗಳ ಗಡುವು ಕೊಟ್ಟಿದ್ದೇವೆ. ಅಷ್ಟರೊಳಗೆ ಈಡೇರಿಸದಿದ್ದರೆ, ಮುಂದಿನ ದಿನಗಳಲ್ಲಿ ಸಮಾಧಿ ಸಲ್ಲೇಖನ ವ್ರತ ಕೈಗೊಳ್ಳುತ್ತೇನೆ' ಎಂದು ಗುಣಧರನಂದಿ ಮಹಾರಾಜರು ಎಚ್ಚರಿಕೆ ಕೊಟ್ಟರು.

ತಾಲ್ಲೂಕಿನ ಐನಾಪುರದಲ್ಲಿ ಭಾನುವಾರ ಆಯೋಜಿಸಿದ್ದ ಅಖಿಲ ಭಾರತ ಭಟ್ಟಾರಕ ಸಮ್ಮೇಳನ ಹಾಗೂ ಜೈನ ಸಮಾವೇಶದಲ್ಲಿ ನೇತೃತ್ವ ವಹಿಸಿ ಅವರು ಮಾತನಾಡಿ, 'ಅಲ್ಪಸಂಖ್ಯಾತ ವರ್ಗದಲ್ಲಿ ಆರು ಸಮುದಾಯಗಳಿವೆ. ಆದರೆ, ರಾಜ್ಯ ಸರ್ಕಾರ ಮುಸ್ಲಿಮರಿಗಷ್ಟೇ ಎಲ್ಲ ಸೌಲಭ್ಯ ಒದಗಿಸಿ ಜೈನ ಸಮುದಾಯ ಕಡೆಗಣಿಸುತ್ತಿರುವುದು ಸರಿಯಲ್ಲ' ಎಂದು ದೂರಿದರು.



ಬೆಳಗಾವಿ ಜಿಲ್ಲೆಯ ಕಾಗವಾಡ ತಾಲ್ಲೂಕಿನ ಐನಾಪುರದಲ್ಲಿ ಭಾನುವಾರ ನಡೆದ ಅಖಿಲ ಭಾರತ ಭಟ್ಟಾರಕ ಸಮ್ಮೇಳನ ಹಾಗೂ ಜೈನ ಸಮಾವೇಶದಲ್ಲಿ ಜೈನ ಮುನಿಗಳು ರಾಜ್ಯಪಾಲ ಥಾವರಚಂದ್ ಗೆಹಲೋತ್‌ಗೆ ಮನವಿ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

'ಜೈನ ಸಮುದಾಯದ ಬಡ ವಿದ್ಯಾರ್ಥಿಗಳಿಗೆ ಹಿಂದಿನ ಸರ್ಕಾರ ನೀಡುತ್ತಿದ್ದ ವಿದ್ಯಾರ್ಥಿ ವೇತನವನ್ನು ಶೇ 80ರಷ್ಟು ಕಡಿತಗೊಳಿಸಲಾಗಿದ್ದು ಮೊದಲಿನಂತೆಯೇ ವಿದ್ಯಾರ್ಥಿವೇತನ ನೀಡಬೇಕು. ಮುಸ್ಲಿಮರಿಗೆ ಹಜ್ ಯಾತ್ರೆಗೆ ನೆರವು ಒದಗಿಸುತ್ತಿರುವ ಸರ್ಕಾರ, ಜೈನ ಸಮುದಾಯವರು ಉಚಿತವಾಗಿ 'ಸಮ್ಮೆದ್ ಶಿಖರ್ಜಿ ದರ್ಶನ' ಮಾಡಲು ಯೋಜನೆ ಘೋಷಿಸಬೇಕು' ಎಂದು ಒತ್ತಾಯಿಸಿದರು.

'ಈಚೆಗೆ ನಡೆಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ಯಲ್ಲಿ ಜೈನ ಸಮುದಾಯದ ಜನಸಂಖ್ಯೆ 1.5 ಲಕ್ಷ ಇದೆ ಎಂದು ಸರ್ಕಾರ ಹೇಳಿದೆ. ಆದರೆ, ಜೈನ ಸಮುದಾಯದ 20 ಲಕ್ಷ ಜನರಿದ್ದಾರೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹೇಳುತ್ತಾರೆ. ಹೀಗಾಗಿ ಗೊಂದಲವಾಗಿದ್ದು ಮತ್ತೊಮ್ಮೆ ಜಾತಿ ಜನಗಣತಿ ಮಾಡಿಸಿ' ಎಂದು ಆಗ್ರಹಿಸಿದರು.

ಸಮಾವೇಶ ಉದ್ಘಾಟಿಸಿದ ರಾಜ್ಯಪಾಲ ಥಾವರಚಂದ್ ಗೆಹಲೋತ್, 'ಜೈನ ಸಮುದಾಯದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ನೀಡಿರುವ ಮನವಿ ಕುರಿತು ಸರ್ಕಾರ ದೊಂದಿಗೆ ಚರ್ಚಿಸಿ, ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಿಸುತ್ತೇನೆ' ಎಂದರು.

ಭಟ್ಟಾರಕ ಸ್ವಾಮೀಜಿಗಳು ಸಾನ್ನಿಧ್ಯ ವಹಿಸಿದ್ದರು. ಶಾಸಕರಾದ ಲಕ್ಷ್ಮಣ ಸವದಿ, ರಾಜು ಕಾಗೆ, ಅಭಯ ಪಾಟೀಲ, ಗಣೇಶ ಹುಕ್ಕೇರಿ, ದುರ್ಯೋಧನ ಐಹೊಳೆ, ಗಣೇಶ ಹುಕ್ಕೇರಿ, ಮಾಜಿ ಸಚಿವರಾದ ಶ್ರೀಮಂತ ಪಾಟೀಲ, ವೀರಕುಮಾರ ಪಾಟೀಲ, ಮುಖಂಡ ಉತ್ತಮ ಪಾಟೀಲ ಪಾಲ್ಗೊಂಡಿದ್ದರು.

ಬೆಳಗಾವಿ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳ 30 ಸಾವಿರಕ್ಕೂ ಅಧಿಕ ಜನರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಆದರೆ ಯಾವೊಬ್ಬ ಸಚಿವರೂ ಸಮಾವೇಶಕ್ಕೆ ಬಾರದಿರುವುದು ಜೈನ ಸಮುದಾಯದವರ ಅಸಮಾಧಾನಕ್ಕೆ ಕಾರಣವಾಯಿತು.

ನಿಧನ ವಾರ್ತೆ

ಬಿ.ಕೆ.ಸೀತಾರಾಮಯ್ಯ



ಧರ್ಮಪುರ (ಚಿತ್ರದುರ್ಗ): ಸಮೀಪದ ಬೇತೂರು ಪಾಳ್ಯ ನಿವಾಸಿ, ಕಾಂಗ್ರೆಸ್‌ನ ಹಿರಿಯ ಮುಖಂಡ ಬಿ.ಕೆ.ಸೀತಾರಾಮಯ್ಯ (92) ಭಾನುವಾರ ಬೆಂಗಳೂರಿನಲ್ಲಿ ನಿಧನರಾದರು.

ಇವರಿಗೆ ಪುತ್ರಿಯರಾದ, ವಿಕ್ಟೋರಿಯಾ ಆಸ್ಪತ್ರೆಯ ವೈದ್ಯೆ ಬಿ.ಎಸ್.ವನಮಾಲಿ ಮತ್ತು ನಾರಾಯಣ ಹೃದಯಾಲಯದ ವೈದ್ಯೆ ಬಿ.ಎಸ್.ಅನುರಾಧ ಇದ್ದಾರೆ. ಹಿರಿಯೂರು ತಾಲ್ಲೂಕಿನ ಸ್ವಗ್ರಾಮ ಬೇತೂರು ಪಾಳ್ಯದಲ್ಲಿ ಸೋಮವಾರ ಮಧ್ಯಾಹ್ನ 12.30ಕ್ಕೆ ಅಂತ್ಯಕ್ರಿಯೆ ನಡೆಯಲಿದೆ.

ಆತುರದ ಆಯೋಜನೆ ತಂದ ಆಪತ್ತು

ಒಂದನೇ ಪುಟದಿಂದ...

ಪತ್ರದಲ್ಲಿ ಏನಿದೆ?

- ಆರ್‌ಸಿಬಿ ಕ್ರಿಕೆಟ್ ತಂಡಕ್ಕೆ ದೇಶದಾದ್ಯಂತ ಅಭಿಮಾನಿ ಬಳಗವಿದೆ. ಸನ್ಮಾನ ಕಾರ್ಯಕ್ರಮಕ್ಕೆ ಲಕ್ಷಾಂತರ ಸಂಖ್ಯೆಯಲ್ಲಿ ಅಭಿಮಾನಿಗಳು ಬರಬಹುದು. ವಿಧಾನಸೌಧ ಭದ್ರತಾ ವಿಭಾಗದಲ್ಲಿ ಅಧಿಕಾರಿ, ಸಿಬ್ಬಂದಿಯ ಕೊರತೆ ಇದೆ. ಆತುರದಲ್ಲಿ ಕಾರ್ಯಕ್ರಮ ಆಯೋಜಿಸಿದರೆ ಬಂದೋಬಸ್ತ್‌ಗೆ ತೊಂದರೆಯಾಗುವ ಸಾಧ್ಯತೆ ಇದೆ
- ಕಾರ್ಯಕ್ರಮ ಆಯೋಜನೆಯ ಕಾರಣಕ್ಕೆ ಆ ದಿನ ವಿಧಾನಸೌಧದ ಪ್ರವೇಶಕ್ಕೆ ಸಾರ್ವಜನಿಕರಿಗೆ ನೀಡುವ ಪಾಸ್‌ಗಳನ್ನು ಸಂಪೂರ್ಣವಾಗಿ ನಿರ್ಬಂಧಿಸಬೇಕು
- ವಿಧಾನಸೌಧದ ಸಚಿವಾಲಯದ ಅಧಿಕಾರಿಗಳು, ಸಿಬ್ಬಂದಿ ತಮ್ಮ ಕುಟುಂಬದವರನ್ನು ಕರೆತರುವ ಸಾಧ್ಯತೆಯಿದ್ದು, ಜೂನ್ 4ರ ಮಧ್ಯಾಹ್ನದ ನಂತರ ವಿಧಾನಸೌಧ ಸಚಿವಾಲಯದ ಸಿಬ್ಬಂದಿಗೆ ರಜೆ ನೀಡಬೇಕು. ಅಲ್ಲದೆ, ಸಚಿವಾಲಯದ ಅಧಿಕಾರಿಗಳು, ಸಿಬ್ಬಂದಿ ಕಾರ್ಯಕ್ರಮದ ಸ್ಥಳಕ್ಕೆ ಬರದಂತೆ ಸೂಚನೆ ನೀಡಬೇಕು
- ವಿಧಾನಸೌಧ ಕಟ್ಟಡದ ಸುರಕ್ಷತೆ ದೃಷ್ಟಿಯಿಂದ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸುವ ಅವಶ್ಯಕತೆ ಇದೆ
- ವೇದಿಕೆ ಸದೃಢವಾಗಿರುವ ಬಗ್ಗೆ ಲೋಕೋಪಯೋಗಿ ಇಲಾಖೆಯಿಂದ ಸದೃಢ ಪ್ರಮಾಣಪತ್ರವನ್ನು ಪಡೆದುಕೊಳ್ಳಲು ಕನಿಷ್ಠ 2 ಗಂಟೆ ಮುಂಚಿತವಾಗಿಯೇ ಪರಿವೀಕ್ಷಣೆಗೆ ಬಿಟ್ಟುಕೊಡುವಂತೆ ಆಯೋಜಕರಿಗೆ ತಿಳಿಸಬೇಕು
- ವಿದ್ಯುತ್ ಉಪಕರಣಗಳನ್ನು ಉಪಯೋಗಿಸುತ್ತಿದ್ದು, ಸಂಬಂಧಪಟ್ಟ ವಿದ್ಯುತ್ ವಿಭಾಗದ ಎಂಜಿನಿಯರ್‌ನಿಂದ ಸಾಮರ್ಥ್ಯ ಪ್ರಮಾಣಪತ್ರ ಪಡೆದುಕೊಳ್ಳಬೇಕು
- ಕಾರ್ಯಕ್ರಮ ಜರುಗುವ 2 ಗಂಟೆ ಮೊದಲು ವೇದಿಕೆಯನ್ನು ವಿಧ್ವಂಸಕ ಕೃತ್ಯ ತಡೆ ತಪಾಸಣೆಗೆ ಬಿಟ್ಟುಕೊಡುವಂತೆ ಆಯೋಜಕರಿಗೆ ಸೂಚಿಸಬೇಕು
- ಆರ್‌ಸಿಬಿಗೆ ದೊಡ್ಡ ಸಂಖ್ಯೆಯಲ್ಲಿ ಅಭಿಮಾನಿ ಬಳಗ ಇರುವುದರಿಂದ ಬಂದೋಬಸ್ತ್‌ಗೆ ಹೊರಗಡೆಯಿಂದ ಅಧಿಕಾರಿಗಳು, ಸಿಬ್ಬಂದಿಯನ್ನು ಕರೆಸಿಕೊಳ್ಳಬೇಕಿದೆ. ಇದಕ್ಕೆ ಸಮಯಾವಕಾಶ ಬೇಕಿದೆ
- ಈ ರೀತಿಯ ಬೃಹತ್ ಕಾರ್ಯಕ್ರಮಕ್ಕೆ ಕಾನೂನು ಮತ್ತು ಸುವ್ಯವಸ್ಥೆ ಅಧಿಕಾರಿಗಳು ಹಾಗೂ ಸಂಚಾರ ಪೊಲೀಸರ ಜೊತೆ ಸಮನ್ವಯದ ಅವಶ್ಯಕತೆಯಿದ್ದು, ಸಮಯಾವಕಾಶದ ಕೊರತೆಯಿದೆ ಅನ್ನಿಸುತ್ತಿದೆ
- ಇಂತಹ ಕಾರ್ಯಕ್ರಮದಲ್ಲಿ ಹೊರಗಿನಿಂದ ಡ್ರೋನ್ ಕ್ಯಾಮೆರಾ ಬಳಸುವ ಸಾಧ್ಯತೆ ಇರುವುದರಿಂದ ಡ್ರೋನ್ ತಡೆ ವ್ಯವಸ್ಥೆ ಅಳವಡಿಸುವ ಅವಶ್ಯಕತೆಯಿದೆ

ಸಿಐಡಿ ತನಿಖೆ: ಬಂಧಿತರು, ಪೊಲೀಸರ ವಿಚಾರಣೆಗೆ ಸಿದ್ಧತೆ

ಒಂದನೇ ಪುಟದಿಂದ...

ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್, ಸಂಸ್ಥೆ ಮಾಜಿ ಕಾರ್ಯದರ್ಶಿ ಎ.ಶಂಕರ್, ಖಜಾಂಚಿ ಇ.ಎಸ್.ಜಯರಾಮ್ ಅವರಿಗೆ ನೋಟಿಸ್ ನೀಡಿ ವಿಚಾರಣೆಗೆ ಒಳಪಡಿಸಲು ನಿರ್ಧರಿಸಿದೆ ಎಂದು ಗೊತ್ತಾಗಿದೆ.

ಘಟನೆ ನಡೆದ ಸಂದರ್ಭದಲ್ಲಿ ಕ್ರೀಡಾಂಗಣದಲ್ಲಿ ಕರ್ತವ್ಯದಲ್ಲಿದ್ದ ಪೊಲೀಸ್ ಹಾಗೂ ಭದ್ರತಾ ಸಿಬ್ಬಂದಿಯಿಂದ ಮಾಹಿತಿ ಪಡೆಯಲಿದೆ. ಅಮಾನತುಗೊಂಡಿರುವ ಕಬ್ಬನ್ ಪಾರ್ಕ್ ಠಾಣೆ ಇನ್‌ಸ್ಪೆಕ್ಟರ್ ಹಾಗೂ ಎಸಿಪಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಲಿದೆ ಎಂದು ಮೂಲಗಳು ಹೇಳಿವೆ.

ಈ ನಡುವೆ ರಾಜ್ಯ ಮಾನವ ಹಕ್ಕುಗಳ ಆಯೋಗ ಕ್ರೀಡಾಂಗಣಕ್ಕೆ ಭೇಟಿ ನೀಡಿ ಘಟನೆ ಬಗ್ಗೆ ಮಾಹಿತಿ ಸಂಗ್ರಹಿಸಿತು. ಬಳಿಕ ಬೌರಿಂಗ್ ಮತ್ತು ವೈದೇಹಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳ ಆರೋಗ್ಯ ವಿಚಾರಿಸಿತು.

'ಕಾಲ್ತುಳಿತಕ್ಕೆ ಸಂಬಂಧಿಸಿದಂತೆ ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್, ಹೆಚ್ಚಿನ ಸಂಖ್ಯೆಯಲ್ಲಿ ಆಂಬುಲೆನ್ಸ್ ವ್ಯವಸ್ಥೆ ಮಾಡದ ಕಾರಣ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ಕ್ರೀಡಾಂಗಣದ ಪ್ರವೇಶ ದ್ವಾರಗಳನ್ನು ಏಕಕಾಲಕ್ಕೆ ತೆರೆದ ಕಾರಣ ಉಂಟಾದ ಅವಘಡಕ್ಕೆ ಸಂಬಂಧಿಸಿದಂತೆ ವರದಿ ನೀಡುವಂತೆ ಕೆಎಸ್‌ಸಿಎಗೆ ಸೂಚಿಸಲಾಗಿದೆ. ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಆಯೋಗದ ಹಂಗಾಮಿ ಅಧ್ಯಕ್ಷ ಟಿ. ಶ್ಯಾಮ ಭಟ್ 'ಪ್ರಜಾವಾಣಿ'ಗೆ ತಿಳಿಸಿದರು.

ಹಿರಿಯ ಐಎಎಸ್ ಅಧಿಕಾರಿಗಳಿಗೆ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಲ್ ಟ್ರೋಫಿ ಗೆದ್ದ ಆರ್‌ಸಿಬಿ ತಂಡಕ್ಕೆ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಆತುರದಲ್ಲಿ ಸನ್ಮಾನ ಕಾರ್ಯಕ್ರಮ ಆಯೋಜಿಸಿದರೆ ಬಂದೋಬಸ್ತ್ ಕರ್ತವ್ಯಕ್ಕೆ ತೊಂದರೆ ಆಗಬಹುದು ಎಂದು ವಿಧಾನಸೌಧದ ಭದ್ರತಾ ವಿಭಾಗದ ಡಿಸಿಪಿ ವರದಿ ನೀಡಿದ್ದನ್ನು ತಮ್ಮ ಗಮನಕ್ಕೆ ಏಕೆ ತಂದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಸಿದ್ದರಾಮಯ್ಯ ಅವರು ಪೂರ್ವನಿಗದಿತ ಕಾರ್ಯಕ್ರಮದಲ್ಲಿ ಭಾಗಿಯಾಗಲು ಭಾನುವಾರ ಮಧ್ಯಾಹ್ನ ಮೈಸೂರಿಗೆ ತೆರಳಬೇಕಿತ್ತು. ಆದರೆ, ಮಧ್ಯಾಹ್ನ ಅವರ ಕಾವೇರಿ ನಿವಾಸಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಗೃಹ ಸಚಿವ ಜಿ.ಪರಮೇಶ್ವರ ಬಂದರು. ಈ ವೇಳೆ ತಮ್ಮ ಪ್ರವಾಸವನ್ನು ಕೆಲಕಾಲ ಮುಂದೂಡಿದ ಅವರು, ಏಳೆಂಟು ನಿಮಿಷ ಚರ್ಚೆ ನಡೆಸಿದರು ಎಂದು ಮೂಲಗಳು ಮಾಹಿತಿ ನೀಡಿವೆ.

'ಡಿಸಿಪಿಯಿಂದ ನಿಮಗೆ ಪತ್ರ ಬಂದಿದ್ದರೂ ಅದನ್ನು ನನ್ನ ಗಮನಕ್ಕೆ ಏಕೆ ತಂದಿಲ್ಲ ಎಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿ ಜಿ.ಸತ್ಯವತಿ ಅವರನ್ನು ಮುಖ್ಯಮಂತ್ರಿ ಪ್ರಶ್ನಿಸಿದರು' ಎಂದು ಮೂಲಗಳು ತಿಳಿಸಿವೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಹೊಣೆ ನಿಭಾಯಿಸುತ್ತಿರುವ ಇಬ್ಬರು ಹಿರಿಯ ಐಎಎಸ್ ಅಧಿಕಾರಿಗಳನ್ನು ರಜೆಯ ಮೇಲೆ ಕಳುಹಿಸುವ ಬಗ್ಗೆಯೂ ಚರ್ಚೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.



ಮಕ್ಕಳಿಗೆ ಬೇಕು ಸಮಯ ನಿರ್ವಹಣೆ ಕೌಶಲ

ಆರ್.ಬಿ.ಗುರುಬಸವರಾಜ

'ಸಮಯ ಮತ್ತು ಸಮುದ್ರದ ಅಲೆಗಳು ಯಾರಿಗೂ ಕಾಯುವುದಿಲ್ಲ' ಎಂಬ ಮಾತನ್ನು ಎಲ್ಲರೂ ಕೇಳಿರುತ್ತೇವೆ. ಸಮಯವು ಒಮ್ಮೆ ಕಳೆದುಹೋದರೆ ಮತ್ತೆಂದೂ ತಿರುಗಿಬಾರದು. ಇರುವ ಸಮಯವನ್ನು ಸೂಕ್ತವಾಗಿ ಬಳಸುವ ಕಲೆ ತಿಳಿದಿದ್ದರೆ ಬದುಕು ಬಂಗಾರವಾಗುವುದರಲ್ಲಿ ಸಂಶಯವಿಲ್ಲ.

ಮಕ್ಕಳಿಗೆ ಸಮಯದ ಮೌಲ್ಯವನ್ನು ಅರ್ಥ ಮಾಡಿಸಿದರೆ ಹಾಗೂ ಅದನ್ನು ಬಳಸುವ ಬಗೆಯನ್ನು ಕಲಿಸಿಕೊಟ್ಟರೆ ಅವರ ಬದುಕಿಗೆ ಭದ್ರ ಅಡಿಪಾಯ ಹಾಕಿದಂತೆ ಆಗುತ್ತದೆ. ಚಿಕ್ಕವಯಸ್ಸಿನಿಂದಲೇ ಅವರು ಜವಾಬ್ದಾರಿಯನ್ನು ಮನದಟ್ಟು ಮಾಡಿಕೊಳ್ಳುತ್ತಾ ಹೋಗಲು ಸಾಧ್ಯವಾಗುತ್ತದೆ.

ಸಮಯ ನಿರ್ವಹಣೆ ಹೇಗೆ?

ಅಮೂಲ್ಯ ನಿಧಿಯಂತೆ ಇರುವ ಸಮಯವನ್ನು ವಿವಿಧ ಚಟುವಟಿಕೆಗಳಿಗೆ ಹೇಗೆ ವಿಂಗಡಿಸಬೇಕು ಎಂಬುದನ್ನು ಯೋಜಿಸುವ ಪ್ರಕ್ರಿಯೆಯೇ ಸಮಯ ನಿರ್ವಹಣೆ. ಮಕ್ಕಳಿಗೆ ಸಮಯದ ಮಹತ್ವವನ್ನು ಅರ್ಥ ಮಾಡಿಸುವ ಹಾಗೂ ಅದನ್ನು ಬುದ್ಧಿವಂತಿಕೆಯಿಂದ ಬಳಸುವುದನ್ನು ಕಲಿಸುವ ಜವಾಬ್ದಾರಿ ಪಾಲಕರ ಮೇಲಿರುತ್ತದೆ.

ಸಮಯ ನಿರ್ವಹಣೆ ಮಾಡುವಲ್ಲಿನ ಮೊದಲ ಹೆಜ್ಜೆ ಎಂದರೆ, ಸಮಯವು ಸೀಮಿತ ಸಂಪನ್ಮೂಲವಾಗಿದ್ದು ಅದನ್ನು ವಿವೇಚನೆಯಿಂದ ಬಳಸಬೇಕು ಎಂಬುದನ್ನು ಅರಿಯುವುದೇ ಆಗಿದೆ. ಮಕ್ಕಳು ಪ್ರತಿದಿನವೂ ತಮಗೆ ಲಭ್ಯವಾಗುವ ಸಮಯವನ್ನು ಆದ್ಯತೆಗೆ ಅನುಸಾರವಾಗಿ ಬಳಸುವಂತೆ ಕಲಿಸಬೇಕು. ಅದಕ್ಕಾಗಿ ಪಾಲಕರು ಕೆಲವು ತಂತ್ರಗಳನ್ನು ಅನುಸರಿಸಬಹುದು.

ಪ್ರಯೋಜನ

- ಜವಾಬ್ದಾರಿ ಮತ್ತು ಶಿಸ್ತು ಮೂಡುತ್ತದೆ
- ಶೈಕ್ಷಣಿಕ ಕಾರ್ಯಕ್ಷಮತೆ ಬಲಗೊಳ್ಳುತ್ತದೆ
- ಒತ್ತಡ ಮತ್ತು ಆತಂಕ ನೀಗುತ್ತದೆ
- ಆಲಸ್ಯವನ್ನು ತೊಡೆದುಹಾಕಿ ಕ್ರಿಯಾಶೀಲತೆ ಬೆಳೆಸುತ್ತದೆ
- ಸ್ವಾಭಿಮಾನ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ
- ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಗಟ್ಟಿಗೊಳಿಸುತ್ತದೆ
- ವೈಯಕ್ತಿಕ ಸ್ವಾತಂತ್ರ್ಯವನ್ನು ಪ್ರೋತ್ಸಾಹಿಸುತ್ತದೆ

ಹೀಗೆ ಮಾಡಿ...

- **ಸಮಯ ನಿಗದಿಪಡಿಸಿ:** ಸಮಯ ನಿರ್ವಹಣೆಯ ಮೊದಲ ಹಂತ ಎಂದರೆ, ಬೆಳಿಗ್ಗೆ ಏಳುವ ಮತ್ತು ರಾತ್ರಿ ಮಲಗುವ ಸಮಯವನ್ನು ನಿಗದಿಪಡಿಸುವುದಾಗಿದೆ. ನಿಗದಿತ ಸಮಯಕ್ಕೆ ಏಳುವುದು ಒತ್ತಡರಹಿತ ಕೆಲಸಕ್ಕೆ ನಾಂದಿಯಾಗಿದೆ. ಅಂತೆಯೇ ನಿಗದಿತ ಸಮಯಕ್ಕೆ ಮಲಗುವುದು ಮರುದಿನದ ಚಟುವಟಿಕೆಗೆ ಮಾನಸಿಕ ಸಿದ್ಧತೆಯಾಗಿರುತ್ತದೆ.
- **ವೇಳಾಪಟ್ಟಿಯನ್ನು ರಚಿಸಿ:** ಮಕ್ಕಳು ದೈನಂದಿನ ಅಥವಾ ಸಾಪ್ತಾಹಿಕ ವೇಳಾಪಟ್ಟಿಯನ್ನು ರಚಿಸಲು ಪ್ರೋತ್ಸಾಹಿಸಿ. ಪಾಲಕರ ಸಹಾಯದಿಂದ ಮಕ್ಕಳೇ ವೇಳಾಪಟ್ಟಿ ರಚಿಸಲಿ. ಇದು ಪ್ರತಿ ಚಟುವಟಿಕೆಗೂ ಅವರು ಸಮಯವನ್ನು ನಿಗದಿಪಡಿಸಲು ಸಹಾಯ ಮಾಡುತ್ತದೆ.
- **ಆದ್ಯತೆಗಳನ್ನು ಹೊಂದಿಸಿ:** ತುರ್ತಿನ ಕಾರ್ಯಗಳಿಗೆ ಆದ್ಯತೆ ನೀಡಲು ಕಲಿಸಿ. ಆದ್ಯತೆಗೆ ಅನುಗುಣವಾಗಿ ವೇಳಾಪಟ್ಟಿ ತಯಾರಿಸಲು ಮಾರ್ಗದರ್ಶನ ಮಾಡಿ.
- **ಕಾರ್ಯಗಳನ್ನು ವಿಭಜಿಸಿ:** ಮಕ್ಕಳು ನಿರ್ವಹಿಸುವ ಕೆಲಸಗಳನ್ನು ವಿಭಜಿಸಿ. ದೊಡ್ಡ ಕೆಲಸಗಳನ್ನು ಅಂದರೆ ಹೆಚ್ಚು ಸಮಯ ತೆಗೆದುಕೊಳ್ಳುವ ಕೆಲಸಗಳನ್ನು ಸಣ್ಣ ಸಣ್ಣ ಕೆಲಸಗಳನ್ನಾಗಿ ವಿಭಜಿಸಿ. ಇದರಿಂದ ಮಕ್ಕಳು ಒತ್ತಡರಹಿತವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ.
- **ವಿಳಂಬವನ್ನು ತಪ್ಪಿಸಿ:** ಮಕ್ಕಳು ಸಮಯಕ್ಕೆ ಸರಿಯಾಗಿ ಕೆಲಸಗಳನ್ನು ಪೂರ್ಣಗೊಳಿಸಲು ಮತ್ತು ಕೊನೆಯ ನಿಮಿಷದವರೆಗೂ ಅವುಗಳನ್ನು ಉಳಿಸಿಕೊಳ್ಳದೇ ಇರಲು ಪ್ರೋತ್ಸಾಹಿಸಿ.
- **ಆಟ ಮತ್ತು ವಿರಾಮವೂ ಇರಲಿ:** ದೀರ್ಘಾವಧಿಯ ಕೆಲಸಗಳು ಅವರಲ್ಲಿ ನಿರುತ್ಸಾಹವನ್ನು ಉಂಟುಮಾಡುತ್ತವೆ. ನಿರುತ್ಸಾಹ ತಡೆದು, ಉತ್ಪಾದಕತೆಯನ್ನು ಕಾಪಾಡಿಕೊಳ್ಳಲು ವಿರಾಮ ಅಗತ್ಯ. ಹಾಗಾಗಿ, ವಿರಾಮವನ್ನೂ ವೇಳಾಪಟ್ಟಿಯಲ್ಲಿ ಸೇರಿಸಿ.
- **ಅರ್ಥಪೂರ್ಣ ಪ್ರಶಂಸೆ ನೀಡಿ:** ಮಕ್ಕಳು ಸಮಯ ಪಾಲನೆ ಮಾಡಿದಾಗ ಮತ್ತು ಉತ್ತಮವಾಗಿ ಸಮಯ ನಿರ್ವಹಣೆ ಮಾಡಿದಾಗ ಅವರನ್ನು ಪ್ರಶಂಸಿಸಿ. ಇದು ಸಮಯ ಪಾಲನೆಯ ಅಭ್ಯಾಸಗಳನ್ನು ಉತ್ತಮವಾಗಿ ರೂಢಿಸಿಕೊಳ್ಳಲು ನೆರವಾಗುತ್ತದೆ.
- **ಸ್ಕ್ರೀನ್‌ಟೈಂ ಮಿತಿಗೊಳಿಸಿ:** ಮಕ್ಕಳಿಗೆ ಆರೋಗ್ಯಕರ ಅಭ್ಯಾಸಗಳನ್ನು ಪರಿಚಯಿಸದ ವಿನಾ ಸಾಮಾಜಿಕ ಮಾಧ್ಯಮ ಅಥವಾ ವಿಡಿಯೊಗೇಮ್‌ಗಳ ಅಭ್ಯಾಸದಿಂದ ಅವರನ್ನು ಹೊರತರುವುದು ಕಷ್ಟದ ಕೆಲಸ. ಹಾಗಾಗಿ, ಸ್ಕ್ರೀನ್‌ಟೈಂಗೆ ಮಿತಿ ಇರಲಿ.

ಮಕ್ಕಳು ಶಾಲಾ ಕೆಲಸಗಳನ್ನು ನಿರ್ವಹಿಸುವುದಷ್ಟೇ ಸಮಯ ನಿರ್ವಹಣೆ ಎನಿಸಿಕೊಳ್ಳುವುದಿಲ್ಲ. ಅದರ ಜೊತೆಗೆ ಆಟ, ಹವ್ಯಾಸಗಳು ಮತ್ತು ವಿಶ್ರಾಂತಿಗಾಗಿ ಸಮಯವನ್ನು ಹೊಂದಿಸಿಕೊಳ್ಳಬೇಕು ಎಂಬುದನ್ನು ಅವರಿಗೆ ಕಲಿಸಬೇಕಾಗಿದೆ. ಒತ್ತಡರಹಿತ ಬದುಕಿಗೆ ಇದು ಅಗತ್ಯ.

ಮರುಪ್ರಯತ್ನಕ್ಕೆ ಅವಕಾಶ ಇರಲಿ

ಕೆಲವೊಮ್ಮೆ ಮಕ್ಕಳು ಸಮಯ ನಿರ್ವಹಣೆ ಸಾಧ್ಯವಾಗದೆ ತಮ್ಮ ಕೆಲಸದಲ್ಲಿ ವಿಳಂಬ ಮಾಡಿದಾಗ, ಸಮಯವನ್ನು ವ್ಯರ್ಥ ಮಾಡಿದಾಗ ಅಥವಾ ಬೇರೇನೂ ಮಾಡಲಾಗದ ರೀತಿಯಲ್ಲಿ ಒಂದೇ ಕೆಲಸದಲ್ಲಿ ಮುಳುಗಿಹೋದಾಗ, ಆಗಬೇಕಾದ ಕೆಲಸಗಳು ಸಕಾಲದಲ್ಲಿ ಆಗದೆ ನಿರಾಶರಾಗುವುದು ಸಹಜ. ಇಂತಹ ಹಿನ್ನಡೆಯ ಸನ್ನಿವೇಶದಲ್ಲಿ ಪಾಲಕರು ಮತ್ತೊಮ್ಮೆ ಪ್ರಯತ್ನಿಸಲು ಅವರಿಗೆ ಅವಕಾಶ ನೀಡಬೇಕು. ಇದು ಮಕ್ಕಳಲ್ಲಿನ ಅಪರಾಧಪ್ರಜ್ಞೆಯನ್ನು ಕಡಿಮೆ ಮಾಡುತ್ತದೆ ಮತ್ತು ತಾವು ಅವಮಾನಕರ ಪರಿಸ್ಥಿತಿಯಲ್ಲಿ ಇದ್ದೇವೆ ಎಂಬಂಥ ಭಾವನೆಯಿಂದ ಹೊರಬರಲು ಸಹಾಯ ಮಾಡುತ್ತದೆ. ❖

ವಿದ್ಯಾರ್ಥಿ ವೇತನ ಕೈಪಿಡಿ

ಮಿರೇ ಅಸೆಟ್ ಫೌಂಡೇಷನ್

ಮಿರೇ ಅಸೆಟ್ ಫೌಂಡೇಷನ್ ಪದವಿ ಅಥವಾ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಅರ್ಹತೆ: ಅರ್ಜಿದಾರರು ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ₹ 8 ಲಕ್ಷ ಮೀರಿರಬಾರದು.

ಆರ್ಥಿಕ ಸಹಾಯ: ಪದವಿ ವಿದ್ಯಾರ್ಥಿಗಳಿಗೆ– ₹ 40 ಸಾವಿರದವರೆಗೆ. ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ– ₹ 50 ಸಾವಿರದವರೆಗೆ.

ಅರ್ಜಿ ಸಲ್ಲಿಸಲು ಕೊನೆ ದಿನ: 20.06.2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಸಲ್ಲಿಸಿ

ಹೆಚ್ಚಿನ ಮಾಹಿತಿಗೆ: Short Url:www.b4s.in/pjvi/MAFS3

ಸಮಾಧಾನ



ಡಾ. ಡಿ.ಎಂ.ಹೆಗಡೆ
ಆಪ್ತಸಮಾಲೋಚಕ

ನನ್ನೂರಲ್ಲೇ ಇದ್ದುಕೊಂಡು ಓದಲೇ?

ನನಗೆ ಎಲ್ಲದಕ್ಕೂ ಗಾಬರಿಯಾಗುತ್ತದೆ. ಈ ವರ್ಷದಿಂದ ಎಂಜಿನಿಯರಿಂಗ್ ಮಾಡಲು ದೂರದ ಊರಿಗೆ ಹೋಗಬೇಕಾಗಿದೆ. ಅಲ್ಲಿ ಎಲ್ಲವನ್ನೂ ನಾನೊಬ್ಬನೇ ನಿಭಾಯಿಸಲಾಗದು ಎಂದೆನಿಸುತ್ತಿದೆ. ಅಪ್ಪ- ಅಮ್ಮನಿಗೆ ಹೇಳಿ, ಊರಲ್ಲಿಯೇ ಇರುವ ಪದವಿ ಕಾಲೇಜಿಗೆ ಸೇರಲೇ? ಅವರು ಒಪ್ಪದಿದ್ದರೆ ಏನು ಮಾಡಲಿ?

ನಿಮ್ಮ ಪ್ರಶ್ನೆ ಸ್ಪಷ್ಟವಾಗಿಲ್ಲ. ಇನ್ನಷ್ಟು ವಿವರದ ಅಗತ್ಯವಿದೆ. ನಿಮಗೆ ಯಾವಾಗ, ಯಾವುದಕ್ಕೆ, ಎಂಥ ಸಂದರ್ಭದಲ್ಲಿ ಗಾಬರಿಯಾಗುತ್ತದೆ? ಅದು ಗಾಬರಿ ಮಾತ್ರವೋ ಅಥವಾ ಭಯವೋ? ನಿಮಗೆ ಯಾವುದರ ಬಗ್ಗೆ ಭಯವಿದೆ? ರಾತ್ರಿ ನಿದ್ರೆ ಸರಿಯಾಗಿ ಬರುತ್ತದೆಯೇ? ಸರಿಯಾಗಿ ಊಟ ಮಾಡುತ್ತೀರಿ ತಾನೆ?

ನಿಮಗೆ ಮನೆಯಿಂದ ಹೊರಗೆ ಉಳಿದುಕೊಳ್ಳುವ ಅಭ್ಯಾಸವಿಲ್ಲ ಎನ್ನಿಸುತ್ತದೆ. ಈಗ ಬೇರೆ ಊರಿನಲ್ಲಿ, ಮನೆಯವರಿಂದ ದೂರ ಇರಬೇಕಾಗುತ್ತದಲ್ಲಾ ಎನ್ನುವ ಆತಂಕ ಹಾಗೂ ಆ ಕಾರಣದಿಂದ ಗಾಬರಿ ಹೆಚ್ಚಾಗಿರಬೇಕು. ಹದಿಹರೆಯದಲ್ಲಿ ಇದು ಸಾಧಾರಣವಾಗಿ ಬಹುತೇಕರಿಗೆ ಆಗುತ್ತದೆ. ಕೆಲವರು ಬಾಯಿಬಿಟ್ಟು ಹೇಳುತ್ತಾರೆ, ಇನ್ನು ಕೆಲವರು ಹೇಳಿಕೊಳ್ಳುವುದಿಲ್ಲ. ಇರಲಿ, ಇಲ್ಲಿ ಸಮಸ್ಯೆ ಅದಲ್ಲ.

ನಿಮಗೆ ಊರು, ಮನೆ ಬಿಟ್ಟು ಬೇರೆ ಊರಿಗೆ ಹೋಗಿ ಬದುಕುವ ಬಗ್ಗೆ ಇರುವ ಆತಂಕಕ್ಕಿಂತಲೂ ಹೆಚ್ಚಾಗಿ ಏನೋ ಕೆಟ್ಟದ್ದಾಗುತ್ತದೆ ಎನ್ನುವ ಭಯದ ಕಲ್ಪನೆ ಹೆಚ್ಚಾಗುತ್ತಿದೆ. ಮೊದಲಿನಿಂದಲೂ ಮನೆಯಲ್ಲಿ ಅಂದರೆ ಒಂದು ಚೌಕಟ್ಟಿನೊಳಗೆ, ಪಾಲಕರ ರಕ್ಷಣೆಯಲ್ಲಿ, ಅವರ ಮೇಲೆ ಅವಲಂಬಿತರಾಗಿ ಬದುಕಿ ನಿಮಗೆ ಅಭ್ಯಾಸವಾಗಿದೆ. ಈಗ ಬೇರೆ ಊರಿಗೆ ಹೋದರೆ ಬದುಕುವುದು ಹೇಗಪ್ಪಾ ಎಂದು ಮನಸ್ಸು ಹಿಂಜರಿಯುತ್ತಿದೆ, ಅಲ್ಲವೇ? ಇಷ್ಟಕ್ಕೆಲ್ಲ ಆತಂಕ ಪಡಬೇಡಿ. ಹೆದರಿಕೆಯ ಕಲ್ಪನೆಗೆ ಬಣ್ಣ ಹಚ್ಚಬೇಡಿ.

ಎಂಜಿನಿಯರಿಂಗ್ ಕಾಲೇಜಿಗೆ ಪ್ರವೇಶ ಸಿಕ್ಕಿದೆ ಎಂದರೆ ನಿಮಗೆ ಓದಿನಲ್ಲಿ ಆಸಕ್ತಿ ಇದೆ ಎಂದಾಯಿತು. ತರಗತಿಯಲ್ಲಿ ಹಲವರಿಗಿಂತಲೂ ಹೆಚ್ಚು ಪ್ರತಿಭಾವಂತರಾಗಿದ್ದೀರಿ. ನಿಮಗೆ ಎಂಜಿನಿಯರಿಂಗ್ ಓದಲು ಆಸಕ್ತಿ ಇಲ್ಲ ಎನ್ನುವ ಹಾಗಿಲ್ಲ. ಹಾಗೊಂದು ವೇಳೆ ಎಂಜಿನಿಯರಿಂಗ್‌ನಲ್ಲಿ ಆಸಕ್ತಿ ಇಲ್ಲದೆ ಕಲಾ ವಿಷಯದಲ್ಲಿ ಆಸಕ್ತಿ ಇದ್ದಿದ್ದರೆ ಅದು ಬೇರೆ ಮಾತಾಗುತ್ತಿತ್ತು. ಆದರೆ ಇಲ್ಲಿ ಹಾಗಿಲ್ಲ. ನೀವು ಒಬ್ಬ ಒಳ್ಳೆಯ ಎಂಜಿನಿಯರ್ ಆಗುವ ಮೂಲಕ ನಮ್ಮ ದೇಶಕ್ಕೆ ಮಹತ್ತರವಾದ ಕೊಡುಗೆಯನ್ನು ಕೊಡುವ ಸಾಧ್ಯತೆ ಇದೆ. ಅದರ ಬಗ್ಗೆ ಆಲೋಚಿಸಿ. ಭವಿಷ್ಯತ್ತಿನಲ್ಲಿ ಆಗಬಹುದಾದ ಒಳ್ಳೆಯದರ ಬಗ್ಗೆ ಹೆಚ್ಚು ನಂಬಿಕೆ ಇರಿಸಿ.

ನಿಮಗಾಗುವ ಆತಂಕ ಹಾಗೂ ಭಯದ ಬಗ್ಗೆ ನಿಮ್ಮ ಪಾಲಕರಿಗೆ ಗೊತ್ತಿಲ್ಲವೇ? ನಿಮ್ಮ ಅನಿಸಿಕೆಗಳನ್ನೆಲ್ಲಾ ಅವರ ಜೊತೆಯಲ್ಲಿ ನಿರಾಳವಾಗಿ ಹಂಚಿಕೊಳ್ಳಿ. ಅವರಿಂದ ನಿಮಗೆ ಖಂಡಿತವಾಗಿಯೂ ಭರವಸೆ ಸಿಗುತ್ತದೆ. ನಿಮ್ಮ ಗೆಳೆಯರೊಂದಿಗೆ ಈ ಬಗ್ಗೆ ಮಾತನಾಡಿ. ನಿಮ್ಮ ಇಷ್ಟದ ಶಿಕ್ಷಕರಲ್ಲಿ ಸಹ ಮಾತನಾಡಿ. ಇವೆಲ್ಲವುಗಳಿಂದ ನಿಮ್ಮ ಆತಂಕ ನಿವಾರಣೆಯಾಗುತ್ತದೆ. ಆ ಜಾಗದಲ್ಲಿ ಹೊಸ ಭರವಸೆ ಮೂಡುತ್ತದೆ.

ನೀವು ಸೇರುವ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಿಮ್ಮ ಹಳೆಯ ಕಾಲೇಜಿನ ಯಾರಾದರೂ ಇರಬಹುದು ಅಥವಾ ನಿಮ್ಮ ಊರಿನ ಕೆಲವರಾದರೂ ಇರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಆ ಬಗ್ಗೆ ವಿಚಾರಿಸಿ, ತಿಳಿದುಕೊಳ್ಳಿ.

ಎಂಜಿನಿಯರಿಂಗ್ ಕಾಲೇಜಿಗೆ ಹೋದಾಗ ಅಲ್ಲಿ ನಿಮ್ಮ ಹಾಗೇ ಆತಂಕದಿಂದ, ಕುತೂಹಲದಿಂದ ಬಂದಿರುವ ಬಹಳಷ್ಟು ಜನ ಇರುತ್ತಾರೆ. ನಿಮಗೆ ಅವರಲ್ಲಿ ಹೆಚ್ಚಿನವರ ಪರಿಚಯ ಆಗುತ್ತದೆ. ಕೆಲವರ ಗೆಳೆತನವಾಗುತ್ತದೆ. ಮುಂದೆ ಕೆಲವು ದಿನಗಳಲ್ಲಿ ನೀವು ಹೊಸ ಪರಿಸರಕ್ಕೆ ಹೊಂದಿಕೊಳ್ಳುತ್ತೀರಿ. ಹೊಸ ಕಾಲೇಜು, ಹೊಸ ಗೆಳೆಯರು, ಹೊಸ ಕಲಿಕೆ, ಎಲ್ಲವೂ ಹೊಸದಾಗಿರುವುದನ್ನು ಗಮನಿಸಿ, ಖುಷಿಪಡಿ. ನಿಮ್ಮ ಮನಸ್ಸಿನಲ್ಲಿ ಈಗ ತುಂಬಿರುವ ನಕಾರಾತ್ಮಕ ಚಡಪಡಿಕೆಗಳನ್ನು ಇಲ್ಲಿಯೇ ಬಿಟ್ಟುಬಿಡಿ. ಕುತೂಹಲ ಹಾಗೂ ಉತ್ಸಾಹ ಇರುವ ಮನುಷ್ಯರು ಜೀವನದಲ್ಲಿ ಉನ್ನತವಾದುದನ್ನು ಸಾಧಿಸುತ್ತಾರೆ ಎನ್ನುವುದು ತಿಳಿದಿರಲಿ. ನಿಮಗೆ ಉಜ್ವಲ ಭವಿಷ್ಯವಿದೆ. ಶುಭವಾಗಲಿ. ❖



₹5.11 ಲಕ್ಷಕ್ಕೆ ಎತ್ತು ಮಾರಾಟ

ಪ್ರಜಾವಾಣಿ ವಾರ್ತೆ

ಜಮಖಂಡಿ(ಬಾಗಲಕೋಟೆ ಜಿಲ್ಲೆ): ರಾಜ್ಯದ ವಿವಿಧ ಕಡೆಗಳಲ್ಲಿ ನಡೆದ ತೆರಬಂಡಿ ಸ್ಪರ್ಧೆಗಳಲ್ಲಿ ಭಾಗವಹಿಸಿ ಹಲವಾರು ಬಹುಮಾನಗಳನ್ನು ಗೆದ್ದಿದ್ದ ತಾಲ್ಲೂಕಿನ ಬುದ್ನಿ ಗ್ರಾಮದ ರೈತ ಮಹಾದೇವ ಕೊಲೂರ ಅವರು ಸಾಕಿದ ಎತ್ತು ₹5.11 ಲಕ್ಷಕ್ಕೆ ಭಾನುವಾರ ಮಾರಾಟವಾಗಿದೆ.

‘ಮಹಾರಾಷ್ಟ್ರದ ಪುಣೆಯ ದೇವಸ್ಥಾನದವರು ದೇವಸ್ಥಾನದ ರಥ ಎಳೆಯಲು ಈ ಎತ್ತನ್ನು ಖರೀದಿಸಿದ್ದಾರೆ’ ಎಂದು ರೈತ ತಿಳಿಸಿದ್ದಾರೆ. ಮಾರಾಟವಾದ ಎತ್ತನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಕಲ ವಾದ್ಯ ಮೇಳಗಳೊಂದಿಗೆ ಮೆರವಣಿಗೆ ಮಾಡಿ, ಆರತಿ ಮಾಡಿ ಬೀಳ್ಕೊಡಲಾಯಿತು.

ಅಂಗನವಾಡಿಗಳಿಗೆ ಕಳಪೆ ಆಹಾರ ಪೂರೈಕೆ: ತನಿಖೆಗೆ ಆಗ್ರಹಿಸಿದವರ ಎತ್ತಂಗಡಿ

ಅಧಿಕಾರಿ, ಸಿಬ್ಬಂದಿಗೆ ವರ್ಗಾವಣೆ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗನವಾಡಿಗಳಿಗೆ ಕಳಪೆ ಗುಣಮಟ್ಟದ ಆಹಾರ ಪೂರೈಕೆಯಾಗಿರುವ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಪತ್ರ ಬರೆದ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಇಲಾಖೆ ಎತ್ತಂಗಡಿ ಮಾಡಿದೆ.

ಹಾಸನದಲ್ಲಿ ಅಂಗನವಾಡಿಗಳಿಗೆ ಪೂರೈಕೆಯಾಗಿದ್ದ ಆಹಾರ ಕಳಪೆ ಗುಣಮಟ್ಟದ್ದು ಎಂದು ಪ್ರಯೋಗಾಲಯದ ವರದಿಯನ್ನು ಉಲ್ಲೇಖಿಸಿ ಇಲಾಖೆಯ ಜಿಲ್ಲಾ ಉಪ ನಿರ್ದೇಶಕ, ಯೋಜನಾಧಿಕಾರಿಗಳು ಮತ್ತು ಅಧೀಕ್ಷಕ ಮಟ್ಟದ ಅಧಿಕಾರಿಗಳು ಮೇ 27, 28ರಂದು ಇಲಾಖೆಯ ನಿರ್ದೇಶಕರಿಗೆ ಪತ್ರ ಬರೆದಿದ್ದರು.

‘ಕಳಪೆ ಆಹಾರ ಪೂರೈಕೆಯಾಗುತ್ತಿದೆ ಎಂಬುದರ ಬಗ್ಗೆ ದೂರುಗಳು ಬರುತ್ತಿವೆ. ಕಳಪೆ ಆಹಾರ ಪೂರೈಸಿ ಕಪ್ಪು ಪಟ್ಟಿಗೆ ಸೇರಿದ್ದ ಕಂಪನಿಯಿಂದಲೇ ಆಹಾರ ಸಾಮಗ್ರಿ ಖರೀದಿಸಿ, ಅದರಿಂದ ಸಿದ್ಧ ಆಹಾರ ತಯಾರಿಸಲಾಗುತ್ತಿದೆ. ಹೀಗಾಗಿಯೇ ಗುಣಮಟ್ಟ ಸುಧಾರಿಸಿಲ್ಲ. ಈ ಬಗ್ಗೆ ಪರಿಶೀಲನೆ ನಡೆಸಿ, ತನಿಖೆಗೆ ಆದೇಶಿಸಬೇಕು’ ಎಂದು ಅಧಿಕಾರಿಗಳು ಪತ್ರದಲ್ಲಿ ಒತ್ತಾಯಿಸಿದ್ದರು.

ಇಲಾಖೆಯ ನಿರ್ದೇಶಕರು ಜೂನ್ 2ರಂದು ವರ್ಗಾವಣೆ ಆದೇಶ ಹೊರಡಿಸಿದ್ದು, ಪತ್ರ ಬರೆದಿದ್ದವರ ಹೆಸರೂ ವರ್ಗಾವಣೆ ಪಟ್ಟಿಯಲ್ಲಿದೆ. ‘ಕೆಲ ಸಿಬ್ಬಂದಿಯನ್ನು ಅವಧಿಗೂ ಮುನ್ನವೇ ವರ್ಗಾವಣೆ ಮಾಡಿದ್ದಾರೆ. ಕೆಲವರಿಗೆ ಸ್ಥಳ ನಿಯುಕ್ತಿ ಮಾಡಿಲ್ಲ’ ಎಂದು ನಿರ್ದೇಶಕರ ಕಚೇರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಧಾರವಾಡ ಜಿಲ್ಲಾ ಉಪ ನಿರ್ದೇಶಕರ ಕಚೇರಿಯ ಅಧೀಕ್ಷಕ ಹುದ್ದೆಯಲ್ಲಿದ್ದ ಸುಭಾಷ ಚಂದ್ರಗಿರಿ ಅವರು, ಕಳಪೆ ಗುಣಮಟ್ಟದ ಆಹಾರದ ಬಗ್ಗೆ ನಿರ್ದೇಶಕರಿಗೆ ಪತ್ರ ಬರೆದಿದ್ದರು. ಇದೇ ಜೂನ್ 2ರಂದು ಅವರ ಹುದ್ದೆಗೆ ಆರ್.ಎಲ್.ಶಿರೋಳ ಎಂಬುವವರನ್ನು ವರ್ಗಾವಣೆ ಮಾಡಲಾಗಿದೆ.

‘ಸುಭಾಷ ಅವರಿಗೆ ಯಾವುದೇ ಹುದ್ದೆ ತೋರಿಸಿಲ್ಲ. ಅವರನ್ನು ಧಾರವಾಡ ಜಿಲ್ಲಾ ಉಪ ನಿರ್ದೇಶಕರ ಕಚೇರಿಯಿಂದ ಬಿಡುಗಡೆಯನ್ನೂ ಮಾಡಿಲ್ಲ. ಕರ್ತವ್ಯಕ್ಕೆ ಹಾಜರಾಗಿ ಎಂದು ಶಿರೋಳ ಅವರಿಗೆ ಸೂಚಿಸಲಾಗಿದೆ. ಬೆಂಗಳೂರು ವ್ಯಾಪ್ತಿಯಲ್ಲಿ ಕೊಳೆತ ಬೆಲ್ಲ ಪೂರೈಕೆ ಸಂಬಂಧ ಉನ್ನತಾಧಿಕಾರಿಗಳ ಗಮನ ಸೆಳೆದಿದ್ದ ಮೇಲ್ವಿಚಾರಕಿ ಒಬ್ಬರನ್ನು ವರ್ಗಾವಣೆ ಮಾಡಲಾಗಿದೆ’ ಎಂದು ನಿರ್ದೇಶಕರ ಕಚೇರಿಯ ಅಧಿಕಾರಿ ಮಾಹಿತಿ ನೀಡಿದರು.

ಮುಖ್ಯಾಂಶಗಳು

- ಮೇ 27, 28ರಂದು ಇಲಾಖೆಯ ನಿರ್ದೇಶಕರಿಗೆ ಪತ್ರ
- ಜೂನ್ 2ರಂದು ವರ್ಗಾವಣೆ ಆದೇಶ



‘ಮುಖ್ಯ ಕಾರ್ಯದರ್ಶಿ ಸೂಚನೆ ಕಡೆಗಣನೆ’

‘ಇಲಾಖೆಯಲ್ಲಿ ಈ ಹಿಂದೆ 108 ಸಿಬ್ಬಂದಿಯನ್ನು ಹುದ್ದೆ ತೋರಿಸದೆ ವರ್ಗಾವಣೆ ಮಾಡಲಾಗಿತ್ತು. ಈ ಸಂಬಂಧ ಪತ್ರಿಕೆಗಳಲ್ಲಿ ವರದಿ ಪ್ರಕಟವಾದ ನಂತರ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿದ್ದರು. ಅವರು ಸೂಚಿಸಿದ್ದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಮತ್ತೆ ವರ್ಗಾವಣೆ ಮಾಡಲಾಗುತ್ತಿದೆ’ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಮೇ 23ರಂದು ಎಲ್ಲ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದರು. ‘ಹುದ್ದೆ ತೋರಿಸದೆ ವರ್ಗಾವಣೆ ಮಾಡಬಾರದು’ ಎಂದು ಸೂಚಿಸಿದ್ದರು.

‘ಈ ಮಾರ್ಗಸೂಚಿ ಬಂದ ನಂತರವೂ ಹುದ್ದೆ ತೋರಿಸದೆ ಹಲವರನ್ನು ವರ್ಗಾವಣೆ ಮಾಡಲಾಗಿದೆ. ಬಹುತೇಕ ಸಂದರ್ಭದಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಅವರು ಇರುವ ಹುದ್ದೆಯಿಂದ ಬಿಡುಗಡೆ ಮಾಡದೆಯೇ, ಆ ಹುದ್ದೆಗೆ ಬೇರೆಯವರನ್ನು ವರ್ಗಾವಣೆ ಮಾಡಲಾಗುತ್ತಿದೆ. ಈ ಕಾರಣದಿಂದ 40ಕ್ಕೂ ಹೆಚ್ಚು ಹುದ್ದೆಗಳಲ್ಲಿ ಇಬ್ಬರು ಅಧಿಕಾರಿ– ಸಿಬ್ಬಂದಿ ಇದ್ದಾರೆ’ ಎಂದು ಅಧಿಕಾರಿ ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

‘ಹಾರ್ಟ್ ಲ್ಯಾಂಪ್’: 2 ತಿಂಗಳಲ್ಲಿ 70ಸಾವಿರ ಪ್ರತಿ ಮುದ್ರಣ

ಮಡಿಕೇರಿ: ಅಂತರ ರಾಷ್ಟ್ರೀಯ ಬುಕರ್ ಪ್ರಶಸ್ತಿ ಪಡೆದ ‘ಹಾರ್ಟ್ ಲ್ಯಾಂಪ್’ (ಮೂಲ: ಬಾನು ಮುಷ್ತಾಕ್ ಅವರ ‘ಎದೆಯ ಹಣತೆ’) ಕೃತಿಯು 2 ತಿಂಗಳಿನಲ್ಲಿ 70 ಸಾವಿರ ಪ್ರತಿ ಮುದ್ರಣಗೊಂಡಿದೆ ಎಂದು ಅನುವಾದಕಿ ದೀಪಾ ಭಾಸ್ತಿ ತಿಳಿಸಿದರು.

ಕೊಡಗು ಪತ್ರಕರ್ತರ ಸಂಘವು ಇಲ್ಲಿ ಭಾನುವಾರ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಅಮೆಜಾನ್‌ನಂತಹ ವೇದಿಕೆಯಲ್ಲಿ ಸತತ ಮೂರು ವಾರಗಳವರೆಗೆ ಎಲ್ಲ ವಿಭಾಗದಲ್ಲೂ ಈ ಕೃತಿ ಮಾರಾಟದಲ್ಲಿ ಮೊದಲ ಸ್ಥಾನ ಪಡೆದಿತ್ತು. ಎಲ್ಲೆಡೆಯಿಂದ ಈ ಕೃತಿಗೆ ಬೇಡಿಕೆ ಬರುತ್ತಿದೆ. ‘ಹಾರ್ಟ್ ಲ್ಯಾಂಪ್’ ಕೃತಿಯನ್ನು ಮಲಯಾಳ, ಅಸ್ಸಾಮಿ ಹಾಗೂ ಒಡಿಯಾ ಭಾಷೆಗಳಿಗೆ ಭಾಷಾಂತರಿಸಲು ಅನುಮತಿ ನೀಡಿರುವೆ. ಇನ್ನಷ್ಟು ಭಾಷೆಗಳಿಂದ ಭಾಷಾಂತರಕ್ಕಾಗಿ ಕೋರಿಕೆಗಳು ಬರುತ್ತಿವೆ’ ಎಂದು ಹೇಳಿದರು.

‘ಕನ್ನಡದಲ್ಲಿ ಭಾಷಾಂತರ ಕ್ಷೇತ್ರ ಇನ್ನಷ್ಟು ಬೆಳೆಯಬೇಕಿದೆ. ಕನ್ನಡದ ಕೃತಿಗಳು ಇತರ ಭಾಷೆಗಳಿಗೆ, ಇತರ ಭಾಷೆಗಳ ಕೃತಿಗಳು ಕನ್ನಡಕ್ಕೆ ಅನುವಾದಗೊಳ್ಳಬೇಕು. ಆದರೆ, ಭಾರತದ ಇತರ ಭಾಷೆಗಳಿಗೆ ಹೋಲಿಸಿದರೆ ಕನ್ನಡದಲ್ಲಿ ಭಾಷಾಂತರದ ಪ್ರಮಾಣ ಕಡಿಮೆ ಇದೆ’ ಎಂದು ಪ್ರತಿಕ್ರಿಯಿಸಿದರು.



ಕೋವಿಡ್: 423 ಸಕ್ರಿಯ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 61 ಮಂದಿ ಕೋವಿಡ್ ಪೀಡಿತರಾಗಿರುವುದು ಭಾನುವಾರ ದೃಢಪಟ್ಟದೆ. ಇದರಿಂದಾಗಿ ಸಕ್ರಿಯ ಪ್ರಕರಣಗಳು 423ಕ್ಕೆ ಏರಿಕೆಯಾಗಿವೆ.

24 ಗಂಟೆಗಳ ಅವಧಿಯಲ್ಲಿ 325 ಮಂದಿಯ ಗಂಟಲ ದ್ರವದ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 18.7ರಷ್ಟು ವರದಿಯಾಗಿದೆ. ಸಕ್ರಿಯ ಪ್ರಕರಣಗಳಲ್ಲಿ 416 ಮಂದಿ ಮನೆ ಆರೈಕೆಗೆ ಒಳಗಾಗಿದ್ದರೆ, ಏಳು ಮಂದಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ರಾಜ್ಯದಲ್ಲಿ ಈವರೆಗೆ ವರದಿಯಾದ ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆ 955ಕ್ಕೆ ಏರಿಕೆಯಾಗಿದೆ. ಈ ಪ್ರಕರಣಗಳಲ್ಲಿ ಈಗಾಗಲೇ 523 ಮಂದಿ ಚೇತರಿಸಿಕೊಂಡಿದ್ದಾರೆ. ಸೋಂಕಿತರಲ್ಲಿ ಒಟ್ಟು ಒಂಬತ್ತು ಮಂದಿ ಈವರೆಗೆ ಮೃತಪಟ್ಟಿದ್ದಾರೆ.

‘ಕೈ’ನಲ್ಲಿ ಅಸಮಾಧಾನ ನಾಲ್ವರ ಹೆಸರಿಗೆ ತಡೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್‌ನ ನಾಲ್ಕು ಸ್ಥಾನಗಳಿಗೆ ನಾಮನಿರ್ದೇಶನ ಮಾಡಲು ಹೈಕಮಾಂಡ್ ಸೂಚಿಸಿದ ಆರತಿ ಕೃಷ್ಣ, ರಮೇಶ್ ಬಾಬು, ದಿನೇಶ್ ಅಮೀನ್‌ಮಟ್ಟು, ಡಿ.ಜಿ. ಸಾಗರ್ ಹೆಸರುಗಳಿಗೆ ರಾಜ್ಯ ಕಾಂಗ್ರೆಸ್‌ನಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. ಹೀಗಾಗಿ, ಈ ಪಟ್ಟಿಯನ್ನು ತಡೆಹಿಡಿಯಲಾಗಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

‘ವಿಧಾನಪರಿಷತ್‌ನ 4 ಸ್ಥಾನಗಳಿಗೆ ನಾಮನಿರ್ದೇಶನಗೊಂಡವರ ಪಟ್ಟಿ ಇನ್ನೂ ರಾಜಭವನಕ್ಕೆ ತಲುಪಿಲ್ಲ’ ಎಂದು ರಾಜಭವನದ ಮೂಲಗಳು ‘ಪ್ರಜಾವಾಣಿ’ಗೆ ಖಚಿತಪಡಿಸಿವೆ.

ಈ ಮಧ್ಯೆ, ನಾಮನಿರ್ದೇಶನ ಮಾಡಲು ಅನುಮೋದಿಸಿರುವ ಹೆಸರುಗಳಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಕಾಂಗ್ರೆಸ್‌ನ ಕೆಲವು ನಾಯಕರು ಪಕ್ಷದ ವರಿಷ್ಠರಿಗೆ ದೂರು ನೀಡಿದ್ದಾರೆ.

‘ರಮೇಶ್ ಬಾಬು ಮತ್ತು ಡಿ.ಜಿ. ಸಾಗರ್ ಅವರು ಜೆಡಿಎಸ್‌ನಲ್ಲಿ ಇದ್ದವರು. ರಮೇಶ್ ಬಾಬು ಅವರು ಮೂರು ವರ್ಷಗಳ ಹಿಂದೆಯಷ್ಟೆ ಪಕ್ಷಕ್ಕೆ ಬಂದಿದ್ದಾರೆ. ಅನಿವಾಸಿ ಭಾರತೀಯ ಸಮಿತಿಯ ಉಪಾಧ್ಯಕ್ಷೆಯಾಗಿರುವ ಆರತಿ ಕೃಷ್ಣ ಮತ್ತು ಸಿದ್ದರಾಮಯ್ಯ ಅವರಿಗೆ 2013–18ರವರೆಗೆ ಮಾಧ್ಯಮ ಸಲಹೆಗಾರರಾಗಿದ್ದ ದಿನೇಶ್ ಅಮೀನ್‌ಮಟ್ಟು ಅವರು ಪಕ್ಷ ಸಂಘಟನೆಯಲ್ಲಿ ಗುರುತಿಸಿಕೊಂಡವರಲ್ಲ. ಹೀಗಾಗಿ, ವಿಧಾನ ಪರಿಷತ್‌ಗೆ ಈ ನಾಲ್ವರನ್ನು ನಾಮನಿರ್ದೇಶನ ಮಾಡುವುದರಲ್ಲಿ ಯಾವುದೇ ಅರ್ಥ ಇಲ್ಲ’ ಎಂದು ಕಾಂಗ್ರೆಸ್‌ನ ಕೆಲವು ನಾಯಕರು ಡಿ.ಕೆ. ಶಿವಕುಮಾರ್ ಬಳಿ ದೂರಿದ್ದಾರೆ ಎಂದೂ ಗೊತ್ತಾಗಿದೆ.

‘ಪಕ್ಷ ಸಂಘಟನೆಯಲ್ಲಿ ಕೆಲಸ ಮಾಡಿದವರನ್ನು ಗುರುತಿಸಿ ಅವಕಾಶ ನೀಡಬೇಕೆಂದು ರಾಹುಲ್ ಗಾಂಧಿ ಆಗಾಗ ಹೇಳುತ್ತಾರೆ. ಪಕ್ಷಕ್ಕಾಗಿ ದುಡಿದ 20ಕ್ಕೂ ಹೆಚ್ಚು ನಾಯಕರು ವಿಧಾನ ಪರಿಷತ್‌ನ ಸ್ಥಾನದ ಆಕಾಂಕ್ಷಿಗಳ ಪಟ್ಟಿಯಲ್ಲಿದ್ದಾರೆ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಸೂಚಿಸಿದ್ದ ಹೆಸರುಗಳನ್ನೂ ಗಣನೆಗೆ ತೆಗೆದುಕೊಳ್ಳದೆ ಆಯ್ಕೆ ನಡೆದಿದೆ. ಹೀಗಾಗಿ, ಈ ಪಟ್ಟಿಯನ್ನು ತಡೆಹಿಡಿಯುವಂತೆ ಪಕ್ಷದ ಕೆಲವು ನಾಯಕರು ಒತ್ತಡ ಹೇರುತ್ತಿರುವುದು ನಿಜ’ ಎಂದು ಕೆಪಿಸಿಸಿ ಪದಾಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಗೃಹ ಖಾತೆ– ಪರಮೇಶ್ವರ ಅಸಮಾಧಾನ?

ಕಾಲ್ತುಳಿತ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮು ಗಲಭೆ ಸೇರಿದಂತೆ ರಾಜ್ಯದಲ್ಲಿ ಇತ್ತೀಚೆಗೆ ನಡೆದ ಕೆಲವು ಘಟನೆಗಳನ್ನು ನಿಭಾಯಿಸುವ ವೇಳೆ ಕೆಲವರ ಹಸ್ತಕ್ಷೇಪದಿಂದ ತೀವ್ರ ನೊಂದಿರುವ ಜಿ. ಪರಮೇಶ್ವರ ಅವರು ತಮ್ಮನ್ನು ಗೃಹ ಇಲಾಖೆಯ ಹೊಣೆಯಿಂದ ಮುಕ್ತಗೊಳಿಸುವಂತೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಬಳಿ ಚರ್ಚೆ ನಡೆಸಿದ್ದಾರೆ. ಅಲ್ಲದೆ, ಈ ಬಗ್ಗೆ ಹೈಕಮಾಂಡ್ ನಾಯಕರಿಗೂ ಮಾಹಿತಿ ನೀಡಿದ್ದಾರೆ ಎನ್ನಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದ ಘಟನೆಗಳ ಕಾರಣಕ್ಕೆ ಮಂಗಳೂರು ಪೊಲೀಸ್ ಕಮಿಷನರ್ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ದಿಢೀರ್ ವರ್ಗಾವಣೆ ಮಾಡಲಾಗಿತ್ತು. ಈ ವಿಚಾರದಲ್ಲಿ ತಮ್ಮ ಜೊತೆ ಸಮಾಲೋಚನೆ ನಡೆಸಿಲ್ಲ ಎಂದು ಪರಮೇಶ್ವರ ಅಸಮಾಧಾನಗೊಂಡಿದ್ದರು ಎನ್ನಲಾಗಿದೆ.

28 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’

ರಾಜ್ಯದ ವಿವಿಧೆಡೆ ಇಂದಿನಿಂದ ಭಾರಿ ಮಳೆಯಾಗುವ ಸಾಧ್ಯತೆ– ಮುನ್ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಸೋಮವಾರದಿಂದ ಭಾರಿ ಗಾಳಿ ಸಹಿತ ಮಳೆಯಾಗುವ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, 28 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಕರಾವಳಿಯ ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯನ್ನು ಹೊರತುಪಡಿಸಿ ಉಳಿದ ಎಲ್ಲ ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಕರಾವಳಿ ಜಿಲ್ಲೆಗಳ ಹಲವೆಡೆ ಸೋಮವಾರ ಮತ್ತು ಮಂಗಳವಾರ ಸಾಧಾರಣ ಮಳೆಯಾಗುವ ಸಾಧ್ಯತೆಯಿದ್ದು, ಬುಧವಾರ ಈ ಜಿಲ್ಲೆಗಳಿಗೂ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ. ಒಂದೆರಡು ಸ್ಥಳಗಳಲ್ಲಿ ಗಂಟೆಗೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ ಭಾರಿ ಮಳೆಯಾಗುವ ಸಂಭವವಿದೆ.

ಉತ್ತರ ಒಳನಾಡಿನ ಕೊಪ್ಪಳ, ರಾಯಚೂರು, ವಿಜಯಪುರ, ಬಾಗಲಕೋಟೆ ಮತ್ತು ಗದಗ ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಗಂಟೆಗೆ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ ಸೋಮವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಬೀದರ್, ಕಲಬುರಗಿ, ಹಾವೇರಿ, ಬೆಳಗಾವಿ, ಧಾರವಾಡ ಮತ್ತು ಯಾದಗಿರಿ ಜಿಲ್ಲೆಯ ಹಲವೆಡೆ ಬಿರುಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನಲ್ಲಿ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಚಾಮರಾಜನಗರ, ಮಂಡ್ಯ, ರಾಮನಗರ, ಚಿತ್ರದುರ್ಗ, ದಾವಣಗೆರೆ, ತುಮಕೂರು, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಮೈಸೂರು, ಕೊಡಗು, ಬಳ್ಳಾರಿ, ವಿಜಯನಗರ ಮತ್ತು ಕೋಲಾರದಲ್ಲಿ ಗಂಟೆಗೆ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಗುರುವಾರದಿಂದ ರಾಜ್ಯದ ವಿವಿಧೆಡೆ ಮಳೆಯ ತೀವ್ರತೆ ಹೆಚ್ಚುವ ಸಾಧ್ಯತೆ ಇದೆ.



ಧಾರವಾಡದ ಎನ್‌ಟಿಟಿಎಫ್ ಮುಂಭಾಗ ಭಾನುವಾರದ ರಭಸದ ಮಳೆಗೆ ರಸ್ತೆಯಲ್ಲಿ ಮಳೆ ನೀರು ತುಂಬಿಕೊಂಡಿತ್ತು

ಮಳೆ: ಮನೆಗಳಿಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಹುಬ್ಬಳ್ಳಿ, ಧಾರವಾಡ ನಗರದಲ್ಲಿ ಭಾನುವಾರ ಕೆಲ ಸಮಯ ರಭಸದ ಮಳೆಯಾಗಿದೆ. ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಚಚಡಿಯಲ್ಲಿ ಶನಿವಾರ ಸಂಜೆ ಸುರಿದ ಧಾರಾಕಾರ ಮಳೆಗೆ ಹತ್ತಾರು ಮನೆಗಳಿಗೆ ನೀರು ನುಗ್ಗಿದ್ದು, ದವಸ–ಧಾನ್ಯಗಳು, ರಸಗೊಬ್ಬರ ನೀರುಪಾಲಾಗಿವೆ. ಕೆಲವೆಡೆ ಹೊಲದ ಒಡ್ಡುಗಳು ಒಡೆದಿವೆ.

‘ಬಿತ್ತನೆಗಾಗಿ 50 ರಸಗೊಬ್ಬರ ಚೀಲಗಳನ್ನು ಮನೆಯಲ್ಲಿ ಇರಿಸಿದ್ದೆವು. ದವಸ–ಧಾನ್ಯಗಳೂ ಇದ್ದವು. ಬಿಟ್ಟುಬಿಡದೆ ಸುರಿದ ಮಳೆಯಿಂದ ಮನೆಗೆ ನೀರು ನುಗ್ಗಿ, ಅವೆಲ್ಲ ನೀರುಪಾಲಾಗಿವೆ’ ಎಂದು ಸವದತ್ತಿ ರೈತ ಖಾನಸಾಬ್ ಶಿಲೇದಾರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಉದ್ದು, ಹೆಸರು, ಸೋಯಾಬೀನ್ ಮತ್ತಿತರ ಬೆಳೆಗಳನ್ನು ಬಿತ್ತಿದ್ದೆವು. ಧಾರಾಕಾರ ಮಳೆಯಿಂದ ಹೊಲದಲ್ಲಿನ ಒಡ್ಡುಗಳೆಲ್ಲ ಒಡೆದು, ಮೊಳಕೆಯೊಡೆಯುವ ಹಂತಕ್ಕೆ ಬಂದಿದ್ದ ಬೀಜಗಳೆಲ್ಲ ಕೊಚ್ಚಿಕೊಂಡು ಹೋಗಿವೆ’ ಎಂದು ರೈತರಾದ ಸೋಮಪ್ಪ ಹುಡೇದ, ರಾಜೇಸಾಬ್ ಯಕ್ಕುಂಡಿ ಅಸಹಾಯಕತೆ ತೋಡಿಕೊಂಡರು.

ಧಾರವಾಡ ನಗರ ಮತ್ತು ಸುತ್ತಲಿನ ಪ್ರದೇಶದಲ್ಲಿ ಭಾನುವಾರ ಬಿರುಸಿನ ಮಳೆಯಾಗಿದೆ. ಗುಡುಗು, ಮಿಂಚಿನ ಆರ್ಭಟದೊಂದಿಗೆ ಸಂಜೆ ಸುಮಾರು ಮುಕ್ಕಾಲು ಗಂಟೆ ಜೋರಾಗಿ ಸುರಿಯಿತು. ಕೆಲವೆಡೆ ತಗ್ಗುಪ್ರದೇಶದಲ್ಲಿ ಮನೆಗಳಿಗೆ ನೀರು ನುಗ್ಗಿತ್ತು. ರಸ್ತೆಯಲ್ಲಿ ನೀರು ನಿಂತು ಸಂಚಾರಕ್ಕೂ ತೊಡಕಾಗಿತ್ತು.

ಕತ್ತು ಸೀಳಿ ವ್ಯಕ್ತಿ ಆತ್ಮಹತ್ಯೆ

ದೇವರಿಯಾ (ಯುಪಿ): ಸಮೀಪದ ಗ್ರಾಮವೊಂದರಲ್ಲಿ ಈದ್-ಉಲ್-ಅಜಾ (ಬಕ್ರೀದ್) ಪ್ರಾರ್ಥನೆ ಮುಗಿಸಿಕೊಂಡು ಮನೆಗೆ ಮರಳಿದ ವ್ಯಕ್ತಿಯೊಬ್ಬರು ಕತ್ತಿಯಿಂದ ಕತ್ತು ಸೀಳಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಅಲ್ಲಾಹು ಮತ್ತು ಆತನ ಪ್ರವಾದಿಯ ಹೆಸರಿನಲ್ಲಿ ಈದ್-ಉಲ್-ಅಜಾ ದಿನ ಪ್ರಾಣತ್ಯಾಗ ಮಾಡುತ್ತಿದ್ದೇನೆ’ ಎಂದು ಅವರು ಪತ್ರ ಬರೆದು ಇಟ್ಟಿದ್ದಾರೆ ಎಂದು ಗ್ರಾಮಸ್ಥರು ಹೇಳಿದ್ದಾರೆ. ಆದರೆ, ಪೊಲೀಸರು ಇದನ್ನು ನಿರಾಕರಿಸಿದ್ದು, ‘ಅಂತಹ ಯಾವುದೇ ಪತ್ರ ಘಟನಾ ಸ್ಥಳದಲ್ಲಿ ಸಿಕ್ಕಿಲ್ಲ’ ಎಂದು ಹೇಳಿದ್ದಾರೆ.

‘ಇಶ್ ಮಹಮ್ಮದ್ ಅನ್ಸಾರಿ (60) ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ. ತಮ್ಮ ಮನೆಯ ಹೊರಗಡೆ ಇರುವ ಗುಡಿಸಲಿನಲ್ಲಿ ಅವರು ಕತ್ತು ಸೀಳಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾರೆ, ಚೀರಾಟ ಕೇಳಿ ಧಾವಿಸಿದ ಕುಟುಂಬಸ್ಥರು, ಸ್ಥಳೀಯರು ಅವರನ್ನು ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದರು. ಅಲ್ಲಿಂದ ಗೋರಖ್‌ಪುರ ವೈದ್ಯಕೀಯ ಕಾಲೇಜಿಗೆ ಕರೆದೊಯ್ಯಲಾಯಿತು. ಅಲ್ಲಿ ಅವರು ಮೃತಪಟ್ಟರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸಮೀಪದ ಸುಲ್ತಾನ್ ಸಯ್ಯದ್ ಮಕ್ದೂಮ್ ಅಶ್ರಫ್ ಶಾ ದರ್ಗಾಕ್ಕೆ ಹೋಗಿ ಈದ್ ಪ್ರಾರ್ಥನೆ ಮುಗಿಸಿಕೊಂಡು ಬಂದ ಅವರು ನೇರವಾಗಿ ಮನೆಯ ಹೊರಗಿರುವ ಗುಡಿಸಲಿಗೆ ಹೋದರು. ಸ್ವಲ್ಪದರಲ್ಲೇ ಅವರ ಚೀರಾಟ ಕೇಳಿ ಸ್ಥಳಕ್ಕೆ ಧಾವಿಸಿದಾಗ ರಕ್ತದ ಮಡುವಿನಲ್ಲಿ ಬಿದ್ದಿದ್ದರು’ ಎಂದು ಮೃತರ ಪತ್ನಿ ಹಾಜಿರಾ ಖಾತೂನ್ ಪೊಲೀಸರಿಗೆ ದೂರು ನೀಡಿದ್ದಾರೆ.

‘ಪ್ರಾಥಮಿಕ ತನಿಖೆಯ ಅನ್ವಯ ಅನ್ಸಾರಿ ತಾವೇ ಕತ್ತಿಯಿಂದ ಕುತ್ತಿಗೆಗೆ ಗಾಯ ಮಾಡಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಆದರೂ, ಎಲ್ಲ ಆಯಾಮಗಳಲ್ಲಿ ತನಿಖೆ ನಡೆಯಲಿದೆ’ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಅರವಿಂದ್ ಕುಮಾರ್ ವರ್ಮ ತಿಳಿಸಿದರು.

ಮಹಿಳೆಗೆ ಬಹಿಷ್ಕಾರ ಆರೋಪ: ಪ್ರಕರಣ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಗ್ರಾಮದಿಂದ ತಮಗೆ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ ಎಂದು ಆರೋಪಿಸಿ ತಾಲ್ಲೂಕಿನ ಮಲವಗೊಪ್ಪ ತಾಂಡದ ನಿವಾಸಿ ಗೀತಾ ಬಾಯಿ ಅವರು ತುಂಗಾ ನಗರ ಪೊಲೀಸ್ ಠಾಣೆಗೆ ಈಚೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಸಮುದಾಯದ ಕಟ್ಟುಪಾಡುಗಳಿಗೆ ಬೆಲೆ ನೀಡಿಲ್ಲ ಎನ್ನುವ ಕಾರಣ ನೀಡಿ ತಾಂಡದ ಹಟ್ಟಿ ನಾಯಕ ನಿಂದಿಸಿ, ಗ್ರಾಮದಿಂದ ಬಹಿಷ್ಕಾರ ಹಾಕಿದ್ದಾರೆ. ₹10,000 ದಂಡವನ್ನೂ ವಿಧಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ತಾಂಡದಲ್ಲಿ ಗೋದಿ ಹಬ್ಬ (ತೀಜ್) ಆಚರಿಸುವ ಸಂಬಂಧ ಚರ್ಚಿಸಲು ಈಚೆಗೆ ಸಭೆ ನಡೆಸಲಾಗಿತ್ತು. ಮೇ 22 ಮತ್ತು 23ರಂದು ಹಬ್ಬ ನಡೆಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿತ್ತು. ಇದಕ್ಕಾಗಿ ಗ್ರಾಮದ 220 ಮನೆಗಳಿಗೆ ತಲಾ ₹2,000 ಸೇವಾ ಶುಲ್ಕ ವಿಧಿಸಲಾಗಿತ್ತು. ಬಳಿಕ ಹಟ್ಟಿ ನಾಯಕ ನಾನ್ಯಾನಾಯ್ಕ ಅವರು ಏಕಪಕ್ಷೀಯ ನಿರ್ಧಾರ ತೆಗೆದುಕೊಂಡು ಮೇ 13 ಮತ್ತು 14ರಂದು ಹಬ್ಬ ಮಾಡುತ್ತಿರುವುದಾಗಿ ಊರಿನಲ್ಲಿ ಬ್ಯಾನರ್ ಹಾಕಿಸಿದ್ದರು. ಇದಕ್ಕೆ 10ಕ್ಕೂ ಹೆಚ್ಚು ಮಹಿಳೆಯರು ವಿರೋಧ ವ್ಯಕ್ತಪಡಿಸಿದ್ದೆವು. ಗ್ರಾಮಸ್ಥರಿಗೆ ಮಾಹಿತಿ ನೀಡದೆ, ಈಗಾಗಲೇ ನಿಗದಿಪಡಿಸಿದ ದಿನಕ್ಕಿಂತಲೂ ಮುಂಚಿತವಾಗಿ ಹಬ್ಬ ನಡೆಸಿದರೆ ಹಣ ಹೊಂದಿಸುವುದು ಕಷ್ಟವಾಗುತ್ತದೆ ಎಂದು ತಿಳಿಸಿದ್ದೆವು’ ಎಂದು ವಿವರಿಸಿದ್ದಾರೆ. ‘ಇದರಿಂದ ಸಿಟ್ಟಾದ ನಾನ್ಯಾನಾಯ್ಕ, ನಮ್ಮನ್ನು ಅವಾಚ್ಯವಾಗಿ ನಿಂದಿಸಿದ್ದರು. ನನ್ನ ವಿಚಾರವಾಗಿ ಜೂನ್ 1ರಂದು ಪ್ರತ್ಯೇಕವಾಗಿ ಪಂಚಾಯಿತಿ ನಡೆಸಿದ್ದ ಅವರು ಗ್ರಾಮದಿಂದ ಬಹಿಷ್ಕಾರ ಹಾಕಿರುವುದಾಗಿ ತಿಳಿಸಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ತಪ್ಪಿತಸ್ಥರ ವಿರುದ್ಧ ಕ್ರಮ: ಎಸ್‌ಪಿ

‘ಬಹಿಷ್ಕಾರ ಕ್ರಮ ಸರಿಯಲ್ಲ. ಘಟನೆ ಮರುಕಳಿಸದಂತೆ ತಡೆಯಲು ಗ್ರಾಮಕ್ಕೆ ತೆರಳಿ ಜಾಗೃತಿ ಮೂಡಿಸುವಂತೆ ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್ ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಜಗಳೂರು: ಸ್ಫೋಟಕ್ಕೆ ಬೆಚ್ಚಿದ ಜನ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಜಗಳೂರಿನ ತಾಲ್ಲೂಕು ಕಚೇರಿ ಸಮೀಪ ಬಾಕ್ಸ್ ಚರಂಡಿ ನಿರ್ಮಾಣ ಕಾಮಗಾರಿಗೆ ಅಡ್ಡಿಯಾಗಿದ್ದ ಕಲ್ಲುಬಂಡೆ ತೆರವುಗೊಳಿಸಲು ನಡೆಸಿದ ಜಿಲೆಟಿನ್ ಕಡ್ಡಿಯ ಸ್ಫೋಟದಿಂದ ಪಟ್ಟಣದ ಜನರು ಆತಂಕಗೊಂಡರು. ಸ್ಫೋಟದಲ್ಲಿ ಸಿಡಿದ ಕಲ್ಲುಗಳು ಜನವಸತಿ ಪ್ರದೇಶದಲ್ಲಿ ಬಿದ್ದಿವೆ.

ಶನಿವಾರ ರಾತ್ರಿ ಈ ಘಟನೆ ಸಂಭವಿಸಿದ್ದು, ಸ್ಥಳಕ್ಕೆ ಬಾಂಬ್ ಪತ್ತೆ ದಳ ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಇನ್ನೂ ಕೆಲ ಸ್ಫೋಟಕ ಇರುವುದು ಖಚಿತವಾಗಿದ್ದು, ಘಟನಾ ಸ್ಥಳವನ್ನು ನಿರ್ಬಂಧಿತ ಪ್ರದೇಶವಾಗಿ ಘೋಷಣೆ ಮಾಡಲಾಗಿದೆ. ಬಾಂಬ್ ನಿಷ್ಕ್ರಿಯ ದಳ ಬೆಂಗಳೂರಿನಿಂದ ಸೋಮವಾರ ಬರುವ ನಿರೀಕ್ಷೆ ಇದೆ.

ಪಟ್ಟಣದ ಬಿಲಾಲ್ ಮಸೀದಿಯಿಂದ ವೈಭವ ಹೋಟೆಲ್‌ವರಗೆ ಬಾಕ್ಸ್ ಚರಂಡಿ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಮಿನಿ ವಿಧಾನಸೌಧದ ಬಳಿ ಕಾಮಗಾರಿಗೆ ಅಡ್ಡಿಯಾದ ಕಲ್ಲುಬಂಡೆ ತೆರವುಗೊಳಿಸಲು ಮುಂದಾಗಿದ್ದ ಗುತ್ತಿಗೆದಾರ, ಶನಿವಾರ ರಾತ್ರಿ 10.30ಕ್ಕೆ ಮೂರು ಸ್ಥಳಗಳಲ್ಲಿ ಸ್ಫೋಟ ನಡೆಸಿದ್ದಾರೆ. ಜಿಲೆಟಿನ್ ಕಡ್ಡಿಯಿಂದ ಹೊರಹೊಮ್ಮಿದ ಭಾರಿ ಶಬ್ದಕ್ಕೆ ಜನರು ಬೆಚ್ಚಿಬಿದ್ದಿದ್ದಾರೆ. ಕಲ್ಲಿನ ತುಂಡುಗಳು ಬಹುದೂರದವರೆಗೆ ಬಿದ್ದಿವೆ.

ಘಟನಾ ಸ್ಥಳಕ್ಕೆ ಧಾವಿಸಿದ ಪೊಲೀಸರು ಕೆಲವರನ್ನು ವಶಕ್ಕೆ ಪಡೆದಿದ್ದಾರೆ. ಗುತ್ತಿಗೆದಾರ ಶ್ರೀಜಿತ್, ಚಂದ್ರಮೌಳಿ ಆಯಿಲ್ ಅಂಡ್ ಎಂಜಿನಿಯರಿಂಗ್ ವರ್ಕ್ಸ್ ಕಂಪನಿಯ ವ್ಯವಸ್ಥಾಪಕ ಅರುಣಕುಮಾರ್ ಹಾಗೂ ಉಚ್ಚಂಗಿದುರ್ಗದ ಕುಮಾರ್ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ.

270 ವರ್ಷಗಳ ಬಳಿಕ ಕುಂಭಾಭಿಷೇಕ

ತಿರುವನಂತಪುರ (ಪಿಟಿಐ): ಕೇರಳದ ಶ್ರೀ ಪದ್ಮನಾಭಸ್ವಾಮಿ ದೇವಾಲಯದಲ್ಲಿ 270 ವರ್ಷಗಳ ಬಳಿಕ ನಡೆದ ಮಹಾ ಕುಂಭಾಭಿಷೇಕದಲ್ಲಿ ಅಪಾರ ಸಂಖ್ಯೆಯ ಭಕ್ತರು ಭಾನುವಾರ ಪಾಲ್ಗೊಂಡಿದ್ದರು.

ಪುರಾತನ ದೇಗುಲದಲ್ಲಿ ದೀರ್ಘಾವಧಿಯಿಂದ ನಡೆಯುತ್ತಿದ್ದ ನವೀಕರಣ ಕಾರ್ಯವು ಇತ್ತೀಚೆಗೆ ಪೂರ್ಣಗೊಂಡ ಕಾರಣ 3 ಕಲಶ ಸಮರ್ಪಣೆ, ವಿಶ್ವಕಸೇನಾ ಮೂರ್ತಿ ಪುನರ್ ಪ್ರತಿಷ್ಠಾಪನೆ ಮತ್ತು ಅಷ್ಟಬಂಧ ಕಲಶವು ನಡೆಯಿತು ಎಂದು ಮೂಲಗಳು ತಿಳಿಸಿವೆ.

ವಿಶ್ವಕಸೇನಾ ಮೂರ್ತಿಯು ಮುನ್ನೂರು ವರ್ಷ ಹಳೆಯದಾಗಿದ್ದು, ಅದನ್ನು ನವೀಕರಣಗೊಳಿಸಿ ಪ್ರತಿಷ್ಠಾಪಿಸಲಾಗಿದೆ. ‘ಮುಂದಿನ ಹಲವು ದಶಕಗಳ ಕಾಲ ಮಹಾ ಕುಂಭಾಭಿಷೇಕವನ್ನು ನೋಡಲು ಸಾಧ್ಯವಿಲ್ಲ. ಸುಪ್ರೀಂ ಕೋರ್ಟ್ 2017ರಲ್ಲಿ ನೇಮಿಸಿದ ತಜ್ಞರ ಸಮಿತಿಯ ನಿರ್ದೇಶನದಂತೆ ದೇಗುಲದ ಪುನರ್‌ನಿರ್ಮಾಣ ನಡೆದಿದೆ. ಕೊರೊನಾ ಸಾಂಕ್ರಾಮಿಕದಿಂದಾಗಿ ಸ್ವಲ್ಪ ವಿಳಂಬವಾಗಿತ್ತು’ ಎಂದು ದೇಗುಲದ ಅಧಿಕಾರಿಗಳು ತಿಳಿಸಿದ್ದಾರೆ.



ಪದ್ಮನಾಭಸ್ವಾಮಿ ದೇವಾಲಯಕ್ಕೆ ನೂರಾರು ಭಕ್ತರು ಆಗಮಿಸಿದ್ದರು – ಪಿಟಿಐ ಚಿತ್ರ

ಸುಹಾಸ್ ಶೆಟ್ಟಿ ಹತ್ಯೆ ತನಿಖೆ ಎನ್‌ಐಎಗೆ

ಒಂದನೇ ಪುಟದಿಂದ...

ಈ ಬಗ್ಗೆ ಮಂಗಳೂರು ನಗರದ ಉತ್ತರ ಉಪ ವಿಭಾಗದ ಬಜಪೆ ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್ಗಳು ಹಾಗೂ 1959ರ ಸಶಸ್ತ್ರ ಕಾಯ್ದೆಯ ಸೆಕ್ಷನ್‌ಗಳ ಅಡಿಯಲ್ಲಿ ಎಫ್‌ಐಆರ್ ದಾಖಲಾದ ಮಾಹಿತಿ ಸಿಕ್ಕಿದೆ. ಜನರ ಮನಸ್ಸಿನಲ್ಲಿ ಆತಂಕ ಸೃಷ್ಟಿಸಲು ನಿರ್ದಿಷ್ಟ ವ್ಯಕ್ತಿಯನ್ನು ಗುರಿಯಾಗಿಸಿ ನಡೆಸಿದ ಕೃತ್ಯ ಇದಾಗಿದ್ದು, ಇದರಲ್ಲಿ ಭಾಗಿಯಾದ ಆರೋಪಿಗಳು ನಿಷೇಧಿತ ಕಾನೂನುಬಾಹಿರ ಸಂಸ್ಥೆ ಪಿಎಫ್‌ಐ ಸಂಘಟನೆಯ ಸದಸ್ಯರಾಗಿದ್ದಾರೆ ಎಂಬ ಆರೋಪವಿರುವುದರಿಂದ 1967ರ ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆಯ (ಯುಎಪಿಎ) ವಿವಿಧ ಸೆಕ್ಷನ್‌ಗಳು ಅನ್ವಯವಾಗುತ್ತವೆ.

ಈ ಪ್ರಕರಣದ ಗಂಭೀರತೆಯನ್ನು ಹಾಗೂ ಇದರಿಂದಾಗಿ ರಾಷ್ಟ್ರಮಟ್ಟದಲ್ಲಿ ಉಂಟಾಗಬಹುದಾದ ದುಷ್ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು ಇದರ ಹಿಂದಿನ ದೊಡ್ಡ ಸಂಚನ್ನು ಬಯಲಿಗೆಳೆಯುವ ಅಗತ್ಯವಿದೆ. ಅದಕ್ಕಾಗಿ ಪ್ರಕರಣವನ್ನು ಎನ್‌ಐಎಯಿಂದ ತನಿಖೆ ನಡೆಸುವ ಅಗತ್ಯವಿದೆ. ಈ ಕಾರಣದಿಂದಾಗಿ 2008ರ ರಾಷ್ಟ್ರೀಯ ತನಿಖಾ ಸಂಸ್ಥೆ ಕಾಯ್ದೆಯ ಅನುಸೂಚಿತ ಅಪರಾಧಗಳ ಅಡಿ ಈ ಪ್ರಕರಣವು ಬರುತ್ತದೆ ಎಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುತ್ತದೆ. 2008ರ ಎನ್‌ಐಎ ಕಾಯ್ದೆಯ ಸೆಕ್ಷನ್ 6 (5) ಮತ್ತು ಸೆಕ್ಷನ್ 8ರಲ್ಲಿ ನೀಡಲಾದ ಅಧಿಕಾರ ಬಳಸಿಕೊಂಡು ಕೇಂದ್ರ ಸರ್ಕಾರವು ಈ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಳ್ಳುವಂತೆ ಎನ್‌ಐಎಗೆ ನಿರ್ದೇಶನ ನೀಡುತ್ತಿದೆ ಎಂದು ಕೇಂದ್ರ ಸರ್ಕಾರದ ಗೃಹ ಸಚಿವಾಲಯದ ಆದೇಶದಲ್ಲಿ ತಿಳಿಸಲಾಗಿದೆ.

ಮಂಗಳೂರು ನಗರ ಪೊಲೀಸ್ ಕಮಿಷನರೇಟ್‌ನ ಪೊಲೀಸರು ಈ ಹತ್ಯೆ ಸಂಬಂಧ ಈಗಾಗಲೇ 12 ಆರೋಪಿಗಳನ್ನು ಬಂಧಿಸಿದ್ದಾರೆ.

> **ಈ ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸಬೇಕು ಎಂದು ನಾವು ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದೆವು. ಕೇಂದ್ರದ ನಿರ್ಧಾರವನ್ನು ಸ್ವಾಗತಿಸುತ್ತೇವೆ**
>
> **ಬಿ.ವೈ.ವಿಜಯೇಂದ್ರ**
> ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಗಾಳಿ– ಮಳೆ: 598 ಹೆಕ್ಟೇರ್ ಮಾವು, 487 ಹೆಕ್ಟೇರ್‌ನಲ್ಲಿ ಬಾಳೆ ಬೆಳೆ ನಾಶ

2 ಸಾವಿರ ಹೆಕ್ಟೇರ್ ತೋಟಗಾರಿಕೆ ಬೆಳೆಗೆ ಹಾನಿ

• ಗಾಣಧಾಳು ಶ್ರೀಕಂಠ

ಬೆಂಗಳೂರು: ‘ಎರಡು ತಿಂಗಳ ಹಿಂದೆ ಸುರಿದ ಬಿರುಗಾಳಿ ಮಳೆಗೆ ನಾಲ್ಕು ಎಕರೆಯಲ್ಲಿದ್ದ ಬಾಳೆ ಗಿಡಗಳು ಮುರಿದುಬಿದ್ದವು. ಸುಮಾರು ಮೂರು ಲಕ್ಷ ರೂಪಾಯಿ ನಷ್ಟವಾಯಿತು...’

ಮುಂಗಾರು ಪೂರ್ವ ಮಳೆ–ಗಾಳಿಯ ಏಟಿಗೆ ಬಾಳೆ ಗಿಡಗಳನ್ನು ಕಳೆದುಕೊಂಡ ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಸೋಮನಪುರದ ಕೃಷಿಕ ಸಿದ್ದು ಅವರ ಸಂಕಟದ ನುಡಿಗಳಿವು.

‘ಸಾವಯವ ವಿಧಾನದಲ್ಲಿ ಎರಡು ಸಾವಿರ ನೇಂದ್ರ ತಳಿ ಬಾಳೆಯ ಗಿಡಗಳನ್ನು ಬೆಳೆದಿದ್ದೆ. ಎಲ್ಲವೂ ಮಾತೆ ಬಿಡುವ ಹಂತದಲ್ಲಿದ್ದವು. ಇನ್ನೆರಡು ತಿಂಗಳಲ್ಲಿ ಗೊನೆ ಬಿಟ್ಟು, ಕೊಯ್ಲಿಗೆ ಬರುತ್ತಿದ್ದವು. ಅಷ್ಟರಲ್ಲಿ ಮಳೆ ಗಾಳಿಯಿಂದ ಬಾಳೆ ನಾಶವಾಯಿತು’ ಎಂದು ವಿವರಿಸಿದರು ಸಿದ್ದು.

ಮುಂಗಾರು ಪೂರ್ವ ಮಳೆಗೆ ಚಾಮರಾಜನಗರ ಜಿಲ್ಲೆಯಲ್ಲಿ ಬಾಳೆ, ಹಾವೇರಿ ಜಿಲ್ಲೆಯಲ್ಲಿ ಪಪ್ಪಾಯ, ಕೊಪ್ಪಳ, ಬೀದರ್ ಜಿಲ್ಲೆಯಲ್ಲಿ ಮಾವಿನ ಬೆಳೆಗೆ ಹೆಚ್ಚು ಹಾನಿಯಾಗಿದೆ. ಕೆಲವು ಕಡೆ ಆಲಿಕಲ್ಲು ಮಳೆಯಾದ ಕಾರಣ, ಬಲಿತು ಕಟಾವಿಗೆ ಬರಬೇಕಾದ ಮಾವಿನ ಕಾಯಿಗಳು ಉದುರಿವೆ.

ಕಂದಾಯ, ಕೃಷಿ, ತೋಟಗಾರಿಕೆ ಇಲಾಖೆಗಳು ಜಂಟಿಯಾಗಿ ನಡೆಸುತ್ತಿರುವ ಸಮೀಕ್ಷೆ ಪ್ರಕಾರ ಕಳೆದ ಮಾರ್ಚ್‌ನಿಂದ ಈವರೆಗೆ ರಾಜ್ಯದ ವಿವಿಧೆಡೆ ಎರಡು ಸಾವಿರ ಹೆಕ್ಟೇರ್‌ಗೂ ಹೆಚ್ಚು ತೋಟಗಾರಿಕೆ ಬೆಳೆ ಹಾನಿಯಾಗಿದೆ. ₹44 ಕೋಟಿಗೂ ಅಧಿಕ ನಷ್ಟವಾಗಿದೆ. ರಾಜ್ಯದ ನಾಲ್ಕೈದು ಜಿಲ್ಲೆಗಳಲ್ಲಿ ಹಾನಿ ಪ್ರಮಾಣ ಹೆಚ್ಚಾಗಿದೆ. ಇದು ಮಾರ್ಚ್–ಏಪ್ರಿಲ್ ತಿಂಗಳಲ್ಲಿ ಆಗಿರುವ ನಷ್ಟ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ಒಟ್ಟು 598 ಹೆಕ್ಟೇರ್ ಪ್ರದೇಶದಲ್ಲಿ ಮಾವು, 487 ಹೆಕ್ಟೇರ್‌ನಲ್ಲಿ ಬಾಳೆ ಬೆಳೆಗೆ ಹಾನಿಯಾಗಿದೆ. ಸುಮಾರು 321 ಹೆಕ್ಟೇರ್‌ನಷ್ಟು ಪಪ್ಪಾಯ ಬೆಳೆ ಮಣ್ಣುಪಾಲಾಗಿದೆ. ವಿಜಯಪುರ ಜಿಲ್ಲೆಯಲ್ಲಿ 62 ಹೆಕ್ಟೇರ್‌ನಲ್ಲಿ ನಿಂಬೆ, 40 ಹೆಕ್ಟೇರ್‌ನಲ್ಲಿ ಈರುಳ್ಳಿ ಬೆಳೆಗೆ ಹಾನಿಯಾಗಿದೆ. ಕೆಲವು ಜಿಲ್ಲೆಗಳಲ್ಲಿ ಕ್ಯಾಬೇಜ್, ಟೊಮೆಟೊದಂತಹ ತರಕಾರಿಗಳು, ಕಲ್ಲಂಗಡಿ, ದ್ರಾಕ್ಷಿ, ಸೀಬೆಯಂತಹ ಹಣ್ಣಿನ ಬೆಳೆಗಳು ಆಲಿಕಲ್ಲು ಮಳೆಗೆ ಹಾನಿಗೀಡಾಗಿವೆ. ಬಹುತೇಕ ಎಲ್ಲ ಬೆಳೆಗಳು ಕೊಯ್ಲಿನ ಹಂತದಲ್ಲಿದ್ದವು. ಕೊಯ್ಲು ಮಾಡಿ ಮಾರುಕಟ್ಟೆ ತಲುಪಬೇಕಿದ್ದ ಫಸಲು ಮಣ್ಣುಪಾಲಾಗಿದೆ ಎಂದು ರೈತರು ಬೇಸರ ವ್ಯಕ್ತಪಡಿಸಿದರು.

ಬೀದರ್ ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಸುಮಾರು 300 ಹೆಕ್ಟೇರ್‌ನಷ್ಟು ಮಾವು ನಾಶವಾಗಿದೆ. ಮಳೆಯ ರಭಸಕ್ಕೆ ಬಲಿತ ಕಾಯಿಗಳೆಲ್ಲ ರಾಶಿ ರಾಶಿಯಾಗಿ ಉದುರಿ ಬಿದ್ದವು. ಏಪ್ರಿಲ್–ಮೇ ತಿಂಗಳಲ್ಲಿ ಸುರಿದ ಆಲಿಕಲ್ಲು ಮಳೆಯಿಂದ ಕೊಪ್ಪಳ ಜಿಲ್ಲೆಯ ಕನಕಗಿರಿ, ಗಂಗಾವತಿ ಸುತ್ತಮುತ್ತ ಮಾವಿನ ಫಸಲಿಗೆ ಹೆಚ್ಚು ಹಾನಿಯಾಗಿದೆ. ಏಪ್ರಿಲ್ ತಿಂಗಳೊಂದರಲ್ಲೇ 125 ಹೆಕ್ಟೇರ್‌ನಷ್ಟು ಮಾವಿನ ಬೆಳೆ ನಷ್ಟವಾಗಿದೆ. ಬೀದರ್ ಜಿಲ್ಲೆಯ ಬಸವಕಲ್ಯಾಣ ಭಾಗದಲ್ಲಿ ಮಾವಿನ ಮರಗಳಲ್ಲಿ ಹೆಚ್ಚು ಕಾಯಿಗಳು ಉದುರಿವೆ’ ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಶೀಲವಂತಪುರ ಸುತ್ತಮುತ್ತಲಿನ ಹಳ್ಳಿಗಳಲ್ಲಿ 50 ಎಕರೆಗೂ ಹೆಚ್ಚು ಬಾಳೆಗೆ ಹಾನಿಯಾಗಿದೆ. ಒಬ್ಬೊಬ್ಬ ರೈತರದ್ದು ಸಾವಿರಕ್ಕೂ ಹೆಚ್ಚು ಬಾಳೆ ಗಿಡಗಳು ನೆಲಕಚ್ಚಿವೆ ಎಂದು ಗುಂಡ್ಲುಪೇಟೆಯ ಕೃಷಿಕ ನಾಗಾರ್ಜುನ್ ಮಾಹಿತಿ ನೀಡಿದರು.

ಮುಖ್ಯಾಂಶಗಳು

- ಬಾಳೆ, ಮಾವಿನ ಬೆಳೆಗೆ ಹೆಚ್ಚು ಹಾನಿ
- ಮಾರುಕಟ್ಟೆಗೆ ಹೋಗುವ ಫಸಲು ಮಣ್ಣುಪಾಲು
- ಎರಡು ತಿಂಗಳಲ್ಲಿ ₹44 ಕೋಟಿ ನಷ್ಟ

‘ಬೆಳೆ ವಿಮೆ ಮಾಡಿಸಿದರೆ ಪರಿಹಾರ’

‘ಪ್ರಧಾನಮಂತ್ರಿ ಫಸಲ್ ವಿಮಾ ಯೋಜನೆ (ಪಿಎಂಎಫ್‌ಬಿವೈ) ಮತ್ತು ಹವಾಮಾನ ಆಧಾರಿತ ಬೆಳೆ ವಿಮೆ(ಡಬ್ಲ್ಯುಬಿಸಿಐಎಸ್) ಮಾಡಿಸಿ, ಪ್ರೀಮಿಯಂ ಭರ್ತಿ ಮಾಡಿದ್ದರೆ, ಮುಂಗಾರು – ಹಿಂಗಾರಿನಲ್ಲಿ ಬೆಳೆ ನಷ್ಟವಾದಾಗ, ಪರಿಹಾರ ಪಡೆಯಬಹುದು’ ಎಂದು ಕೊಪ್ಪಳ ಜಿಲ್ಲೆಯ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಕೃಷ್ಣ ಉಕ್ಕುಂದ ಹೇಳಿದರು.

‘ಪೂರ್ವ ಮುಂಗಾರು ಮತ್ತು ಮುಂಗಾರು ಹಂಗಾಮಿಗೆ ಮುನ್ನವೇ ಬೆಳೆ ವಿಮೆ ಮಾಡಿಸುವ ಕುರಿತು ಇಲಾಖೆಯಿಂದ ರೈತರಿಗೆ ಅರಿವು ಮೂಡಿಸಲಾಗುತ್ತಿದೆ. ಎಲ್ಲರೂ ಬೆಳೆ ವಿಮೆ ಮಾಡಿಸಬೇಕು’ ಎಂದು ಅವರು ಸಲಹೆ ನೀಡಿದರು.



ಗುಂಡ್ಲುಪೇಟೆ ತಾಲ್ಲೂಕಿನ ಸೋಮನಪುರದ ಸಿದ್ದು ಅವರ ಜಮೀನಿನಲ್ಲಿ ಹಾನಿಗೊಳಗಾಗಿರುವ ಬಾಳೆ ಬೆಳೆ

ಡಿಕೆಶಿ ದೆಹಲಿಗೆ: ವರಿಷ್ಠರ ಭೇಟಿ ಸಾಧ್ಯತೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭಾನುವಾರ ಸಂಜೆ ದೆಹಲಿಗೆ ಪ್ರಯಾಣ ಬೆಳೆಸಿದರು.



ಶಿವಕುಮಾರ್

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರಿಗಳನ್ನೂ ತಮ್ಮ ಜೊತೆ ಕರೆದೊಯ್ದಿರುವ ಶಿವಕುಮಾರ್, ‘ಮುನಿಸಿಪಾಲಿಟಿ ಆಡಳಿತ ಮತ್ತು ಘನ ತ್ಯಾಜ್ಯ ನಿರ್ವಹಣೆ’ ಸಂಬಂಧಿಸಿದಂತೆ ದೆಹಲಿ ಮುನ್ಸಿಪಲ್ ಕಾರ್ಪೊರೇಷನ್ ಜೊತೆ ಚರ್ಚೆ ನಡೆಸಲಿದ್ದಾರೆ.

ಆರ್‌ಸಿಬಿ ವಿಜಯೋತ್ಸವ ವೇಳೆ ಸಂಭವಿಸಿದ ಕಾಲ್ತುಳಿತ ಘಟನೆಯ ನಂತರ ಅವರು ದೆಹಲಿಗೆ ತೆರಳುತ್ತಿರುವುದರಿಂದ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸುವ ಸಾಧ್ಯತೆಯೂ ಇದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಸಿನಿಮಾ ಮಜ ನೀಡಬೇಕು

ವಿನಾಯಕ ಕೆ.ಎಸ್


ನವೀನ್ ಶಂಕರ್

ಶಿವರಾಜ್‌ಕುಮಾರ್ ನಟನೆಯ '131' ಚಿತ್ರದ ಪ್ರಮುಖ ಖಳನಾಯಕನಾಗಿ ನಟ ನವೀನ್ ಶಂಕರ್ ಬಣ್ಣ ಹಚ್ಚಿದ್ದಾರೆ. ಪ್ರತಿ ಚಿತ್ರದಲ್ಲಿಯೂ ಭಿನ್ನ ಪಾತ್ರಗಳನ್ನು ಆಯ್ದುಕೊಳ್ಳುವ ಅವರು ತಮ್ಮ ಸಿನಿಪಯಣದ ಕುರಿತು ಮಾತನಾಡಿದ್ದಾರೆ...

'131' ಕಾರ್ತಿಕ್ ಅದ್ವೈತ್ ನಿರ್ದೇಶನದ ಮಾಸ್, ಆ್ಯಕ್ಷನ್ ಚಿತ್ರ. ಇವರು ಮೊದಲು ತಮಿಳಿನಲ್ಲಿ ಒಂದು ಸಿನಿಮಾ ಮಾಡಿದ್ದರು. ಶಿವಣ್ಣ ಚಿಕಿತ್ಸೆಗಾಗಿ ಅಮೆರಿಕಕ್ಕೆ ಹೋಗುವ ಮೊದಲು ಒಂದು ಶೆಡ್ಯೂಲ್ ಚಿತ್ರೀಕರಣವಾಗಿತ್ತು. ಮುಂದಿನ ಶೆಡ್ಯೂಲ್ ಚಿತ್ರೀಕರಣವಾಗಬೇಕು. ನನ್ನದು ಖಳನಾಯಕನ ಪಾತ್ರ. ಪ್ರಬಲ ವ್ಯಕ್ತಿತ್ವ ಹೊಂದಿರುವ, ತುಂಬ ಇಂಟೆನ್ಸ್ ಆಗಿರುವ ಪಾತ್ರವಿದು. ಬಹಳ ಬುದ್ಧಿವಂತ, ಜತೆಗೆ ಕ್ರೂರ ವ್ಯಕ್ತಿ ಆಗಿರುತ್ತೇನೆ' ಎಂದು ತಮ್ಮ ಪಾತ್ರ ಪರಿಚಯದೊಂದಿಗೆ ಮಾತು ಪ್ರಾರಂಭಿಸಿದರು ನವೀನ್.

ನಾಯಕ ಹಾಗೂ ಖಳನಾಯಕನಾಗಿ ನವೀನ್ ಗಮನ ಸೆಳೆದಿದ್ದಾರೆ. ಇತ್ತೀಚೆಗೆ ತೆರೆಕಂಡ 'ನೋಡಿದವರು ಏನಂತಾರೆ' ಚಿತ್ರದಲ್ಲಿ ನಾಯಕನಾಗಿ ಅವರ ನಟನೆ ಅದ್ಭುತವಾಗಿತ್ತು. 'ಹೊಯ್ಸಳ' ಮತ್ತು 'ಸಲಾರ್' ಸಿನಿಮಾಗಳಲ್ಲಿ ಖಳನಾಯಕನಾಗಿ ಜನಮನ್ನಣೆ ಗಳಿಸಿದ್ದರು.

'ಕೆಆರ್‌ಜಿ ನಿರ್ಮಾಣ ಸಂಸ್ಥೆಯ 'ಕ್ರಿಕೆಟ್–11' ಚಿತ್ರ ಸ್ಥಗಿತಗೊಂಡಿದೆ. ಅವರದ್ದೇ ಆದ ಕಾರಣಗಳಿಂದ ಆ ಸಿನಿಮಾ ಸೆಟ್ಟೇರಿಲ್ಲ. 'ಗುಲ್ಟು' ಸಿನಿಮಾ ನಿರ್ದೇಶಕರು ಮತ್ತು ನಾನು ಒಂದು ಸ್ಕ್ರಿಪ್ಟ್ ಮಾಡುತ್ತಿದ್ದೇವೆ. ಅದು ಪೂರ್ಣಗೊಳ್ಳಲು ಎಷ್ಟು ದಿನ ಆಗುತ್ತದೆಯೆಂದು ಗೊತ್ತಿಲ್ಲ. ಅದನ್ನು ಬಿಟ್ಟು ಬೇರೆ ಯಾವ ಸಿನಿಮಾಗಳೂ ಇಲ್ಲ. ಇವತ್ತು ಚಿತ್ರರಂಗದಲ್ಲಿ ಪ್ರತಿಯೊಬ್ಬರೂ ಸಂಕಷ್ಟದಲ್ಲಿದ್ದಾರೆ. ಸಿನಿಮಾ ಮೊದಲಿನಷ್ಟು ಸುಲಭವಾಗಿಲ್ಲ. ನಾವು ಇಂದು ಜಾಗತಿಕವಾಗಿ ಹೋರಾಡಬೇಕಿದೆ. ಇತರೆ ಭಾಷೆಗಳ ವಿರುದ್ಧ ಹೋರಾಡಬೇಕು. ನನ್ನ ಹುಟ್ಟೂರು ಇಳಕಲ್‌ನಂಥ ಸಣ್ಣ ಊರಿನಲ್ಲಿ ಇವತ್ತು ಎಲ್ಲ ಭಾಷೆಗಳ ಸಿನಿಮಾ ಬಿಡುಗಡೆಯಾಗುತ್ತಿದೆ' ಎಂದು ಸದ್ಯದ ಪರಿಸ್ಥಿತಿ ತೆರೆದಿಟ್ಟರು.

'ಜನ ಒಟಿಟಿಗೆ ಶಿಫ್ಟ್ ಆಗಿದಾರೆ. ಅವರನ್ನು ಚಿತ್ರಮಂದಿರಕ್ಕೆ ಕರೆದುಕೊಂಡು ಬರಬೇಕೆಂದರೆ ನೋಡದಿರಲು ಸಾಧ್ಯವೇ ಇಲ್ಲ ಎಂಬಂಥ ಸಿನಿಮಾಗಳನ್ನು ಕೊಡಬೇಕು. ಆವರೇಜ್ ಸಿನಿಮಾಗಳನ್ನು ಕೊಟ್ಟರೆ ಒಟಿಟಿಲಿ ನೋಡಿಕೊಳ್ಳೋಣ ಎನ್ನುತ್ತಾರೆ. ಇಂದು ಎರಡೂ ರೀತಿಯಲ್ಲೂ ಉತ್ಕೃಷ್ಟವಾಗಿರುವ ಸಿನಿಮಾಗಳು ಬೇಕು. ಒಂದು ಕಂಟೆಂಟ್ ತುಂಬ ಚೆನ್ನಾಗಿರಬೇಕು, ಜತೆಗೆ ವಿಷ್ಯುವಲಿ ಜನರನ್ನು ಆಕರ್ಷಿಸಬೇಕು. ಇಲ್ಲವಾದಲ್ಲಿ ಅದ್ದೂರಿತನದೊಂದಿಗೆ ದೊಡ್ಡ ಸ್ಟಾರ್‌ನಟನಿರಬೇಕು. ಸಿನಿಮಾ ಎಂಬುದು ಜನಕ್ಕೆ ಮನರಂಜನೆ, ಸಿನಿಮಾ ಅಂದ್ರೆ ಬಿಸಿನೆಸ್. ಜನ ಟಿಕೆಟ್‌ಗೆ ರೊಕ್ಕ ಕೊಡಬೇಕು ಅಂದ್ರೆ, ನಾವು ಅವರಿಗೆ ಸಿನಿಮಾದಿಂದ ಮಜ ಕೊಡಬೇಕು. ಸಿನಿಮಾ ಮನರಂಜನೀಯವಾಗಿದ್ದರೆ ಪ್ರೇಕ್ಷಕರು ಹಣ ಕೊಟ್ಟು ಟಿಕೆಟ್ ಪಡೆಯುತ್ತಾರೆ' ಎಂಬ ಅಭಿಮತ ಅವರದ್ದು.

'ಗುಲ್ಟು' ಚಿತ್ರದಿಂದ ಚಿತ್ರರಂಗಕ್ಕೆ ಕಾಲಿಟ್ಟ ನವೀನ್, ನಟಿಸಿದ್ದು ನಾಲ್ಕಾರು ಚಿತ್ರಗಳಲ್ಲಿ ಮಾತ್ರ. ಆದರೆ ಪ್ರತಿ ಸಲ ಭಿನ್ನ ಪಾತ್ರಗಳಿಂದಲೇ ಛಾಪು ಮೂಡಿಸುತ್ತಿದ್ದಾರೆ. 'ಭಿನ್ನವಾದ ಕಥೆ ಮತ್ತು ಪಾತ್ರಗಳನ್ನೇ ಒಪ್ಪಿಕೊಳ್ಳುವೆ. ನಟನಾಗಿ ಪ್ರಯೋಗ ಮಾಡಬೇಕು. ನಮಗೆ ಸವಾಲು ಎನಿಸುವ ಪಾತ್ರಗಳನ್ನು ನಿಭಾಯಿಸಬೇಕು. ಆಗಲೇ ನಾವಿಲ್ಲಿ ನೆಲೆ ಕಂಡುಕೊಳ್ಳಲು ಸಾಧ್ಯ' ಎನ್ನುತ್ತಾರೆ ಅವರು.

ಸೆಟ್ಟೇರಿದ ಭೂ ಬಾಣ


ರೇಖಾ ರಮೇಶ್

ಹಳ್ಳಿಯ ದ್ವೇಷ, ಸಂಘರ್ಷಗಳ ಕಥೆ ಹೊಂದಿರುವ 'ಭೂ ಬಾಣ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಎಸ್.ಆರ್.ಪ್ರಮೋದ್ ಕಥೆ, ಸಾಹಿತ್ಯ ರಚಿಸಿ ನಿರ್ದೇಶಿಸುತ್ತಿದ್ದಾರೆ.

'ಸಮಾಜದಲ್ಲಿ ಎಷ್ಟೋ ಸಲ ಸಣ್ಣ ಸಣ್ಣ ವಿಷಯಗಳಿಗೆ ಮನಸ್ತಾಪವಾಗಿ, ಒಂದು ಹಂತದಲ್ಲಿ ಕೊಲೆಗೆ ತಲುಪುತ್ತದೆ. ಅದೇ ರೀತಿ ಹಳ್ಳಿಯಲ್ಲಿ ನಡೆಯುವ ಕಥೆಯಿದು. ಹಳೆಯ ವೈಷಮ್ಯದಿಂದ ಅಪರಾಧಗಳು ನಡೆಯುತ್ತವೆ. ಊರಿನ ಗೌಡರ ಮನೆಯಲ್ಲಿ ಕೊಲೆಗಳು ಆಗುತ್ತಿರುತ್ತವೆ. ಅವುಗಳನ್ನು ಮಾಡೋರು ಯಾರು? ಯಾವ ಕಾರಣಕ್ಕೆ? ಎಂಬಿತ್ಯಾದಿ ವಿಷಯಗಳೇ ಚಿತ್ರಕಥೆ. ಮೈಸೂರಿನಲ್ಲಿ ಸೆಟ್ ಹಾಕಿ ಒಂದೇ ಹಂತದಲ್ಲಿ ಚಿತ್ರೀಕರಣ ಮುಗಿಸುವ ಯೋಜನೆಯಿದೆ. ಎರಡು ಹಾಡುಗಳು ಹಾಗೂ ಎರಡು ಫೈಟ್‌ಗಳು ಚಿತ್ರದಲ್ಲಿವೆ' ಎಂದರು ನಿರ್ದೇಶಕರು.

ಎಸ್.ಕೆ.ಭಾಷಾ ಫಿಲ್ಮ್ಸ್ ಅಡಿಯಲ್ಲಿ ಎಸ್.ಕೆ.ಫಿರೋಜ್ ಭಾಷಾ ಬಂಡವಾಳ ಹೂಡಿದ್ದು, ಜತೆಗೆ ನಾಯಕನಾಗಿ ಅಭಿನಯಿಸುತ್ತಿದ್ದಾರೆ. ಹಾಸನ ಮೂಲದ ರೇಖಾ ರಮೇಶ್ ನಾಯಕಿ. ಕೆವಿನ್.ಎಂ ಸಂಗೀತ, ಮೈಸೂರು ಸೋಮು ಛಾಯಾಚಿತ್ರಗ್ರಹಣ, ಅಯುರ್ ಸಂಕಲನವಿದೆ.

'ಕರಿಕಾಡ'ನ ಟೈಟಲ್ ಟೀಸರ್ ಬಿಡುಗಡೆ



ಒಂದಷ್ಟು ಹುಡುಗರು ಐಟಿ ಜಗತ್ತಿನಲ್ಲಿ ಕೆಲಸ ಮಾಡಿಕೊಂಡೆ, ವಾರಾಂತ್ಯದಲ್ಲಿ ಚಿತ್ರೀಕರಣ ಮಾಡಿ ಮುಗಿಸಿರುವ 'ಕರಿಕಾಡ' ಚಿತ್ರದ ಟೈಟಲ್ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಈ ಹಿಂದೆ 'ವರ್ಣಮಯ' ಎಂಬ ಸಿನಿಮಾ ಮಾಡಿದ್ದ ಕಾಡ ನಟರಾಜ್ ಚಿತ್ರದ ನಾಯಕ. ಗಿಲ್ಲಿ ವೆಂಕಟೇಶ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಇದೊಂದು ಮ್ಯೂಸಿಕಲ್ ಜರ್ನಿ. ಸಾಹಸಮಯ ಅಂಶಗಳನ್ನು ಹೊಂದಿರುವ ಸಿನಿಮಾ. ಚಿತ್ರೀಕರಣ ಮುಗಿದು ಸೆನ್ಸಾರ್‌ಗೆ ಸಿದ್ಧವಿದೆ. ಸೆಪ್ಟೆಂಬರ್‌ನಲ್ಲಿ ಚಿತ್ರ ಬಿಡುಗಡೆ ಆಲೋಚನೆಯಿದೆ. ನಾನು ಮೂಲತಃ ಐಟಿ ಉದ್ಯೋಗಿ. ವಾರಾಂತ್ಯ ಹಾಗೂ ರಜೆ ದಿನಗಳಲ್ಲಿ ಚಿತ್ರೀಕರಣ ಮಾಡಿ ಈ ಚಿತ್ರವನ್ನು ಮುಗಿಸಿದ್ದೇವೆ. ನನ್ನ ಪತ್ನಿ ದೀಪ್ತಿ ದಾಮೋದರ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ' ಎಂದರು ನಟರಾಜ್.

'ಅನೇಕ ರಿಯಾಲಿಟಿ ಶೋಗಳಲ್ಲಿ ಕೆಲಸ ಮಾಡಿದ ಅನುಭವವಿದೆ. ಕೆಲ ಸಿನಿಮಾಗಳಿಗೆ ಸಹ ನಿರ್ದೇಶಕನಾಗಿದ್ದೆ. ಇದು ನನ್ನ ಮೊದಲ ಚಿತ್ರ. ಚಿಕ್ಕಮಗಳೂರು, ಕಳಸ, ಕುದುರೆ ಮುಖ, ಮಂಡ್ಯ ಮೊದಲಾದೆಡೆ ಚಿತ್ರೀಕರಣ ಮಾಡಿದ್ದೇವೆ' ಎಂದು ಮಾಹಿತಿ ನೀಡಿದರು ನಿರ್ದೇಶಕರು. ಅತಿಶಯ್ ಜೈನ್ ಹಾಗೂ ಶಶಾಂಕ್ ಶೇಷಗಿರಿ ಸಂಗೀತ, ಜೀವನ್ ಗೌಡ ಛಾಯಾಚಿತ್ರಗ್ರಹಣ, ದೀಪಕ್ ಸಿ.ಎಸ್ ಸಂಕಲನ ಚಿತ್ರಕ್ಕಿದೆ.

ಭ್ರಮೆ ಮತ್ತು ವಾಸ್ತವದ ಕಥೆ


ಚಿತ್ರತಂಡ

ಬಹುತೇಕ ಹೊಸಬರಿಂದಲೇ ಕೂಡಿರುವ 'ದಿ ಗ್ರ್ಯಾಂಡ್ ಇಲ್ಯೂಶನ್' ಚಿತ್ರದ ಟೀಸರ್ ಮತ್ತು ಹಾಡೊಂದು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ರಾಘವನ್ ಕಾರ್ತಿಕ್ ನಿರ್ದೇಶನದ ಚಿತ್ರವಿದು.

'ಒಂದು ಹೆಣ್ಣು ಮತ್ತು ಒಂಬತ್ತು ಪ್ರಮುಖ ಪಾತ್ರಗಳ ಸುತ್ತ ಈ ಸಿನಿಮಾದ ಕಥೆ ಸಾಗುತ್ತದೆ. ಜಗತ್ತಿನ ಅನೇಕ ವಿಷಯಗಳನ್ನು ಈ ಸಿನಿಮಾದಲ್ಲಿ ಹೇಳುವ ಪ್ರಯತ್ನ ಮಾಡಿದ್ದೇವೆ. ಭ್ರಮೆ ಮತ್ತು ವಾಸ್ತವಗಳ ಸಂಗಮ ಈ ಕಥೆ. ಕಲಾವಿದರು ಮತ್ತು ತಂತ್ರಜ್ಞರ ಆಯ್ಕೆ ಕೂಡ ನಡೆಯುತ್ತಿದೆ. ಚಿತ್ರೀಕರಣಕ್ಕೂ ಮೊದಲು ಒಂದು ಟೀಸರ್ ಹಾಗೂ ಹಾಡನ್ನು ಮಾಡಿದ್ದೇವೆ. ನಾನೇ ಸಂಗೀತ ನಿರ್ದೇಶನದ ಹೊಣೆಯನ್ನೂ ಹೊತ್ತಿದ್ದೇನೆ' ಎಂದು ಮಾಹಿತಿ ನೀಡಿದರು ನಿರ್ದೇಶಕರು.

'ಅನುರಾಗದಿ ಅರಳಿದೆ ಮನ...' ಎಂಬ ಹಾಡಿಗೆ ರಾಘವನ್ ಕಾರ್ತಿಕ್ ಅವರದ್ದೇ ಸಾಹಿತ್ಯ, ಸಂಗೀತ ಮತ್ತು ಪ್ರತಿಮಾ ಭಟ್ ಧ್ವನಿಯಿದೆ.

'ಇಂದಿನ ಕಾಲದ ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ಸಿನಿಮಾ ಮಾಡಿ. ಒಳ್ಳೆಯ ಕಥೆಯಿರುವ, ಸದಭಿರುಚಿಯ ಸಿನಿಮಾಗಳನ್ನು ಕನ್ನಡ ಪ್ರೇಕ್ಷಕರು ಕೈ ಹಿಡಿದು ಬೆಳೆಸುತ್ತಾರೆ' ಎಂದರು ಹಿರಿಯ ನಟ ಉಮೇಶ್.

ಮಣಿಪುರ: ಮತ್ತೊಮ್ಮೆ ಉದ್ವಿಗ್ನ ಸ್ಥಿತಿ

ಮೈತೇಯಿ ಬಂಡುಕೋರ ಸಂಘಟನೆ 'ಅರಂಬಾಯ್ ಟೆಂಗೋಲ್'ನ ನಾಯಕ ಬಂಧನ

ಪ್ರಜಾವಾಣಿ ವಾರ್ತೆ/ಪಿಟಿಐ

ಇಂಫಾಲ್/ನವದೆಹಲಿ: ಮಣಿಪುರದಲ್ಲಿ 2023ರಲ್ಲಿ ಆರಂಭವಾದ ಹಿಂಸಾಚಾರಕ್ಕೆ ಸಂಬಂಧಿಸಿ ಮೈತೇಯಿ ಬಂಡುಕೋರ ಸಂಘಟನೆ 'ಅರಂಬಾಯ್ ಟೆಂಗೋಲ್'ನ ನಾಯಕ ಕನನ್ ಸಿಂಗ್ ಸೇರಿದಂತೆ ಐವರನ್ನು ಬಂಧಿಸಲಾಗಿದೆ. ಈ ಸುದ್ದಿ ತಿಳಿಯುತ್ತಿದ್ದಂತೆಯೇ ಮಣಿಪುರ ಮತ್ತೊಮ್ಮೆ ಉದ್ವಿಗ್ನಗೊಂಡಿದೆ.

'ಅರಂಬಾಯ್ ಟೆಂಗೋಲ್' ಸಂಘಟನೆಯ ಸದಸ್ಯರ ವಿರುದ್ಧ ಪೊಲೀಸರು ಮತ್ತು ಸೇನೆಯ ಸಂಗ್ರಹಾರಗಳಿಂದ ಶಸ್ತ್ರಾಸ್ತ್ರ ಲೂಟಿ, ಪೊಲೀಸ್ ಅಧಿಕಾರಿಗಳ ಅಪಹರಣ, ಕುಕಿ ಬುಡಕಟ್ಟು ಸಮುದಾಯಗಳ ಮೇಲೆ ಹಿಂಸಾಚಾರ ಸೇರಿದಂತೆ ಹಲವು ಅಪರಾಧ ಪ್ರಕರಣಗಳಿವೆ.

ಇಂಫಾಲ್‌ನ ವಿಮಾನ ನಿಲ್ದಾಣದಿಂದ ಕನನ್ ಸಿಂಗ್ ಅವರನ್ನು ಸಿಬಿಐ ಭಾನುವಾರ ಬಂಧಿಸಿದೆ. ಕನನ್ ಅವರಿಗೆ ಸಹಕಾರ ನೀಡಿದ ಸಂಬಂಧ ಮಣಿಪುರ ಪೊಲೀಸರು ನಾಲ್ವರನ್ನು ಬಂಧಿಸಿದ್ದಾರೆ. ಆದರೆ, ಕನನ್ ಅವರನ್ನು ಯಾವ ಪ್ರಕರಣದಲ್ಲಿ ಬಂಧಿಸಲಾಗಿದೆ ಎಂಬ ಮಾಹಿತಿಯನ್ನು ಸಿಬಿಐ ನೀಡಿಲ್ಲ. ಬಂಧಿತ ಇತರ ನಾಲ್ವರು ಯಾರು ಎಂಬ ಬಗ್ಗೆಯೂ ಪೊಲೀಸರು ಮಾಹಿತಿ ನೀಡಿಲ್ಲ.

ಕನನ್ ಸಿಂಗ್ ಅವರನ್ನು ತಕ್ಷಣವೇ ಅಸ್ಸಾಂನ ಗುವಹಾಟಿಗೆ ಕರೆದೊಯ್ಯಲಾಗಿದೆ. ಅಲ್ಲಿ ಅವರನ್ನು ನ್ಯಾಯಾಲಯದ ಎದುರು ಹಾಜರುಪಡಿಸಲಾಗುವುದು ಎಂದು ಸಿಬಿಐ ತಿಳಿಸಿದೆ. ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಯನ್ನು ಗುವಾಹಟಿಯಲ್ಲಿ ನಡೆಸಲಾಗುತ್ತಿದೆ. ಹಿಂಸಾಚಾರದ ಕುರಿತು ತನಿಖೆ ನಡೆಸುವಂತೆ ಸಿಬಿಐಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು.

ಶನಿವಾರ ರಾತ್ರಿಯಿಂದಲೇ ಹಿಂಸಾಚಾರ



ಕನನ್ ಸಿಂಗ್ ಅವರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ ಎಂಬ ವದಂತಿ ಮೈತೇಯಿ ಸಮುದಾಯದ ಪ್ರಾಬಲ್ಯ ಇರುವ ರಾಜ್ಯದ ಕಣಿವೆ ಪ್ರದೇಶಗಳಲ್ಲಿ ಶನಿವಾರ ರಾತ್ರಿಯಿಂದಲೇ ಹಬ್ಬಿಕೊಂಡಿತು. ಭಾನುವಾರವೂ ಉದ್ವಿಗ್ನ ಸ್ಥಿತಿ ಮುಂದುವರಿದಿದೆ.

ಈ ಎಲ್ಲ ಕಡೆಗಳಲ್ಲಿಯೂ ಹಿಂಸಾಚಾರ ನಡೆದಿದೆ. ಮೈತೇಯಿ ಸಮುದಾಯದ ಜನರು, ಬಂಡುಕೋರ ಸಂಘಟನೆಯ ಸದಸ್ಯರು ಭದ್ರತಾ ಪಡೆಗಳ ಜೊತೆಯಲ್ಲಿ ಸಂಘರ್ಷ ನಡೆಸಿದ ವರದಿಗಳಾಗಿವೆ. ಬಸ್‌ವೊಂದಕ್ಕೆ ಬೆಂಕಿ ಹಚ್ಚಲಾಗಿದೆ. ಉದ್ವಿಗ್ನತೆ ಅಧಿಕಗೊಂಡಿರುವ ಜಿಲ್ಲೆಗಳಲ್ಲಿ ಭದ್ರತಾ ಪಡೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜಿಸಲಾಗಿದೆ.

ರಾಜಭವನಕ್ಕೆ 200 ಮೀಟರ್ ದೂರದಲ್ಲಿ ಜಮಾಯಿಸಿದ್ದ ಜನರನ್ನು ಚದುರಿಸಲು ಭದ್ರತಾ ಪಡೆಗಳು ಹಲವು ಸುತ್ತು ಅಶ್ರುವಾಯು ಸಿಡಿಸಿದರು. ರಾಜಭವನದ ಸುತ್ತ ಕೇಂದ್ರ ಮೀಸಲು ಪಡೆ ನಿಯೋಜನೆ ಸೇರಿದಂತೆ ಭದ್ರತೆಯನ್ನು ಹೆಚ್ಚಿಸಲಾಗಿದೆ. ರಸ್ತೆಗಳಲ್ಲಿ ಟೈರ್‌ಗಳನ್ನು ಸುಡಲಾಗಿದೆ. ಭದ್ರತಾ ಪಡೆಗಳು ಸಂಚರಿಸದಂತೆ ರಸ್ತೆಯ ಮೇಲೆ ಮಣ್ಣಿನ ರಾಶಿಗಳನ್ನು ಸುರಿಯಲಾಗಿದೆ.

ಯಾವ ಯಾವ ಜಿಲ್ಲೆ

- ಪಶ್ಚಿಮ ಇಂಫಾಲ್
- ಪೂರ್ವ ಇಂಫಾಲ್
- ತೌಬಾಲ್ವ್
- ವಿಷ್ಣುಪುರ
- ಕಾಕ್‌ಚಿಂಗ್

ಶಾಂತಿಯನ್ನು ಭಂಗಗೊಳಿಸುವ, ಜನರ ನೆಮ್ಮದಿಯನ್ನು ಹಾಳುಗೆಡಹುವ, ಹಿಂಸಾಚಾರ ನಡೆದಿರುವ ಘಟನೆಗಳು ಪಶ್ಚಿಮ ಇಂಫಾಲ್ ಜಿಲ್ಲೆಯಲ್ಲಿ ನಡೆದಿದೆ. ಜನರ ಜೀವಗಳಿಗೆ, ಆಸ್ತಿಗಳಿಗೆ ಅಪಾಯ ಎದುರಾಗಿದೆ. ಈ ಜಿಲ್ಲೆಯಲ್ಲಿ ಸಮಾಜಘಾತುಕ ಚಟುವಟಿಕೆಗಳು ನಡೆಯುತ್ತಿವೆ
–ಜಿಲ್ಲಾ ಮ್ಯಾಜಿಸ್ಟ್ರೇಟ್ ಹೇಳಿಕೆ

ನಿಷೇಧಾಜ್ಞೆ ಜಾರಿ, ಇಂಟರ್‌ನೆಟ್ ಸೇವೆ ಸ್ಥಗಿತ

- ಪಶ್ಚಿಮ ಇಂಫಾಲ್‌ನಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಕೋಲು, ಕಲ್ಲು, ಪಂಜು ಸೇರಿದಂತೆ ಚೂಪಾದ ವಸ್ತುಗಳನ್ನು ಕೈಯಲ್ಲಿ ಹಿಡಿದು ಓಡಾಡಬಾರದು ಎಂದು ಆದೇಶಿಸಲಾಗಿದೆ. ಜೂನ್ 10ರಿಂದ ಅನ್ವಯವಾಗುವಂತೆ ಪೂರ್ವ ಇಂಫಾಲ್‌ನ ಜನರು ಮನೆಯಿಂದ ಹೊರಬರದಂತೆ ಆದೇಶ. ವಿಷ್ಣುಪುರ ಜಿಲ್ಲೆಯಲ್ಲಿ ಕರ್ಫ್ಯೂ ಜಾರಿ
- ಶನಿವಾರ ರಾತ್ರಿ 11.45ರಿಂದ ಮುಂದಿನ ಐದು ದಿನಗಳವರೆಗೆ ಐದು ಜಿಲ್ಲೆಗಳಲ್ಲಿ ಇಂಟರ್‌ನೆಟ್ ಸೇವೆ ಸ್ಥಗಿತ

ದಿನದ ಬೆಳವಣಿಗೆ

- ಬಿಜೆಪಿ ಮತ್ತು ಕಾಂಗ್ರೆಸ್ ನಾಯಕರ ನಿಯೋಗವು ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರನ್ನು ಭೇಟಿಯಾಯಿತು. ರಾಜ್ಯದಲ್ಲಿ ನಿರ್ಮಾಣವಾಗಿರುವ ಉದ್ವಿಗ್ನ ಸ್ಥಿತಿಯನ್ನು ತಿಳಿಗೊಳಿಸಲು ರಾಜ್ಯಪಾಲರು ಮಧ್ಯೆ ಪ್ರವೇಶಿಸಬೇಕು ಎಂದು ಶಾಸಕರು ಮನವಿ ಮಾಡಿದ್ದಾರೆ. ಭದ್ರತೆ ಕುರಿತು ರಾಜ್ಯಪಾಲರು ಭಾನುವಾರ ಪರಿಶೀಲನೆ ನಡೆಸಿದರು
- ಕಳೆದ ವರ್ಷ ಭದ್ರತಾ ಪಡೆಗಳ ಮೇಲೆ ದಾಳಿ ನಡೆಸಿದ ಆರೋಪದಲ್ಲಿ ಕುಕಿ ಬುಡಕಟ್ಟು ಸಮುದಾಯದ ಮೂವರನ್ನು ಬಂಧಿಸಲಾಗಿದೆ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಭಾನುವಾರ ಹೇಳಿದೆ.

'ರಾಷ್ಟ್ರಪತಿ ಆಳ್ವಿಕೆ ಫಲಿಸಿಲ್ಲ'

ಮಣಿಪುರದ ಜನರ ನೋವು, ಸಂಕಟ, ಅಸಹಾಯಕ ಸ್ಥಿತಿಯು ಮುಗಿಯುವಂತೆ ಕಾಣುತ್ತಿಲ್ಲ. 2023ರ ಜೂನ್ 4ರಂದು ಕೇಂದ್ರ ಸರ್ಕಾರವು ವಿಚಾರಣಾ ಆಯೋಗವೊಂದನ್ನು ರಚಿಸಿತು. ಆಯೋಗವು ತನ್ನ ವರದಿಯನ್ನು ನೀಡಲು ನೀಡಿದ್ದ ಗಡುವನ್ನು ಕೇಂದ್ರ ಸರ್ಕಾರವು ಪದೇ ಪದೇ ಮುಂದೂಡಿತು. 2025ರ ನವೆಂಬರ್ 20ಕ್ಕೆ ಮುಂದಿನ ಗಡುವನ್ನು ನಿಗದಿ ಮಾಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಈವರೆಗೆ ರಾಜ್ಯಕ್ಕೆ ಭೇಟಿ ನೀಡಿಲ್ಲ. ರಾಷ್ಟ್ರಪತಿ ಆಳ್ವಿಕೆ ಹೇರಿಕೆಯಿಂದ ಕೂಡ ಯಾವುದೇ ಪ್ರಯೋಜನವಾಗಿಲ್ಲ. ಮಣಿಪುರದ ಜನರ ಕುರಿತ ಪ್ರಧಾನಿ ಅವರ ಸಂವೇದನಾರಹಿತ ನಡವಳಿಕೆಯು ಆಘಾತಕಾರಿ ಮತ್ತು ಇದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ

ಜೈರಾಮ್ ರಮೇಶ್,
ಎಐಸಿಸಿ ಪ್ರಧಾನ ಕಾರ್ಯದರ್ಶಿ

ರಾಹುಲ್ ಲೇಖನಕ್ಕೆ ಆಯೋಗ ಪ್ರತಿಕ್ರಿಯೆ

'ನೇರವಾಗಿ ಪತ್ರ ಬರೆಯಿರಿ'



ನವದೆಹಲಿ (ಪಿಟಿಐ): 'ಮಹಾರಾಷ್ಟ್ರ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ಬೇಕಿದ್ದಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ರಾಹುಲ್ ನೇರವಾಗಿ ಚುನಾವಣಾ ಆಯೋಗಕ್ಕೆ ಪತ್ರ ಬರೆಯಬೇಕು' ಎಂದು ಚುನಾವಣಾ ಆಯೋಗದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮಹಾರಾಷ್ಟ್ರದಲ್ಲಿ ನಡೆದ 2024ರ ವಿಧಾನಸಭಾ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ವಿವಿಧ ಪತ್ರಿಕೆಗಳಿಗೆ ರಾಹುಲ್ ಗಾಂಧಿ ಅವರು ಸುದೀರ್ಘ ಲೇಖನ ಬರೆದಿದ್ದರು.

ಆಯೋಗದ ಅಧಿಕಾರಿಗಳು ರಾಹುಲ್ ಆರೋಪವನ್ನು ತಳ್ಳಿಹಾಕಿದ್ದರು. ಶನಿವಾರ ಈ ಬಗ್ಗೆ ಪ್ರತಿಕ್ರಿಯಿಸಿದ್ದ ರಾಹುಲ್, 'ಸತ್ಯ ಹೇಳುವುದರಿಂದ ಆಯೋಗದ ವಿಶ್ವಾಸಾರ್ಹತೆ ಉಳಿಯುತ್ತದೆಯೇ ಹೊರತು, ನನ್ನ ಲೇಖನಕ್ಕೆ ಪ್ರತಿಕ್ರಿಯೆ ನೀಡದೆ ನುಣುಚಿಕೊಳ್ಳುವುದರಿಂದ ಅಲ್ಲ' ಎಂದಿದ್ದರು. ರಾಹುಲ್ ಹೇಳಿಕೆಯ ಬೆನ್ನಲ್ಲೇ, ಆಯೋಗದ ಅಧಿಕಾರಿಯೊಬ್ಬರು ಭಾನುವಾರ ಪ್ರತಿಕ್ರಿಯಿಸಿದ್ದು, 'ರಾಹುಲ್ ನೇರವಾಗಿ ಪತ್ರ ಬರೆದಲ್ಲಿ ಮಾತ್ರ ಆಯೋಗವು ಪ್ರತಿಕ್ರಿಯೆ ನೀಡಲಿದೆ' ಎಂದಿದ್ದಾರೆ.

'ಚುನಾವಣಾ ಆಯೋಗವು ಆರು ರಾಷ್ಟ್ರೀಯ ಪಕ್ಷಗಳನ್ನ ಪ್ರತ್ಯೇಕವಾಗಿ ಮಾತುಕತೆಗೆ ಆಹ್ವಾನಿಸಿತ್ತು. ಐದು ಪಕ್ಷಗಳ ಸದಸ್ಯರು ಆಯೋಗದ ಅಧಿಕಾರಿಗಳನ್ನು ಭೇಟಿಯಾಗಿದ್ದಾರೆ. ಆದರೆ, ಕಾಂಗ್ರೆಸ್ ಮೇ 15ರ ಸಭೆಗೆ ಹಾಜರಾಗಲಿಲ್ಲ' ಎಂದರು.

ಮಹಾರಾಷ್ಟ್ರ ಚುನಾವಣೆಯ ಮತದಾನದ ದಿನದಂದು ಸಂಜೆ ಮತಗಟ್ಟೆಗಳ ಬಳಿ ನಡೆದ ಘಟನೆಗಳ ಸಿಸಿಟಿವಿ ಕ್ಯಾಮೆರಾ ದೃಶ್ಯ ಒದಗಿಸಬೇಕು ಎಂಬ ರಾಹುಲ್ ಬೇಡಿಕೆಗೆ ಪ್ರತಿಕ್ರಿಯಿಸಿರುವ ಅಧಿಕಾರಿ, 'ಚುನಾವಣಾ ತಕರಾರು ಅರ್ಜಿಸಲ್ಲಿಕೆಯಾದ ಸಂದರ್ಭದಲ್ಲಿ ಮಾತ್ರ ಆಯೋಗವು ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಹೈಕೋರ್ಟ್‌ಗೆ ಸಲ್ಲಿಸುತ್ತದೆ. ಕೋರ್ಟ್ ಈ ದೃಶ್ಯಗಳನ್ನು ಪರಿಶೀಲಿಸುತ್ತದೆ. ಮತದಾರರ ಗೋಪ್ಯತೆ ಕಾಪಾಡಲು ಇದು ಮಹತ್ವದ್ದು' ಎಂದರು.


'ರಾಹುಲ್ ಗಾಂಧಿ ಯಾಕೆ ಮತದಾರರ ಗೋಪ್ಯತೆಗೆ ದ್ರೋಹ ಮಾಡಲು ಬಯಸುತ್ತಾರೆ' ಎಂದು ಪ್ರಶ್ನಿಸಿರುವ ಅಧಿಕಾರಿ, ಮತದಾರರ ಪಟ್ಟಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ವಿಚಾರವಾಗಿ, 'ರಾಹುಲ್ ಗಾಂಧಿ ಅವರು ತಮ್ಮದೇ ಪಕ್ಷ ನೇಮಿಸಿರುವ ಮತಗಟ್ಟೆ ಮಟ್ಟದ ಏಜೆಂಟರನ್ನು, ಚುನಾವಣಾ ಏಜೆಂಟರನ್ನು ಪ್ರಶ್ನಿಸಬೇಕು' ಎಂದಿದ್ದಾರೆ.

'2020ರಲ್ಲಿ ನ್ಯಾಯಯುತ ಚುನಾವಣೆ ನಡೆದಿಲ್ಲ'

ಬಿಹಾರದಲ್ಲಿ 2020ರಲ್ಲಿ ವಿಧಾನಸಭೆ ಚುನಾವಣೆಯು ನ್ಯಾಯಯುತವಾಗಿ ನಡೆದಿರಲಿಲ್ಲ. ಆಗ ರಾಜ್ಯದಲ್ಲಿ ನಾವೇ ಸರ್ಕಾರ ರಚಿಸಬೇಕಿತ್ತು. ಮತ ಎಣಿಕೆ ದಿನ ಸಂಜೆ ಹೊತ್ತಿಗೆ ಎಣಿಕೆಯನ್ನು ಸ್ಥಗಿತಗೊಳಿಸಲಾಗಿತ್ತು. ಇದಕ್ಕೆ ಸಮರ್ಥನೆ ನೀಡುವುದಕ್ಕೆ ಚುನಾವಣಾ ಆಯೋಗವು ಮೂರು ಮಾಧ್ಯಮ ಗೋಷ್ಠಿಗಳನ್ನು ನಡೆಸಿತು. ಆದರೆ, ರಾತ್ರಿ ಹೊತ್ತಿಗೆ ಮತ್ತೊಮ್ಮೆ ಯಾಕಾಗಿ ಮತ ಎಣಿಕೆ ಪ್ರಕ್ರಿಯೆ ಆರಂಭಿಸಲಾಯಿತು? ಮಹಾ ಮೈತ್ರಿಕೂಟದ ಅಭ್ಯರ್ಥಿಗಳಲ್ಲಿ ಯಾರೆಲ್ಲಾ ಗೆಲುವು ಸಾಧಿಸಿದ್ದಾರೆ ಎಂದು ಆಯೋಗವೇ ಹೇಳಿತ್ತೊ, ಆ ಎಲ್ಲ ಅಭ್ಯರ್ಥಿಗಳು ಸೋತಿದ್ದಾರೆ ಎಂದು ಆಯೋಗವೇ ನಂತರ ಘೋಷಿಸಿತು. ಜೊತೆಗೆ, ಚುನಾವಣಾ ಆಯೋಗವು ದಿನಾಂಕ ಘೋಷಣೆ ಮಾಡುವ ಮೊದಲೇ ಬಿಜೆಪಿ ಐಟಿ ಸೆಲ್‌ಗೆ ಚುನಾವಣಾ ದಿನಾಂಕ ತಿಳಿದಿರುತ್ತದೆ

ತೇಜಸ್ವಿ ಯಾದವ್, ಬಿಹಾರ ವಿಧಾನಸಭೆ ವಿರೋಧ ಪಕ್ಷದ ನಾಯಕ (ರಾಹುಲ್ ತಮ್ಮ ಲೇಖನದಲ್ಲಿ ವ್ಯಕ್ತಪಡಿಸಿದ್ದ ಹಲವು ಸಂಶಯಗಳ ಬಗ್ಗೆ ಇವರೂ ಸಹಮತ ವ್ಯಕ್ತಪಡಿಸಿದ್ದಾರೆ)

'ತಮಿಳುನಾಡು, ಬಂಗಾಳ ಗೆಲ್ಲುತ್ತೇವೆ'


ಅಮಿತ್ ಶಾ

ಮದುರೈ (ಪಿಟಿಐ): ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಎನ್‌ಡಿಎ ಸರ್ಕಾರ ರಚನೆ ಮಾಡಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾನುವಾರ ಇಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.

'2026ರಲ್ಲಿ ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಉತ್ತಮ ಆಡಳಿತ ಕೊಡುವಲ್ಲಿ ವಿಫಲವಾಗಿರುವ ತಮಿಳುನಾಡಿನ ಡಿಎಂಕೆ ಸರ್ಕಾರವನ್ನು ಇಲ್ಲಿನ ಜನ ಸೋಲಿಸಲಿದ್ದಾರೆ. ಬಿಜೆಪಿ–ಎಐಎಡಿಎಂಕೆ ಸರ್ಕಾರ ರಚನೆ ಆಗಲಿದೆ' ಎಂದರು. ತಮಿಳುನಾಡು ಬಿಜೆಪಿ ಪ್ರಮುಖರ ಸಮಿತಿಯ ಸಭೆ ನಂತರ ರಾಜ್ಯ, ಜಿಲ್ಲೆ ಮತ್ತು ಮಂಡಲ ಮಟ್ಟದ ಪದಾಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, 'ಮಧುರೈ ಪರಿವರ್ತನೆಯ ನಗರ. ಈ ಸಭೆಯೇ ಬದಲಾವಣೆಗೆ ಮುನ್ನುಡಿ' ಎಂದರು.

ಡಿಎಂಕೆ ಭ್ರಷ್ಟಾಚಾರಿ: ಅಮಿತ್ ಶಾ

ಬಿಜೆಪಿ ಪ್ರಮುಖರ ಸಮಿತಿ ಸಭೆಯಲ್ಲಿ ಡಿಎಂಕೆ ಆಡಳಿತದ ವಿರುದ್ಧ ವಾಗ್ದಾಳಿ ನಡೆಸಿದ ಅಮಿತ್ ಶಾ, 'ಡಿಎಂಕೆ ಸರ್ಕಾರದ ಭಾರಿ ಭ್ರಷ್ಟಾಚಾರದಿಂದ ತಮಿಳುನಾಡಿನ ಜನತೆ ಬೇಸತ್ತು ಹೋಗಿದ್ದಾರೆ' ಎಂದರು.

'ಬಿಜೆಪಿ ಕಾರ್ಯಕರ್ತರು ಡಿಎಂಕೆ ವೈಫಲ್ಯ ಮತ್ತು ತಮಿಳುನಾಡಿಗೆ ಪ್ರಧಾನಿ ನರೇಂದ್ರ ಮೋದಿ ಅವರ ಕೊಡುಗೆಗಳ ಬಗ್ಗೆ ಪ್ರತಿ ಮನೆಗೂ ತಿಳಿಸಲಿದ್ದಾರೆ' ಎಂದು 'ಎಕ್ಸ್' ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಇದೇ ವೇಳೆ ಅಮಿತ್ ಶಾ ಪ್ರಸಿದ್ಧ ಮೀನಾಕ್ಷಿ ದೇಗುಲಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಬಿಜೆಪಿ ತಮಿಳುನಾಡು ರಾಜ್ಯ ಘಟಕದ ಅಧ್ಯಕ್ಷ ನಾಯನರ್ ನಾಗೇಂದ್ರನ್, ಕೇಂದ್ರ ಸಚಿವ ಎಲ್.ಮುರುಗನ್ ಜೊತೆಗಿದ್ದರು.

ತೆಲಂಗಾಣದಲ್ಲಿ ಸಚಿವ ಸಂಪುಟ ವಿಸ್ತರಣೆ

ಹೈದರಾಬಾದ್ (ಪಿಟಿಐ): ತೆಲಂಗಾಣದ ಆಡಳಿತಾರೂಢ ಕಾಂಗ್ರೆಸ್‌ನ ಮೂವರು ಶಾಸಕರು ಸಚಿವರಾಗಿ ಭಾನುವಾರ ಪ್ರಮಾಣವಚನ ಸ್ವೀಕರಿಸಿದರು.

ರಾಜ್ಯಪಾಲ ವಿಷ್ಣುದೇವ್ ವರ್ಮ ಅವರು ಜಿ. ವಿವೇಕ್ ವೆಂಕಟಸ್ವಾಮಿ, ಅಡ್ಲೂರಿ ಲಕ್ಷ್ಮಣ ಕುಮಾರ್ ಹಾಗೂ ವಾಕಿಟಿ ಶ್ರೀಹರಿ ಅವರಿಗೆ ರಾಜಭವನದಲ್ಲಿ ಪ್ರತಿಜ್ಞಾವಿಧಿ ಬೋಧಿಸಿದರು.

ರೇವಂತ್ ರೆಡ್ಡಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ತಮ್ಮ ಸಂಪುಟವನ್ನು ವಿಸ್ತರಿಸಿದ್ದಾರೆ. ಮೂವರ ಸೇರ್ಪಡೆಯಿಂದ ಸಂಪುಟದ ಸದಸ್ಯರ ಸಂಖ್ಯೆ 15ಕ್ಕೆ ಏರಿದೆ. ಇನ್ನೂ ಮೂರು ಸ್ಥಾನಗಳು ಖಾಲಿ ಉಳಿದಿವೆ. ವಿಧಾನಸಭೆಯ ಉಪ ಸಭಾಧ್ಯಕ್ಷರಾಗಿ ರಾಮಚಂದರ್ ನಾಯಕ್ ಆಯ್ಕೆಯಾಗಿದ್ದಾರೆ. ಟಿಪಿಸಿಸಿ ಅಧ್ಯಕ್ಷ ಮಹೇಶ್ ಗೌಡ್ ಮತ್ತು ಹೈಕಮಾಂಡ್ ಜೊತೆ ಚರ್ಚಿಸಿದ ಬಳಿಕ ರೆಡ್ಡಿ ತಮ್ಮ ಸಂಪುಟ ವಿಸ್ತರಿಸಿದ್ದಾರೆ.

ವಿವೇಕ್, ಲಕ್ಷ್ಮಣ್ ಪರಿಶಿಷ್ಟ ಜಾತಿಯ ಮಾಲ ಹಾಗೂ ಮಾದಿಗ ಸಮುದಾಯಕ್ಕೆ ಸೇರಿದವರು. ಶ್ರೀಹರಿ ಹಿಂದುಳಿದ ವರ್ಗಗಳ ನಾಯಕ. ರಾಮಚಂದರ್ ಪರಿಶಿಷ್ಟ ಪಂಗಡಕ್ಕೆ ಸೇರಿದವರು.

ಸಂಕ್ಷಿಪ್ತ ಸುದ್ದಿ

ಸಂದೇಶ್‌ಖಾಲಿ: ಮಹಿಳೆ ಹೇಳಿಕೆ ದಾಖಲಿಸಿದ ಸಿಬಿಐ

ಕೋಲ್ಕತ್ತ (ಪಿಟಿಐ): ಟಿಎಂಸಿ ಪಕ್ಷದ ಮಾಜಿ ನಾಯಕ ಶೇಖ್ ಶಹಜಹಾನ್ ಅವರು ತನ್ನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು ದೂರು ನೀಡಿದ್ದಕ್ಕೆ ಸಂಬಂಧಿಸಿ ಸಿಬಿಐ ತಂಡವು ಭಾನುವಾರ ಸಂದೇಶ್‌ಖಾಲಿಗೆ ಭೇಟಿ ನೀಡಿ ದೂರುದಾರ ಮಹಿಳೆಯ ಹೇಳಿಕೆಯನ್ನು ದಾಖಲಿಸಿಕೊಂಡಿತು.

'ಬಹಳ ಹಿಂದೆಯೇ ನಾನು ದೂರು ನೀಡಿದ್ದೆ. ತನಿಖಾ ಸಂಸ್ಥೆಗೆ ನಾನು ಖಾಸಗಿಯಾಗಿ ಹೇಳಿಕೆ ನೀಡಿದ್ದೇನೆ. ಶಹಜಹಾನ್ ಅವರಿಗೆ ಮರಣದಂಡನೆ ಶಿಕ್ಷೆಯಾಗಬೇಕು. ಆತ ಜೈಲಿನಲ್ಲಿ ಇರುವ ಕಾರಣ ಸಂದೇಶ್‌ಖಾಲಿಯ ಮಹಿಳೆಯರು ಸುರಕ್ಷಿತವಾಗಿ ಇದ್ದಾರೆ. ಆತ ಹೊರಬಂದ ಕೂಡಲೇ ನಮ್ಮನ್ನು ಹಿಂಸಿಸಲು ಆರಂಭಿಸುತ್ತಾನೆ ಎಂದು ಚೆನ್ನಾಗಿ ತಿಳಿದಿದೆ' ಎಂದು ಮಹಿಳೆ ಪ್ರತಿಕ್ರಿಯಿಸಿದರು.

ಸೂಟ್‌ಕೇಸ್‌ನಲ್ಲಿ ಬಾಲಕಿಯ ಶವ ಪತ್ತೆ

ನವದೆಹಲಿ (ಪಿಟಿಐ): 9 ವರ್ಷದ ಬಾಲಕಿಯ ಮೃತದೇಹವು, ನೆರೆಮನೆಯಲ್ಲಿ ಸೂಟ್‌ಕೇಸ್‌ನಲ್ಲಿ ಪತ್ತೆಯಾಗಿರುವ ಘಟನೆ ದೆಹಲಿಯ ದಯಾಳಪುರದಲ್ಲಿ ನಡೆದಿದೆ. ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ಹತ್ಯೆಮಾಡಿ ಆಕೆಯ ದೇಹವನ್ನು ಸೂಟ್‌ಕೇಸ್‌ನಲ್ಲಿ ತುಂಬಿಡಲಾಗಿದೆ ಎಂದು ಆರೋಪಿಸಿ ಕುಟುಂಬ ಸದಸ್ಯರು ಹಾಗೂ ಸ್ಥಳೀಯರು ಪ್ರತಿಭಟನೆ ನಡೆಸಿದರು.


ಕೃತ್ಯ ಎಸಗಿದ ಆರೋಪಿಗಳು ಪರಾರಿಯಾಗಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಎಲ್ಲ ಆಯಾಮಗಳಿಂದಲೂ ತನಿಖೆ ನಡೆಸಲಾಗುತ್ತಿದೆ. ಆರೋಪಿಗಳ ಪತ್ತೆಗೆ ತಂಡಗಳನ್ನು ರಚಿಸಲಾಗಿದೆ. ಮರಣೋತ್ತರ ಪರೀಕ್ಷೆಯಲ್ಲಿ ಸಾವಿನ ಕಾರಣ ತಿಳಿಯಲಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ತನ್ನ ಸಂಬಂಧಿಕರ ಮನೆಗೆ ಐಸ್ ನೀಡಲು ಬಾಲಕಿ ಸಂಜೆ 7 ಗಂಟೆಗೆ ತೆರಳಿದ್ದಳು. ಆಕೆ ಹಿಂದಿರುಗಿ ಬಾರದ ಕಾರಣ ಕುಟುಂಬ ಸದಸ್ಯರು ಹುಡುಕಾಟ ಆರಂಭಿಸಿದ್ದಾರೆ. ಈ ವೇಳೆ ನೆರೆ ಮನೆಯಲ್ಲಿನ ಸೂಟ್‌ಕೇಸ್‌ನಲ್ಲಿ ಆಕೆಯ ಮೃತದೇಹ ಪತ್ತೆಯಾಯಿತು ಎಂದು ಅವರು ತಿಳಿಸಿದ್ದಾರೆ.

ರೈಲು ತಡೆದ ಗುಜ್ಜರ್ ಪ್ರತಿಭಟನಕಾರರು

ಜೈಪುರ (ಪಿಟಿಐ): ಮೀಸಲಾತಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಭಾನುವಾರ ರಾಜಸ್ಥಾನದಲ್ಲಿ ನಡೆದ ಮಹಾ ಪಂಚಾಯತ್‌ನಲ್ಲಿ ಭಾಗಿಯಾಗಿದ್ದ ಗುಜ್ಜರ್ ಸಮುದಾಯದ ಕೆಲವರು ಭರತ್‌ಪುರ ಜಿಲ್ಲೆಯಲ್ಲಿ ರೈಲ್ವೆ ಹಳಿ ಮೇಲೆ ಪ್ರತಿಭಟನೆ ನಡೆಸಿ ಪ್ರಯಾಣಿಕರ ರೈಲನ್ನು ತಡೆದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುಜ್ಜರ್ ಮೀಸಲಾತಿ ಸಂಘರ್ಷ ಸಮಿತಿ ಮುಖ್ಯಸ್ಥ ವಿಜಯ್ ಬೈಸ್ಲಾ ಸಭೆ ನಡೆಸಿ ರಾಜ್ಯ ಸರ್ಕಾರ ಸಮಿತಿಯ ಬೇಡಿಕೆಗಳಿಗೆ ನೀಡಿದ್ದ ಉತ್ತರದ ಪ್ರತಿಯನ್ನು ಓದಿದ್ದರು. ಗುಜ್ಜರ್ ಮೀಸಲು ಸಂಘರ್ಷ ಸಮಿತಿ ರಾಜ್ಯ ಸರ್ಕಾರಕ್ಕೆ ಭಾನುವಾರದವರೆಗೂ ಗಡುವು ನೀಡಿತ್ತು.



ಸುಭಾಷಿತ

ಒಬ್ಬ ವ್ಯಕ್ತಿ ಸದ್ಗುಣವಂತನಾಗಿದ್ದರೆ ಸಾಕು. ಅವನು ಯಾವ ಜಾತಿ, ಯಾವ ಧರ್ಮದವನಾಗಿದ್ದರೇನು?

-ನಾರಾಯಣ ಗುರು

ರೆಪೊ ದರ ಭಾರಿ ಇಳಿಕೆ ನಗದು ಲಭ್ಯತೆ ಹೆಚ್ಚಿಸುವ ಕ್ರಮ

ಆರ್ಥಿಕ ಬೆಳವಣಿಗೆಗೆ ಬೆಲೆಯಲ್ಲಿ ಸ್ಥಿರತೆ ಸಾಧಿಸುವುದು ಅಗತ್ಯವಾಗಿದ್ದರೂ ಅದಷ್ಟೇ ಸಾಕಾಗುವುದಿಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಸಂಜಯ್ ಮಲ್ಹೋತ್ರಾ ಅವರು ಹೇಳಿರುವುದು, ಆರ್‌ಬಿಐನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ರೆಪೊ ದರವನ್ನು ದೊಡ್ಡ ಮಟ್ಟದಲ್ಲಿ ಕಡಿಮೆ ಮಾಡಿರುವುದಕ್ಕೆ ಸಮರ್ಥನೆಯಾಗಿ ಕಾಣುತ್ತಿದೆ. ಹಾಗೆಯೇ, ನಗದು ಮೀಸಲು ಅನುಪಾತವನ್ನು (ಸಿಆರ್‌ಆರ್) ಶೇಕಡ 1ರಷ್ಟು ಕಡಿಮೆ ಮಾಡಿ, ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ನಗದು ಲಭ್ಯತೆ ಹೆಚ್ಚಾಗುವಂತೆ ಮಾಡಿರುವುದಕ್ಕೂ ಈ ಮಾತು ಒಂದು ಸಮರ್ಥನೆಯಂತೆ ಕಾಣುತ್ತಿದೆ. ಎಂಪಿಸಿಯು ರೆಪೊ ದರವನ್ನು ಶೇ 0.25ರಷ್ಟು ಕಡಿಮೆ ಮಾಡಬಹುದು ಎಂಬ ನಿರೀಕ್ಷೆ ಹಣಕಾಸು ತಜ್ಞರಲ್ಲಿ ಇತ್ತು. ಆದರೆ ಒಂದು ಹೆಜ್ಜೆ ಮುಂದೆ ಇರಿಸಿರುವ ಎಂಪಿಸಿ, ರೆಪೊ ದರವನ್ನು ಶೇ 0.50ರಷ್ಟು ಕಡಿಮೆ ಮಾಡಿದೆ. ಫೆಬ್ರುವರಿಯಲ್ಲಿ ಮತ್ತು ಏಪ್ರಿಲ್‌ನಲ್ಲಿ ರೆಪೊ ದರವನ್ನು ತಲಾ ಶೇ 0.25ರಷ್ಟು ತಗ್ಗಿಸಲಾಗಿತ್ತು. ಹೀಗಾಗಿ, ಶುಕ್ರವಾರದ ತೀರ್ಮಾನವನ್ನೂ ಪರಿಗಣಿಸಿದರೆ ಈ ವರ್ಷದಲ್ಲಿ ರೆಪೊ ದರವನ್ನು ಶೇ 1ರಷ್ಟು ಕಡಿಮೆ ಮಾಡಿದಂತೆ ಆಗಿದೆ. ಅಂದರೆ ಆರ್‌ಬಿಐ ಗಮನವು ಈಗ ಆರ್ಥಿಕ ಬೆಳವಣಿಗೆಯ ಕಡೆ ತಿರುಗಿದೆ ಎಂಬುದು ಸ್ಪಷ್ಟವಾಗುತ್ತಿದೆ. ಬೆಳವಣಿಗೆಯ ವೇಗವನ್ನು ಹೆಚ್ಚಿಸಲು ಆಂತರಿಕ ಬೇಡಿಕೆ ಮತ್ತು ಹೂಡಿಕೆಯನ್ನು ನೀತಿಗಳ ಮೂಲಕ ಉತ್ತೇಜಿಸುವ ಕ್ರಮ ಈಗ ಬೇಕಾಗಿದೆ ಎಂದು ಮಲ್ಹೋತ್ರಾ ಹೇಳಿದ್ದಾರೆ.



ಮುಂಗಾರು ಮಳೆಯು ಈ ಬಾರಿ ಚೆನ್ನಾಗಿ ಆಗಬಹುದು ಎಂಬ ಲೆಕ್ಕಾಚಾರವು ಆರ್ಥಿಕತೆಗೆ ಶುಭಸೂಚನೆಯಂತೆ ಇದೆ

ಚಿಲ್ಲರೆ ಹಣದುಬ್ಬರ ಪ್ರಮಾಣವು ಕಡಿಮೆ ಆಗಿರುವುದು ಆರ್‌ಬಿಐಗೆ ರೆಪೊ ದರ ತಗ್ಗಿಸುವ ವಿಶ್ವಾಸವನ್ನು ನೀಡಿದೆ. ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರವು ಶೇ 7.4ರಷ್ಟು ಆಗಿದೆ. ಹಣಕಾಸು ನೀತಿಯ ಬೆಂಬಲ ಇಲ್ಲದಿದ್ದರೆ ಜಿಡಿಪಿ ಬೆಳವಣಿಗೆ ಪ್ರಮಾಣವು ಇದೇ ಮಟ್ಟದಲ್ಲಿ ಉಳಿಯುವುದೇ ಎಂಬ ಅನುಮಾನ ಆರ್‌ಬಿಐಗೆ ಇದೆ ಎಂಬುದನ್ನು ಕೂಡ ಅದು ಈಗ ತೆಗೆದುಕೊಂಡಿರುವ ತೀರ್ಮಾನಗಳು ಸೂಚಿಸುತ್ತಿವೆ. ಚಿಲ್ಲರೆ ಹಣದುಬ್ಬರ ಪ್ರಮಾಣವು ಏಪ್ರಿಲ್‌ನಲ್ಲಿ ಶೇ 3.16ಕ್ಕೆ ಇಳಿಕೆ ಆಗಿದೆ, ಅದು ಮುಂದಿನ ದಿನಗಳಲ್ಲಿಯೂ ಕಡಿಮೆಯಾಗಿಯೇ ಇರುವ ನಿರೀಕ್ಷೆ ಇದೆ. 2025–26ರಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 3.7ರಷ್ಟು ಆಗಲಿದೆ ಎಂದು ಆರ್‌ಬಿಐ ಅಂದಾಜಿಸಿದೆ. ಇದು ಈ ಹಿಂದೆ ಮಾಡಿದ್ದ ಶೇ 4ರ ಅಂದಾಜಿಗಿಂತ ಕಡಿಮೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಜಿಡಿಪಿ ಬೆಳವಣಿಗೆ ದರವು ಶೇ 6.5ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜು ಮಾಡಿದೆ. ಬೆಳವಣಿಗೆ ಹೆಚ್ಚಿಸಲು ಇನ್ನಷ್ಟು ಒತ್ತು ನೀಡುವ ಅಗತ್ಯ ಇದೆ. ಈಗಿನ ಸಂದರ್ಭದಲ್ಲಿ ಆರ್ಥಿಕ ನೀತಿಗಳ ಮೂಲಕ ಹೆಚ್ಚಿನ ಕ್ರಮ ಕೈಗೊಳ್ಳಲು ಅವಕಾಶಗಳು ಅಷ್ಟೇನೂ ಇಲ್ಲವಾಗಿರುವ ಕಾರಣಕ್ಕೆ ಹಣಕಾಸು ನೀತಿಯ ಮೂಲಕ ಬೆಳವಣಿಗೆಗೆ ಉತ್ತೇಜನ ನೀಡಲು ಆರ್‌ಬಿಐ ಯತ್ನಿಸುತ್ತಿದೆ. ಈಗಿನ ಹಂತದಲ್ಲಿ ಬಂಡವಾಳ ವೆಚ್ಚವನ್ನು ಗಣನೀಯವಾಗಿ ಹೆಚ್ಚು ಮಾಡಲು ಸರ್ಕಾರಕ್ಕೆ ಸಾಧ್ಯವಿಲ್ಲ. ರೆಪೊ ದರದ ಇಳಿಕೆಯ ಪರಿಣಾಮವಾಗಿ ವ್ಯಕ್ತಿಗಳಿಗೆ ಹಾಗೂ ಕಂಪನಿಗಳಿಗೆ ಸಾಲವು ಅಗ್ಗದ ದರದಲ್ಲಿ ಸಿಗುತ್ತದೆ, ಸಿಆರ್‌ಆರ್ ಕಡಿಮೆ ಮಾಡಿರುವ ಪರಿಣಾಮವಾಗಿ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಹೆಚ್ಚಿನ ನಗದು ಲಭ್ಯವಾಗಲಿದ್ದು, ಸಾಲ ಕೊಡುವುದಕ್ಕೆ ಅನುಕೂಲ ಆಗಲಿದೆ.

ಈಗ ಆರ್‌ಬಿಐ ತೆಗೆದುಕೊಂಡಿರುವ ತೀರ್ಮಾನಗಳ ಪರಿಣಾಮವಾಗಿ ಮಾರುಕಟ್ಟೆಯಲ್ಲಿ ಬೇಡಿಕೆಯು ಹೆಚ್ಚಳ ಕಾಣಲಿದೆಯೇ, ಖಾಸಗಿ ವಲಯದಿಂದ ಹೂಡಿಕೆಯು ಹೆಚ್ಚಾಗಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ. ಹಣಕಾಸು ನೀತಿಯ ಬಲ ಮಾತ್ರವೇ ಅಲ್ಲದೆ, ಮುಂಗಾರು ಮಳೆಯು ಈ ಬಾರಿ ಚೆನ್ನಾಗಿ ಆಗಬಹುದು ಎಂಬ ಲೆಕ್ಕಾಚಾರವು ಆರ್ಥಿಕತೆಗೆ ಶುಭಸೂಚನೆಯಂತೆ ಇದೆ. ಕಾರ್ಪೊರೇಟ್ ಕಂಪನಿಗಳ ಗಳಿಕೆ ಚೆನ್ನಾಗಿರುವುದು, ಬ್ಯಾಂಕ್‌ಗಳ ಸ್ಥಿತಿ ಉತ್ತಮವಾಗಿರುವುದು, ಹಣಕಾಸು ಸ್ಥಿತಿ ಸ್ಥಿರವಾಗಿ ಇರುವುದು, ರಾಜಕೀಯ ಸ್ಥಿರತೆ ಇರುವುದು ಒಳ್ಳೆಯ ಸೂಚನೆಗಳು ಎಂದು ಮಲ್ಹೋತ್ರಾ ಹೇಳಿದ್ದಾರೆ. ಡಿಜಿಟಲೀಕರಣ ಮತ್ತು ಆಂತರಿಕ ಬೇಡಿಕೆಯು ಕೂಡ ಆರ್ಥಿಕ ಬೆಳವಣಿಗೆಗೆ ಪೂರಕವಾಗಿ ಇವೆ ಎಂದು ಅವರು ಹೇಳಿದ್ದಾರೆ. ‘ಹೊಂದಾಣಿಕೆ’ಯ ಹಣಕಾಸು ನೀತಿಯನ್ನು ಆರ್‌ಬಿಐ ಬದಲಾಯಿಸಿದ್ದು, ‘ತಟಸ್ಥ’ ನೀತಿಯನ್ನು ಅನುಸರಿಸುವುದಾಗಿ ಹೇಳಿದೆ. ಅಂದರೆ ಸದ್ಯದಲ್ಲಿ ರೆಪೊ ದರವು ಇನ್ನಷ್ಟು ಇಳಿಕೆಯಾಗುವ ನಿರೀಕ್ಷೆ ಇಲ್ಲ. ಜಾಗತಿಕವಾಗಿ ಅನಿಶ್ಚಿತತೆಗಳು ಮುಂದುವರಿದಿರುವ ಕಾರಣಕ್ಕೆ ಈ ರೀತಿಯ ನಿಲುವು ತಾಳಿರಬಹುದು. ಜಾಗತಿಕ ಪರಿಸ್ಥಿತಿಯನ್ನು ಕೂಡ ಉಪೇಕ್ಷಿಸಲು ಸಾಧ್ಯವಿಲ್ಲ.

ದಿನದ ಟ್ವೀಟ್

ನಾರಿಶಕ್ತಿಯ ಸಬಲೀಕರಣ



ಈ 11 ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಡಿ ಮಹಿಳೆಯರು ಬೆಳವಣಿಗೆಯ ಚಾಲಕಶಕ್ತಿಯಾಗಿ ಹೊರಹೊಮ್ಮಿದ್ದಾರೆ. ಮುದ್ರಾ ಯೋಜನೆಯಲ್ಲಿ ಶೇ 68ರಷ್ಟು, ಸ್ಟ್ಯಾಂಡ್‌ಅಪ್ ಇಂಡಿಯಾ ಯೋಜನೆಯಲ್ಲಿ ಶೇ 74ರಷ್ಟು ಮಹಿಳಾ ಫಲಾನುಭವಿಗಳಿದ್ದಾರೆ. ಪಿಎಂ ಉಜ್ವಲಾ ಯೋಜನೆಯಡಿ 10 ಕೋಟಿ ಎಲ್‌ಪಿಜಿ ಸಂಪರ್ಕ ಕಲ್ಪಿಸಲಾಗಿದೆ. ನಾರಿಶಕ್ತಿಯ ಸಬಲೀಕರಣಕ್ಕೆ ಇದು ಸಾಕ್ಷಿಯಾಗಿದೆ.

ನಿರ್ಮಲಾ ಸೀತಾರಾಮನ್, ಕೇಂದ್ರ ಹಣಕಾಸು ಸಚಿವೆ

ಕಿಡಿನುಡಿ



ಕಾಲ್ತುಳಿತ ಪ್ರಕರಣದಲ್ಲಿ ವೈಫಲ್ಯ ಆಗಿರುವುದು ನಿಜ. ಅದಕ್ಕಾಗಿ ರಾಜೀನಾಮೆ ಕೊಡುವ ಅಗತ್ಯವಿಲ್ಲ. ಯಾರು ತಮ್ಮ ಕೆಲಸ ಸರಿಯಾಗಿ ಮಾಡಿಲ್ಲ ಎಂಬುದು ತನಿಖೆಯಿಂದ ಹೊರಬರಬೇಕು. ಯಾರು ಅನುಮತಿ ಕೇಳಿದ್ದರು, ಯಾರು ನಿರಾಕರಿಸಿದರು, ಯಾವಾಗ ಅನುಮತಿ ಕೊಟ್ಟರು ಎಂಬುದು ಯಾರಿಗೂ ಗೊತ್ತಿಲ್ಲ. ಎಲ್ಲವೂ ಬೂದಿ ಮುಚ್ಚಿದ ಕೆಂಡ.

ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 9-6-2000

• 224 ಪಿಯು ಕಾಲೇಜುಗಳ ಮಾನ್ಯತೆ ರದ್ದು

ಬೆಂಗಳೂರು, ಜೂನ್ 8– ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ 224 ಪದವಿ ಪೂರ್ವ ಕಾಲೇಜುಗಳಿಗೆ ಸರ್ಕಾರದ ಮಾನ್ಯತೆ ಇಲ್ಲ. ಅಂತಹ ಕಾಲೇಜುಗಳಿಗೆ ಸೇರದಂತೆ ವಿದ್ಯಾರ್ಥಿಗಳಿಗೆ ಸೂಚಿಸಲಾಗಿದೆ.

ಮಾನ್ಯತೆಗೆ ಅನರ್ಹವೆಂದು ಪರಿಗಣಿಸಲಾಗಿರುವ 224 ಕಾಲೇಜುಗಳ ಪೈಕಿ 130 ಕಾಲೇಜುಗಳ ಅನುಮತಿಯನ್ನು ಈಗಾಗಲೇ ರದ್ದುಪಡಿಸಲಾಗಿದೆ. ಉಳಿದ ಕಾಲೇಜುಗಳ ಅನುಮತಿ ರದ್ದುಪಡಿಸುವ ವಿಷಯ ಪರಿಶೀಲನೆಯಲ್ಲಿ ಇದೆ.

• ವಾಡಿ ಚರ್ಚ್‌ನಲ್ಲಿ ನಾಡಬಾಂಬ್ ಸ್ಫೋಟ

ಕಲ್ಬುರ್ಗಿ, ಜೂನ್ 8– ಜಿಲ್ಲೆಯ ‘ಸಿಮೆಂಟ್ ಕಣಜ’ ಎಂದು ಖ್ಯಾತಿ ಪಡೆದಿರುವ ವಾಡಿ ಪಟ್ಟಣದ ಕ್ಯಾಥೋಲಿಕ್ ಚರ್ಚ್‌ನ ಆವರಣದಲ್ಲಿ ಇಂದು ಬೆಳಿಗ್ಗೆ ಎರಡು ನಾಡಬಾಂಬ್‌ಗಳು ಸ್ಫೋಟಗೊಂಡಿದ್ದರಿಂದ ಇಬ್ಬರು ಗಾಯಗೊಂಡು, ಚರ್ಚ್‌ನ ಕಿಟಕಿ ಬಾಗಿಲು– ಗಾಜುಗಳು ಛಿದ್ರಗೊಂಡಿವೆ.

ಇಂದು ಬೆಳಗಿನ ಜಾವ 6.05 ಮತ್ತು 9.05ಕ್ಕೆ ಚರ್ಚ್‌ನ ಆವರಣದಲ್ಲಿ ಈ ಸ್ಫೋಟಗಳು ನಡೆದವು.

50 ವರ್ಷಗಳ ಹಿಂದೆ

ಸೋಮವಾರ, 9-6-1975

• ಕೊಳವೆ ಮೂಲಕ ಮಂಗಳೂರಿಗೆ ಕುದುರೆಮುಖದ ಕಬ್ಬಿಣ ಅದಿರು

ಹೈದರಾಬಾದ್, ಜೂನ್ 8– ಪಶ್ಚಿಮಘಟ್ಟಗಳಲ್ಲಿರುವ ಕುದುರೆಮುಖದಿಂದ ಕಬ್ಬಿಣದ ಅದಿರನ್ನು ಮಂಗಳೂರು ಬಂದರಿಗೆ ಇನ್ನು ಮುಂದೆ ಕೊಳವೆಗಳ ಮೂಲಕ ಸಾಗಿಸಲಾಗುವುದು. ಈ ರೀತಿ ಕೊಳವೆಗಳಲ್ಲಿ ಅದಿರು ಸಾಗಣೆಯಾಗುವುದು ಭಾರತದಲ್ಲೇ ಪ್ರಪ್ರಥಮ ಎಂದು ರಾಷ್ಟ್ರೀಯ ಖನಿಜ ಅಭಿವೃದ್ಧಿ ಕಾರ್ಪೊರೇಷನ್ ಡೈರೆಕ್ಟರ್ ಆರ್.ಪಿ. ಕಪೂರ್ ತಿಳಿಸಿದ್ದಾರೆ.

ಈ ವಿಧಾನದಲ್ಲಿ ಶೇ 40ರಷ್ಟು ಕಬ್ಬಿಣ ಇರುವ ಅದಿರನ್ನು ಅರೆ ದ್ರಾವಣದ ರೂಪಕ್ಕೆ ಪರಿವರ್ತಿಸಿ ನೆಲದಿಂದ 900 ಮೀಟರ್ ಎತ್ತರದ ಘಟ್ಟಕ್ಕೆ ಪಂಪ್ ಮಾಡಿ, ಅಲ್ಲಿಂದ 120 ಕಿ.ಮೀ. ಉದ್ದದ ಕೊಳವೆಗಳಲ್ಲಿ ಮಂಗಳೂರು ಬಂದರಿಗೆ ಸಾಗಿಸಲಾಗುವುದು. ಅಲ್ಲಿ ಮತ್ತೆ ಅದನ್ನು ಹಡಗಿಗೆ ತುಂಬಲು ಸಾಧ್ಯವಾಗುವಂತೆ ಘನರೂಪಕ್ಕೆ ಪರಿವರ್ತಿಸಲಾಗುವುದು. ಇದು ಅತ್ಯಂತ ಆಧುನಿಕ ಹಾಗೂ ಹೆಚ್ಚು ವೆಚ್ಚ ಇಲ್ಲದ ಸುರಕ್ಷಿತ ವಿಧಾನ ಎಂದೂ ಅವರು ತಿಳಿಸಿದ್ದಾರೆ.

• ಹಸಿವು, ಬಡತನ ನಡುವೆ ಮಾರಕಾಸ್ತ್ರಗಳ ದಾಸ್ತಾನು

ಬೆಂಗಳೂರು, ಜೂನ್ 8– ಪ್ರಪಂಚದ ಒಂದು ಭಾಗದಲ್ಲಿ ಹಸಿವು– ಬಡತನಗಳಿಂದ ಜನರು ನರಳುತ್ತಿರುವಾಗ, ಇನ್ನೊಂದು ಭಾಗದಲ್ಲಿ ಮಾರಕ ಅಸ್ತ್ರಗಳ ದಾಸ್ತಾನಿಗಾಗಿ ಸಂಪತ್ತು ವಿನಿಯೋಗವಾಗುತ್ತಿರುವುದನ್ನು ರಾಜ್ಯಪಾಲ ಮೋಹನಲಾಲ್ ಸುಖಾಡಿಯಾ ಅವರು ಇಂದು ಇಲ್ಲಿ ಖಂಡಿಸಿದರು.

ಭಾರತದ ವಿಶ್ವ ಸಂಘ ಕೇಂದ್ರಗಳ ಪ್ರಥಮ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿದ ಅವರು, ‘ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವ ಕಲ್ಯಾಣಕ್ಕೆ ನೆರವಾಗಲಿ’ ಎಂದು ಆಶಿಸಿದರು.

ವಸುಧೈವ ಕುಟುಂಬ ನೀತಿಯನ್ನು ಅವರು ಪ್ರತಿಪಾದಿಸಿದರು.

ಆರ್ಥಿಕತೆ ಬೆಳೆದಂತೆ ಜನರ ಜೀವನಮಟ್ಟ ಸುಧಾರಿಸುತ್ತದೆ ಎಂದು ಹೇಳಲಾದೀತೇ?

ಅಭಿವೃದ್ಧಿ, ಜಿಡಿಪಿ ಮತ್ತು ಜನಹಿತ



ವಿಶ್ಲೇಷಣೆ

ಟಿ.ಎಸ್. ವೇಣುಗೋಪಾಲ್

ಭಾರತವು ಈ ವರ್ಷದ ಅಂತ್ಯಕ್ಕೆ ಜಪಾನನ್ನು ಹಿಂದಿಕ್ಕಿ ಜಾಗತಿಕಮಟ್ಟದಲ್ಲಿ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯು (ಐಎಂಎಫ್) ಅಂದಾಜಿಸಿದೆ. ಐಎಂಎಫ್ ಪ್ರಕಾರ, ಭಾರತದ ಜಿಡಿಪಿ ಗಾತ್ರವು ₹357.49 ಲಕ್ಷ ಕೋಟಿ ಆಗಲಿದೆ. ಜಪಾನಿನ ಜಿಡಿಪಿ ಗಾತ್ರ ₹357.40 ಲಕ್ಷ ಕೋಟಿ ಇರುತ್ತದೆ. ಹಾಗಾಗಿ, ಭಾರತವು ಜಪಾನಿಗಿಂತ ₹9,000 ಕೋಟಿಯಷ್ಟು ಹೆಚ್ಚು ಶ್ರೀಮಂತವಾಗುತ್ತದೆ. ಇದು ಖಂಡಿತಾ ಸಾಧ್ಯ. ಯಾಕೆಂದರೆ, ಭಾರತದ ಜಿಡಿಪಿ ಶೇ 6ರಷ್ಟು ವೇಗದಲ್ಲಿ ಬೆಳೆಯುತ್ತಿದ್ದರೆ, ಜಪಾನಿನ ಆರ್ಥಿಕತೆ ಬೆಳೆಯುತ್ತಿರುವುದು ಕೇವಲ ಶೇ 0.6ರಷ್ಟು ವೇಗದಲ್ಲಿ. ಹಾಗಾಗಿ, ಇಂದಲ್ಲ ನಾಳೆ ನಾವು ಜಪಾನನ್ನು ಹಿಂದೆ ಹಾಕುತ್ತೇವೆ. ಅಷ್ಟೇ ಅಲ್ಲ, ಜರ್ಮನಿಗಿಂತಲೂ ಮುಂದೆ ಹೋಗುತ್ತೇವೆ.

ಇದು ಸಂಭ್ರಮಿಸಬೇಕಾದ ಸಂಗತಿಯೇ, ಒಂದು ದಶಕದ ಹಿಂದೆ ಹನ್ನೊಂದನೆಯ ಸ್ಥಾನದಲ್ಲಿದ್ದ ನಾವು ನಾಲ್ಕನೇ ಸ್ಥಾನಕ್ಕೆ ಬರುತ್ತಿರುವುದು ದೊಡ್ಡ ಸಂಗತಿಯೇ? ಆದರೆ, ಎಚ್ಚರವೂ ಅಗತ್ಯ. ಯಾಕೆಂದರೆ, ಜಿಡಿಪಿ ದೇಶದ ಆರ್ಥಿಕತೆಯ ಒಂದು ಮುಖವಷ್ಟೆ.

ಒಂದು ದೇಶದ ಆರ್ಥಿಕತೆಯನ್ನು ವಿವರಿಸುವುದು ಕಷ್ಟ. ವಿಭಿನ್ನ ಆರ್ಥಿಕತೆಗಳನ್ನು ಹೋಲಿಸುವುದು ಸರಳವಾದ ಕೆಲಸವಲ್ಲ. ಆದರೆ, ಇತ್ತೀಚಿನ ದಿನಗಳಲ್ಲಿ ಜಗತ್ತು ಜಿಡಿಪಿಗೆ ಹೆಚ್ಚು ಹೆಚ್ಚು ಆತುಕೊಳ್ಳುತ್ತಿದ್ದು, ಅದು ಆರ್ಥಿಕತೆಯನ್ನು ಅಳೆಯುವ ಏಕೈಕ ಮಾಪಕವಾಗಿಬಿಟ್ಟಿದೆ.

ಜಿಡಿಪಿ, ಭೌಗೋಳಿಕ ಪ್ರದೇಶವೊಂದರಲ್ಲಿ ನಿರ್ದಿಷ್ಟ ಅವಧಿಯಲ್ಲಿ ಉತ್ಪಾದನೆಯಾದ ಒಟ್ಟು ಸರಕು ಹಾಗೂ ಸೇವೆಗಳ ಮೊತ್ತ. ದೇಶದ ಅಭಿವೃದ್ಧಿಯನ್ನು ಗ್ರಹಿಸಲು ಬೇರೆ ವಿಧಾನಗಳೂ ಇವೆ. ಉದಾಹರಣೆಗೆ, ‘ಮಾನವ ಅಭಿವೃದ್ಧಿ ಸೂಚ್ಯಂಕ’ ಇದೆ. ಜನರ ಶಿಕ್ಷಣ, ತಲಾ ಆದಾಯ, ಪೌಷ್ಟಿಕತೆ, ಜೀವಿತಾವಧಿ ಗಮನಿಸಿ ಅದನ್ನು ಅಂದಾಜು ಮಾಡಲಾಗುತ್ತದೆ. ಅದರಲ್ಲಿ ನಾವು 130ನೇ ಸ್ಥಾನದಲ್ಲಿದ್ದೇವೆ. ಜಿಡಿಪಿ ಸುಧಾರಿಸಿದರೆ ಬಡತನ, ಅಪೌಷ್ಟಿಕತೆ, ನಿರಕ್ಷರತೆ, ನಿರುದ್ಯೋಗ ಇವೆಲ್ಲಾ ಹೋಗಿಬಿಡುತ್ತವೆ ಎನ್ನುವ ನಂಬಿಕೆ ನಮ್ಮನ್ನು ಆವರಿಸಿಕೊಂಡುಬಿಟ್ಟಿದೆ. ಆದರೆ, ಜಿಡಿಪಿ ಹೆಚ್ಚಿದರೆ ಇವೆಲ್ಲಾ ಅದರಷ್ಟಕ್ಕೆ ಆಗಿಬಿಡುವುದಿಲ್ಲ. ಸರ್ಕಾರ ಅದಕ್ಕಾಗಿ ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಇದನ್ನು ಅಮಾರ್ತ್ಯ ಸೇನ್ ಅವರ ಅಧ್ಯಯನ ತೋರಿಸಿದೆ.

ಸೇನ್ ಹೇಳುವಂತೆ, ಅಭಿವೃದ್ಧಿಯ ಉದ್ದೇಶ ಜನರ ಜೀವನಮಟ್ಟವನ್ನು ಸುಧಾರಿಸುವುದು ಎನ್ನುವುದಾದರೆ, ಅದಕ್ಕಾಗಿಯೇ ನೇರವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಒಳ್ಳೆಯದು. ಸೇನ್ ಅವರು ಅಭಿವೃದ್ಧಿಯನ್ನು ನಿರ್ಜೀವ ವಸ್ತುಗಳ ಅಭಿವೃದ್ಧಿಯಾಗಿ ನೋಡುವುದಿಲ್ಲ. ಜನರ ಸ್ವಾತಂತ್ರ್ಯ ಹಾಗೂ ಸಾಮರ್ಥ್ಯದ ಹೆಚ್ಚಳವನ್ನಾಗಿ ನೋಡುತ್ತಾರೆ.

ದೇಶ ಶ್ರೀಮಂತವಾದರೆ ಪ್ರಜೆಗಳೂ ಶ್ರೀಮಂತರಾಗಬೇಕಾಗಿಲ್ಲ. ಸಂಪತ್ತು ಕೆಲವರ ಬಳಿಯಲ್ಲೇ ಸೇರಿಕೊಳ್ಳುತ್ತಾ ಹೋಗಬಹುದು. ಬಹುತೇಕ ದೇಶಗಳಲ್ಲಿ ಆಗಿರುವುದೇ ಇದು. ಭಾರತದಲ್ಲಿ 2022ರಲ್ಲಿ ಒಟ್ಟಾರೆ ಸಂಪತ್ತಿನ ಶೇ 40ರಷ್ಟು ಭಾಗ ಕೇವಲ ಶೇ 1ರಷ್ಟು ಶ್ರೀಮಂತರ ಬಳಿಯಿತ್ತು. ಕೆಳಗಿನ ಶೇ 50ರಷ್ಟು ಜನ ಬರೀ ಶೇ 3ರಷ್ಟು ಸಂಪತ್ತನ್ನು ಹಂಚಿಕೊಂಡು ಬದುಕುತ್ತಿದ್ದರು. ಹಾಗಾಗಿಯೇ 80 ಕೋಟಿ ಜನರಿಗೆ ಪುಕ್ಕಟೆಯಾಗಿ ಆಹಾರಧಾನ್ಯ ಕೊಡುವುದು ಸರ್ಕಾರಕ್ಕೆ ಅನಿವಾರ್ಯವಾಗಿದೆ. ದೇಶ ಶ್ರೀಮಂತವಾಗುತ್ತಿದೆ ಅಂದರೆ ದೇಶದ ಶ್ರೀಮಂತರು ಇನ್ನಷ್ಟು ಶ್ರೀಮಂತರಾಗುತ್ತಿದ್ದಾರೆ!

ಸಂಪತ್ತು ಕೇಂದ್ರೀಕರಣವಾಗುತ್ತಿದ್ದಂತೆ ರಾಜಕೀಯ ಹಾಗೂ ಆರ್ಥಿಕ ಅಧಿಕಾರವೂ ಕೇಂದ್ರೀಕರಣಗೊಳ್ಳುತ್ತಾ ಹೋಗುತ್ತದೆ. ಪ್ರಜಾಸತ್ತೆ ಹಾಗೂ ಸಿರಿವಂತಿಕೆಯ ಕೇಂದ್ರೀಕರಣ– ಎರಡೂ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತವೆ. ಅಸಮಾನತೆ ತೀವ್ರವಾದಷ್ಟೂ ಜನಸಾಮಾನ್ಯರ ದನಿ ಹೆಚ್ಚು ಕಡೆಗಣನೆಗೆ ಒಳಗಾಗುತ್ತದೆ. ಜಿಡಿಪಿ ಹೆಚ್ಚಳವನ್ನು ಸಂಭ್ರಮಿಸುತ್ತಾ ನಾವು ನಿರಂಕುಶ ಆಳ್ವಿಕೆಯನ್ನು ಮೆಚ್ಚಿಕೊಳ್ಳುತ್ತಿರುತ್ತೇವೆ. ಬೆಳವಣಿಗೆಯನ್ನು ತೀವ್ರಗೊಳಿಸಬೇಕೆನ್ನುವ ಆತುರದಲ್ಲಿ ನೈಸರ್ಗಿಕ ಸಂಪತ್ತನ್ನೂ ನಾಶ ಮಾಡುತ್ತಿರುತ್ತೇವೆ. ಮುಂದಿನ ತಲೆಮಾರಿನವರ ಬದುಕನ್ನೂ ಕಸಿದುಕೊಳ್ಳುತ್ತಿರುತ್ತೇವೆ.

ಇಷ್ಟಕ್ಕೂ ಐಎಂಎಫ್‌ನ ಲೆಕ್ಕಾಚಾರ ಸರಿಯಿರಬೇಕೆಂದೇನೂ ಇಲ್ಲ. ಲೆಕ್ಕಾಚಾರಕ್ಕೆ ಐಎಂಎಫ್ ಕೂಡ ಸರ್ಕಾರದ ಅಂಕಿಅಂಶಗಳನ್ನೇ ಬಳಸಿಕೊಳ್ಳುತ್ತಿದೆ. ಸರ್ಕಾರದ ಲೆಕ್ಕಾಚಾರದಲ್ಲಿ ಸಮಸ್ಯೆಗಳಿವೆ. ಉದಾಹರಣೆಗೆ, ಅಸಂಘಟಿತ ಕ್ಷೇತ್ರದ ಉತ್ಪಾದನೆ ಕುರಿತು ನಮ್ಮಲ್ಲಿ ನಿಖರವಾದ ಮಾಹಿತಿಯಿಲ್ಲ. ಸಂಘಟಿತ ಕ್ಷೇತ್ರದ ಮಾಹಿತಿಯನ್ನಾಧರಿಸಿ ಅದನ್ನು ಅಂದಾಜು ಮಾಡಲಾಗುತ್ತಿದೆ. ಕೆಲ ವರ್ಷಗಳಿಂದ ಅಸಂಘಟಿತ ಕ್ಷೇತ್ರ ತೀವ್ರ ಬಿಕ್ಕಟ್ಟಿನಲ್ಲಿದೆ. ಅದನ್ನು ಸಂಘಟಿತ ಕ್ಷೇತ್ರದ ಸಮಕ್ಕೆ ಯೋಚಿಸುವುದು ಕಷ್ಟ. ಜೊತೆಗೆ, ಈ ಜಿಡಿಪಿ ಸಂಖ್ಯೆಯೂ ಅಂತಿಮವಲ್ಲ. ಹೆಚ್ಚಿನ ಮಾಹಿತಿ ಸಿಕ್ಕಂತೆಲ್ಲಾ ಇದನ್ನು ಪರಿಷ್ಕರಿಸಲಾಗುತ್ತದೆ. ಹಿಂದೆಯೂ ಹೀಗೆ ಆಗಿದೆ.

2019–20ರಲ್ಲಿ, ಆರಂಭದಲ್ಲಿ ಜಿಡಿಪಿಯ ಬೆಳವಣಿಗೆಯು ಶೇ 5.1ರಷ್ಟು ಇರುತ್ತದೆ ಎಂಬ ಅಂದಾಜು ಇತ್ತು. ಅಂತಿಮವಾಗಿ ಬೆಳವಣಿಗೆಯು ಶೇ 3.9ರಷ್ಟು ಎಂದು ಪ್ರಕಟಿಸಲಾಯಿತು. ಜೊತೆಗೆ, ಸ್ವತಃ ಐಎಂಎಫ್ ಗುರುತಿಸಿರುವಂತೆ ಟ್ರಂಪ್ ನೀತಿಯಿಂದಾಗಿ ಇಂದು ಜಗತ್ತಿನ ಆರ್ಥಿಕತೆಯಲ್ಲಿ ತೀವ್ರ ಅನಿಶ್ಚಿತತೆ ಇದೆ. ಅದೂ ಜಿಡಿಪಿಯನ್ನು ಪ್ರಭಾವಿಸುತ್ತದೆ. ಮತ್ತೂ ಒಂದು ಸಮಸ್ಯೆಯಿದೆ. ಆರ್ಥಿಕತೆಗಳನ್ನು ಹೋಲಿಸುವುದಕ್ಕಾಗಿ ಜಿಡಿಪಿಯನ್ನು ಡಾಲರಿಗೆ ಪರಿವರ್ತಿಸಲಾಗುತ್ತದೆ. ಅದಕ್ಕೆ ವಿನಿಮಯ ದರವನ್ನು ಬಳಸಿಕೊಳ್ಳಲಾಗುತ್ತದೆ. ವಿದೇಶಿ ವಿನಿಮಯ ದರದಲ್ಲಿ ಏರುಪೇರಾದರೆ ಜಿಡಿಪಿಯ ಅಂದಾಜು ಏರುಪೇರಾಗುತ್ತದೆ. ಡಾಲರ್ ಎದುರು ಭಾರತದ ರೂಪಾಯಿ ಮೌಲ್ಯ ಕುಸಿದು, ಜಪಾನಿನ ಯೆನ್ ಮೌಲ್ಯ ಹೆಚ್ಚಿದರೆ ಜಪಾನ್ ಮೇಲೇರಬಹುದು.



ಒಂದು ಪಕ್ಷ ನಾವು ಜಪಾನನ್ನು ಹಿಂದೆ ಹಾಕಿದರೂ ಸರಾಸರಿ ಭಾರತೀಯ ಜಪಾನೀಯರಿಗಿಂತಲೂ ಹಿಂದಿರುತ್ತಾನೆ. ಜಪಾನಿನ ಜಿಡಿಪಿಯನ್ನು ಅಲ್ಲಿಯ 12.30 ಕೋಟಿ ಜನರಿಗೆ ಹಂಚಿದರೆ, ಪ್ರತಿಯೊಬ್ಬನಿಗೆ 33,900 ಡಾಲರ್ ಸಿಗುತ್ತದೆ. ಭಾರತೀಯ ತಲಾ ಆದಾಯ ಕೇವಲ 2,880 ಡಾಲರ್. ಅಂದರೆ, ನಾವು ಜಪಾನೀಯರಿಗಿಂತ 12 ಪಟ್ಟು ಬಡವರಾಗಿಯೇ ಇರುತ್ತೇವೆ. 200 ದೇಶಗಳ ತಲಾ ಆದಾಯದ ಪಟ್ಟಿಯಲ್ಲಿ ಭಾರತ 130ನೇ ಸ್ಥಾನದಲ್ಲಿದೆ. ಜಪಾನ್ ನಮಗಿಂತ ಜನಸಂಖ್ಯೆಯಲ್ಲಿ, ಭೌಗೋಳಿಕ ವಿಸ್ತಾರದಲ್ಲಿ ತುಂಬಾ ಪುಟ್ಟ ರಾಷ್ಟ್ರ. ಅಲ್ಲಿನ ನೈಸರ್ಗಿಕ ಸಂಪತ್ತೂ ನಮ್ಮಷ್ಟಿಲ್ಲ. ಆದರೆ, ಅದು ನಮ್ಮಷ್ಟೇ ಶ್ರೀಮಂತವಾಗಿದೆ. ತಂತ್ರಜ್ಞಾನದಂತಹ ಹಲವು ಕ್ಷೇತ್ರಗಳಲ್ಲಿ ನಮಗಿಂತ ಮುಂದಿದೆ. ಹಾಗಾಗಿ ಆರ್ಥಿಕತೆಗಳ ಹೋಲಿಕೆ ಸಂಕೀರ್ಣವಾದ ವಿಷಯ.

ಆರ್ಥಿಕತೆ ಬೆಳೆದಂತೆ ಜನರ ಸ್ಥಿತಿಯಲ್ಲಿ ಸುಧಾರಣೆ ಆಗುತ್ತದೆ ಎನ್ನುವ ನಂಬಿಕೆಯಲ್ಲಿ ಇನ್ನೂ ಒಂದು ಸಮಸ್ಯೆ ಇದೆ. ಇದು ಬೆಳವಣಿಗೆಯ ಮಾದರಿಯನ್ನು ಗಮನಿಸುವುದಿಲ್ಲ. ಕೃಷಿ, ಸಣ್ಣ ಉದ್ದಿಮೆಯಂತಹ ಮಾನವ ಸಂಪನ್ಮೂಲ ಬೇಡುವ ಕ್ಷೇತ್ರಗಳಲ್ಲಿ ಬೆಳವಣಿಗೆಯಾದರೆ ಹೆಚ್ಚಿನ ಉದ್ಯೋಗ ಸೃಷ್ಟಿಯಾಗುತ್ತದೆ. ಆದರೆ, ಹೆಚ್ಚು ಬಂಡವಾಳ ಬೇಡುವ ಬೃಹತ್ ಉದ್ದಿಮೆಗಳು ಅಷ್ಟಾಗಿ ಉದ್ಯೋಗವನ್ನು ಸೃಷ್ಟಿಸುವುದಿಲ್ಲ. ನಮ್ಮಲ್ಲಿ ಇಂದು ಬೆಳವಣಿಗೆಯನ್ನು ತಂತ್ರಜ್ಞಾನ, ಹಣಕಾಸು ವಲಯ ಹಾಗೂ ದೊಡ್ಡ ಕಾರ್ಪೊರೇಟ್ ಸಂಸ್ಥೆಗಳು ನಿರ್ದೇಶಿಸುತ್ತಿವೆ. ಇವೆಲ್ಲಾ ಬಂಡವಾಳಕೇಂದ್ರಿತ ಉದ್ದಿಮೆಗಳು. ನಮ್ಮ ಜಿಡಿಪಿಯ ಶೇ 50ಕ್ಕೂ ಹೆಚ್ಚು ಇವುಗಳಿಂದಲೇ ಬರುತ್ತಿರುವುದು. ಆದರೆ ಇವು ಸೃಷ್ಟಿಸುತ್ತಿರುವ ಉದ್ಯೋಗ ಶೇ 30ರಷ್ಟು ಕೂಡ ಇಲ್ಲ. ಬಹುತೇಕ ಜನ ತೊಡಗಿರುವುದು ಕೃಷಿ ಹಾಗೂ ಅಸಂಘಟಿತ ಕ್ಷೇತ್ರದಲ್ಲಿ. ಆದರೆ ಜಿಡಿಪಿಗೆ ಅವುಗಳ ಕೊಡುಗೆ ಕಡಿಮೆ.

ಜಾನ್ ಸ್ಟುವರ್ಟ್ ಮಿಲ್ ಬಹಳ ಹಿಂದೆಯೇ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಿಂತ ಅದನ್ನು ವಿತರಿಸುವುದು ನಮ್ಮ ಆದ್ಯತೆಯ ವಿಷಯವಾಗಬೇಕು ಎಂದಿದ್ದ. ಬೆಳವಣಿಗೆಯ ದೃಷ್ಟಿಯಿಂದಲೂ ಅದು ಮುಖ್ಯ. ಸಂಪತ್ತು ಕೆಲವರಲ್ಲೇ ಕೇಂದ್ರೀಕೃತವಾದರೆ, ಬಹುಸಂಖ್ಯಾತರ ಕೊಳ್ಳುವ ಶಕ್ತಿ ಕಡಿಮೆಯಾಗುತ್ತದೆ. ಸ್ವಾಭಾವಿಕವಾಗಿಯೇ ಬೇಡಿಕೆ ಕುಸಿಯುತ್ತದೆ. ಉತ್ಪಾದಿತ ವಸ್ತುಗಳು ಮಾರಾಟವಾಗದೆ ಉಳಿದುಕೊಂಡರೆ ಉತ್ಪಾದನೆಯೂ ಕಮ್ಮಿಯಾಗುತ್ತದೆ. ಅಂತಿಮವಾಗಿ ಬೆಳವಣಿಗೆ ಕುಸಿಯುತ್ತದೆ. ವಿದೇಶಿ ಸರಕುಗಳ ಮೇಲೆ ಸುಂಕ ಹಾಕುವ ಟ್ರಂಪ್ ಹಾದಿಗೆ ಜಗತ್ತು ಆತುಕೊಂಡರೆ ರಫ್ತಿಗೂ ತೊಂದರೆಯಾಗುತ್ತದೆ. ಬಿಕ್ಕಟ್ಟು ಇನ್ನಷ್ಟು ತೀವ್ರವಾಗುತ್ತದೆ.

ಅಭಿವೃದ್ಧಿ ಅನ್ನುವುದು ದೇಶಗಳ ನಡುವಿನ ಸ್ಪರ್ಧೆಯಲ್ಲ. ನಮ್ಮ ಆಂತರಿಕ ಅವಶ್ಯಕತೆಗೆ ತಕ್ಕಂತೆ ನಡೆಯಬೇಕಾದ ಪ್ರಕ್ರಿಯೆ. ಜನಸಾಮಾನ್ಯರ ಒಳಿತು ಅಭಿವೃದ್ಧಿಯ ಕೇಂದ್ರವಾಗಬೇಕು. ಶಿಕ್ಷಣ, ಆರೋಗ್ಯ, ತೆರಿಗೆ, ಹೀಗೆ ಎಲ್ಲವನ್ನೂ ಅದರ ಸುತ್ತಲೇ ಯೋಜಿಸಬೇಕು.

ಚುರುಮುರಿ



ವೀಕೆಂಡ್ ಟೂರ್!

• ತುರುವೇಕೆರೆ ಪ್ರಸಾದ್

ಗುದ್ಲಿಂಗ ಆ್ಯಂಡ್ ಕಂಪನಿ ವೀಕೆಂಡಲ್ಲಿ ಎಣ್ಣೆ ಹಾಕೋದು ಬಿಟ್ಟು ವಿಧಾನಸೌಧ ನೋಡೋ ಆಸೆಯಿಂದ ಬಂದಿದ್ರು. ಗೈಡ್ ಅವರಿಗೆ ಮಾರ್ಗದರ್ಶನ ಮಾಡ್ತಿದ್ದ.

‘ಇದೇನಾ ಇಲ್ಲಿ ಈ ಪಾಟಿ ಮೆಟ್ಲು ಅವೆ...’ ಕೇಳಿದ ಭದ್ರ.

‘ಮತ್ತೆ ದೇವರ ದರ್ಶನ ಸುಮ್ನೆ ಆಯ್ತದಾ? ಬೆಟ್ಟ ಅತ್ತಿದಂಗೆ ಅತ್ತಿ ವೋಗ್ಬೇಕು ಕಣ್ಲಾ! ಮೇಲ್ ನೋಡ್ಲಾ, ಸರ್ಕಾರಿ ಕೆಲಸ ದೇವರ ಕೆಲಸ ಅಂತ ಬರ್ದವ್ರೆ’ ಅಂದ ಗುದ್ಲಿಂಗ.

‘ವೂ ಕಣ್ಲಾ, ಅಂದ್ರ ಏನೇ ಕೆಲಸ ಇದ್ರೂ ದೇವರೇ ಬಂದು ಮಾಡ್ಕೋಬೋದು, ನಾವ್ ಮಾಡಕಿಲ್ಲ ಅಂತ’.

‘ಬನ್ನಿ ಬನ್ನಿ, ಇದೇ ಮೊಗಸಾಲೆ...’ ಗೈಡ್ ಮುಂದೆ ಹೋದ.

‘ಊ... ಇಲ್ಲೇ ಶಾಸಕರು ಅದೂ ಇದೂ ಲಾಬಿ ಮಾಡ್ತಾರಲ್ವಾ? ರೆಕ್ಲೈನರ್ಸ್, ಮಸಾಜ್ ಚೇರು ಎಲ್ಲಾ ಮಸ್ತಾಗವೆ. ಒಳಗೆ ಜಗಳ ಆಡೋರ್ ಮಧ್ಯೆ ನಿದ್ದೆಗೆಟ್ಟೋರು ಇಲ್ ಬಂದು ತಾಚ್ಕಬಹುದು’ ಅಂದ ಕಲ್ಲೇಶಿ.

‘ಏನಪ್ಪಾ ಇಲ್ಲಿ ಬಕೆಟ್ ಹಾಲು ಎಲ್ಲದೆ?’ ಕೇಳಿದ ಮಾಲಿಂಗ.

‘ಅದು ಬಕೆಟ್ ಹಾಲ್ ಅಲ್ಲ, ಬ್ಯಾಂಕ್ವೆಟ್ ಹಾಲ್!’ ತಿದ್ದಿದ ಗೈಡ್ ಅತ್ತ ಕರೆದೊಯ್ದ.

‘ಅಂದಹಾಗೆ ಆ ಬಾವಿ ಎಲ್ಲೈತಪ್ಪ? ಅವಾಗವಾಗ ಓಗಿ ದಬಕ್ಕಂತ ಬೀಳ್ತಾರಲ್ಲ...’

‘ಇಲ್ ಯಾವುದೂ ಬೀಳೋ ಬಾವಿ ಇಲ್ವಲ್ಲ’ ಗೈಡ್ ಕನ್ಫ್ಯೂಸ್ ಆದ.

‘ಅದೇನಪ್ಪ... ಹಗಲು– ರಾತ್ರಿ ಧರಣಿ ಕುಂತ್ಕತರಲ್ಲ...’

‘ಓ ಅದ? ಅದು ಸದನದ ಬಾವಿ. ಇದೇ ನೋಡಿ’ ಎಂದು ಗೈಡ್ ತೋರಿಸಿದ.

‘ಬರ್‍ರಪ್ಪಾ, ಅಂಗೇ, ನಮ್ ಭುವನೇಶ್ವರಿ, ಗಾಂಧೀಜಿ, ಕೆಂಗಲ್ಲು, ಅಂಬೇಡ್ಕರ್, ಕೆಂಪೇಗೌಡ್ರು ಎಲ್ರಿಗೂ ಒಂದು ನಮಸ್ಕಾರ ಆಕ್ಬುಡಾಣ’ ಅಂತ ಎಲ್ಲರಿಗೂ ಅಡ್‌ಬಿದ್ದು ಈಚೆ ಹೊರಟ್ರು.

‘ಯಾರೋ ಏನೋ ಮಾತಾಡ್ದಂಗಾಯ್ತಲ್ವಾ?’ ಎಂದ ಮಾಲಿಂಗ. ‘ಊ ಕಣ್ಲಾ, ಇಲ್ಲಿ ಬರೋರ ದರ್ಬಾರು ನೋಡಕ್ಕಾಯ್ತಿಲ್ಲ, ನಮ್ಮನ್ನೂ ಕರ್ಕೊಂಡ್ ಓಗಿ ಅಂತ ಗಾಂಧೀಜಿ ಕೇಳ್ದಂಗಾಯ್ತು’ ಎಂದ ಪರ್ಮೇಶಿ. ಎಲ್ಲಾ ಗೊಳ್ಳನೆ ನಕ್ಕರು!

ಸಂಗತ

ಕಾಲೇಜು ಆಯ್ಕೆ: ಗೊಂದಲ ಬೇಡ

ಪ್ಲೇಸ್‌ಮೆಂಟ್ ಪ್ಯಾಕೇಜ್ ಒಂದಕ್ಕೇ ಜೋತುಬೀಳುವ ಬದಲು ಹಲವು ಮಾನದಂಡಗಳ ಆಧಾರದ ಮೇಲೆ ಕಾಲೇಜು ಆರಿಸಿಕೊಳ್ಳುವುದು ಸೂಕ್ತ

• ಎಚ್.ಕೆ.ಶರತ್

ಪದವಿಪೂರ್ವ ಶಿಕ್ಷಣವನ್ನು ಈಗಷ್ಟೇ ಪೂರೈಸಿ ಎಂಜಿನಿಯರಿಂಗ್ ಓದಲು ಆಸಕ್ತಿ ತೋರುತ್ತಿರುವ ಮಗ ತಮ್ಮ ಮುಂದೆ ಇಡುತ್ತಿರುವ ಆಯ್ಕೆ ಸೂಕ್ತವಾದುದೇ ಎಂಬುದನ್ನು ನಿರ್ಧರಿಸಲು ಅಗತ್ಯವಿರುವ ಮಾಹಿತಿ ಪಡೆಯಲು ವ್ಯಕ್ತಿಯೊಬ್ಬರು ನಾನು ಕಾರ್ಯನಿರ್ವಹಿಸುವ ಎಂಜಿನಿಯರಿಂಗ್ ಕಾಲೇಜಿಗೆ ಭೇಟಿ ನೀಡಿ, ಅಲ್ಲಿನ ಅಧ್ಯಾಪಕರೊಂದಿಗೆ ಸಮಾಲೋಚಿಸುತ್ತಿದ್ದರು. ಸಿಇಟಿಯಲ್ಲಿ ಉತ್ತಮ ರ‍್ಯಾಂಕ್ ಹಾಗೂ ಜೆಇಇ ಮೇನ್ಸ್‌ನಲ್ಲಿ ಗಮನಾರ್ಹ ಅಂಕಗಳನ್ನು ಪಡೆದಿರುವ ಮಗನಿಗೆ, ಸದ್ಯ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಗಳಲ್ಲಿ (ಎನ್‌ಐಟಿ) ಸೀಟು ಸಿಗುವಂತಿದೆ. ಹೀಗಿದ್ದರೂ ಅವನು ಬೆಂಗಳೂರಿನ ಖಾಸಗಿ ಕಾಲೇಜೊಂದರಲ್ಲಿ ಎಂಜಿನಿಯರಿಂಗ್ ಓದಬೇಕೆಂದು ಅಪೇಕ್ಷಿಸುತ್ತಿರುವುದು ತಂದೆಯ ಅಸಮಾಧಾನಕ್ಕೆ ಕಾರಣವಾಗಿತ್ತು.

ತನಗೆ ಸೀಟು ಸಿಗಲಿರುವ ಎನ್‌ಐಟಿಗಳಿಗಿಂತ ಖಾಸಗಿ ಸ್ವಾಯತ್ತ ಕಾಲೇಜು ಉತ್ತಮವೆಂದು ವಾದಿಸುತ್ತಿರುವ ಮಗನ ನಿಲುವಿನಲ್ಲಿ ಏನೋ ಸಮಸ್ಯೆ ಇರುವಂತಿದೆ ಎಂಬ ಅನುಮಾನ ಮೂಡಿ, ಅದಕ್ಕೆ ತಿಳಿದವರಿಂದಲೇ ಸಲಹೆ, ಸೂಚನೆ ಪಡೆಯೋಣವೆಂಬ ನಿರ್ಧಾರಕ್ಕೆ ಅವರು ಬಂದಿದ್ದರು.

ಎನ್‌ಐಟಿಗಳನ್ನು ಬದಿಗಿರಿಸಿ ವಿದ್ಯಾರ್ಥಿ ಆಯ್ಕೆ ಮಾಡಿಕೊಂಡಿದ್ದ ಖಾಸಗಿ ಕಾಲೇಜು ಕೂಡ ಎಂಜಿನಿಯರಿಂಗ್ ಶಿಕ್ಷಣಕ್ಕೆ ರಾಜ್ಯದಲ್ಲಿ ಹೆಸರುವಾಸಿಯಾದದ್ದೆ. ಎನ್‌ಐಟಿಗಿಂತ ಈ ಕಾಲೇಜು ಉತ್ತಮ ಎಂದು ಭಾವಿಸಲು ಏನು ಕಾರಣವೆಂಬ ಪ್ರಶ್ನೆಯನ್ನು ವಿದ್ಯಾರ್ಥಿಗೆ ಕೇಳಲಾಯಿತು.

‘ಎನ್‌ಐಟಿಗಳಿಗಿಂತ ಈ ಖಾಸಗಿ ಕಾಲೇಜಿನ ಪ್ಲೇಸ್‌ಮೆಂಟ್ ಪ್ಯಾಕೇಜ್ ತುಂಬಾ ಚೆನ್ನಾಗಿದೆ. ನನಗೆ ಸೀಟು ದಕ್ಕುವ ಸಾಧ್ಯತೆ ಇರುವ ಎನ್‌ಐಟಿಗಳಲ್ಲಿ ಸರಾಸರಿ ಪ್ಲೇಸ್‌ಮೆಂಟ್ ಪ್ಯಾಕೇಜ್ ₹6 ಲಕ್ಷ ಇದ್ದರೆ, ಈ ಕಾಲೇಜಿನಲ್ಲಿ ₹17 ಲಕ್ಷ ಇದೆ. ನಾನು ಅದನ್ನೆಲ್ಲ ಪರಿಶೀಲಿಸಿಯೇ ಆಯ್ಕೆ ಮಾಡಿಕೊಂಡಿರುವುದು’ ಎಂದು ತಿಳಿಸಿದ.

ವಿದ್ಯಾರ್ಥಿಯ ಆಯ್ಕೆಯಲ್ಲಿ ತಪ್ಪಿದ್ದಂತೆ ತೋರದಿದ್ದರೂ ಆಯ್ಕೆಗೆ ಪರಿಗಣಿಸಿದ ಮಾನದಂಡ ಮತ್ತು ಪ್ಲೇಸ್‌ಮೆಂಟ್ ಪ್ಯಾಕೇಜಿಗೆ ಸಂಬಂಧಿಸಿದಂತೆ ನೀಡಿದ ಅಂಕಿ-ಅಂಶ ಸಮಸ್ಯಾತ್ಮಕವಾಗಿತ್ತು. ಪ್ಲೇಸ್‌ಮೆಂಟ್ ಪ್ಯಾಕೇಜ್ ಎಂದರೆ, ಕ್ಯಾಂಪಸ್ ಸಂದರ್ಶನದ ಮೂಲಕ ವಿದ್ಯಾರ್ಥಿಗಳನ್ನು ಉದ್ಯೋಗಕ್ಕೆ ಆರಿಸಿಕೊಳ್ಳುವ ಕಂಪನಿಗಳು ಶುರುವಿನಲ್ಲೇ ನೀಡುವ ವಾರ್ಷಿಕ ವೇತನದ ಮೊತ್ತ.

ಮುಂಬರುವ ಶೈಕ್ಷಣಿಕ ವರ್ಷಕ್ಕೆ ಪ್ರವೇಶಾತಿ ಪ್ರಕ್ರಿಯೆ ಪ್ರಾರಂಭಿಸಿರುವ ಖಾಸಗಿ ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳು, ವಿದ್ಯಾರ್ಥಿಗಳನ್ನು ತಮ್ಮೆಡೆಗೆ ಸೆಳೆಯಲು ಪ್ಲೇಸ್‌ಮೆಂಟ್ ಪ್ಯಾಕೇಜ್ ಅನ್ನು ಪ್ರಮುಖ ಅಸ್ತ್ರವಾಗಿ ಬಳಸಿಕೊಳ್ಳುತ್ತಿವೆ. ಹೀಗಾಗಿ, ಜಾಹೀರಾತುಗಳಲ್ಲಿ ಕ್ಯಾಂಪಸ್ ಪ್ಲೇಸ್‌ಮೆಂಟ್‌ಗೆ ಭೇಟಿ ನೀಡಿದ ಕಂಪನಿಗಳು, ಅವು ನೀಡಿದ ಉದ್ಯೋಗಗಳ ಸಂಖ್ಯೆ, ಅತಿ ಹೆಚ್ಚು ಮತ್ತು ಸರಾಸರಿ ವಾರ್ಷಿಕ ವೇತನವನ್ನು ಪ್ರಮುಖ ಸಾಧನೆಯಾಗಿ ಉಲ್ಲೇಖಿಸಿರುತ್ತವೆ. ಬೇರೆ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಿಗಿಂತ ತಮ್ಮಲ್ಲಿನ ಪ್ಲೇಸ್‌ಮೆಂಟ್ ಉತ್ತಮವಾಗಿದೆ ಎಂದು ಬಿಂಬಿಸಿಕೊಳ್ಳುವ ಈ ರೇಸಿನಲ್ಲಿ ಒಂದು ಹೆಜ್ಜೆ ಮುಂದಿರುವ ಉಮೇದು ಖಾಸಗಿ ಕಾಲೇಜುಗಳಲ್ಲಿದೆ. ಇದಕ್ಕಾಗಿ ಕೆಲವೊಮ್ಮೆ ಉತ್ಪ್ರೇಕ್ಷಿತ ಅಂಕಿ-ಅಂಶಗಳನ್ನು ಜಾಹೀರಾತುಗಳಲ್ಲಿ ಬಳಸಿಕೊಳ್ಳುವುದೂ ಇದೆ.

ಉದಾಹರಣೆಗೆ, ಅತಿಹೆಚ್ಚು ಪ್ಲೇಸ್‌ಮೆಂಟ್ ಪ್ಯಾಕೇಜ್ ₹50 ಲಕ್ಷ ಎಂದು ಜಾಹೀರಾತು ನೀಡುವ ಕಾಲೇಜು, ಈ ಸಾಲಿನಲ್ಲಿ ಪದವಿ ಮುಗಿಸುತ್ತಿರುವ ವಿದ್ಯಾರ್ಥಿಗಳ ಪೈಕಿ ಎಷ್ಟು ಮಂದಿಗೆ ಈ ಮೊತ್ತದ ಪ್ಯಾಕೇಜ್ ದೊರೆತಿದೆ ಎನ್ನುವ ವಿವರವನ್ನು ಬಹಿರಂಗಪಡಿಸಿರುವುದಿಲ್ಲ. ಇನ್ನು ಸರಾಸರಿ ಪ್ಯಾಕೇಜ್ ₹18 ಲಕ್ಷ ಎಂದು ಹೇಳುವ ಕಾಲೇಜು, ಈ ಲೆಕ್ಕ ಹಾಕಿದ್ದು ಹೇಗೆ ಎಂಬ ವಿವರ ನೀಡುವುದಿಲ್ಲ. ಹೀಗಾಗಿ ಬಹುತೇಕ ಸಂದರ್ಭಗಳಲ್ಲಿ ಜಾಹೀರಾತಿನಲ್ಲಿ ಬಿಂಬಿಸುವುದಕ್ಕೂ ವಾಸ್ತವಕ್ಕೂ ಬಹಳಷ್ಟು ವ್ಯತ್ಯಾಸ ಇರಲಿದೆ.

ತಮ್ಮ ಉದ್ಯೋಗಿಗೆ ನೀಡುವ ವೇತನ ಮೊತ್ತದ ಕುರಿತು ಗೋಪ್ಯತೆ ಕಾಯ್ದುಕೊಳ್ಳುವ ನೀತಿಯನ್ನು ಹಲವು ಬಹುರಾಷ್ಟ್ರೀಯ ಕಂಪನಿಗಳು ಪಾಲಿಸುತ್ತಿವೆ. ಆ ಕುರಿತು ನೇಮಕಾತಿ ಪತ್ರದಲ್ಲೂ ಸ್ಪಷ್ಟವಾಗಿ ಉಲ್ಲೇಖಿಸಿರುತ್ತವೆ. ಹೀಗಿದ್ದೂ ಪ್ರಚಾರಕ್ಕಾಗಿ ಕಾಲೇಜುಗಳು ಆಯಾ ಕಂಪನಿಯ ಹೆಸರಿನೊಂದಿಗೆ ಅವು ನೀಡುತ್ತಿರುವ ವೇತನದ ಮೊತ್ತವನ್ನೂ ನಮೂದಿಸುತ್ತಿವೆ.



ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಯು ಅದರಲ್ಲೂ ಹೊಸದಾಗಿ ಪ್ರಾರಂಭವಾಗಿರುವ ಕಾಲೇಜು ಅಥವಾ ವಿಶ್ವವಿದ್ಯಾಲಯದ ಕುರಿತು ತಿಳಿಯಲು, ಅದು ತನ್ನ ವೆಬ್‌ಸೈಟ್‌ನಲ್ಲಿ ನೀಡಿರುವ ಮಾಹಿತಿ ಮತ್ತು ಮಾಧ್ಯಮಗಳಲ್ಲಿ ನೀಡುವ ಜಾಹೀರಾತನ್ನು ಮಾತ್ರ ನೆಚ್ಚಿಕೊಳ್ಳುವುದಕ್ಕಿಂತ, ಅಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಅಭಿಪ್ರಾಯ ಪಡೆದುಕೊಳ್ಳುವುದು ಸೂಕ್ತ. ಪ್ಲೇಸ್‌ಮೆಂಟ್ ಪ್ಯಾಕೇಜ್‌ಗೆ ಸಂಬಂಧಿಸಿದಂತೆ ಕಾಲೇಜು ನೀಡುತ್ತಿರುವ ಅಂಕಿ-ಅಂಶಕ್ಕೂ, ಪ್ಲೇಸ್‌ಮೆಂಟ್ ಆದ ವಿದ್ಯಾರ್ಥಿಗಳು ಹೇಳುತ್ತಿರುವ ಪ್ಯಾಕೇಜ್‌ಗೂ ಹೆಚ್ಚಿನ ಅಂತರ ಇರದಿದ್ದರೆ ಮಾತ್ರ ಅದನ್ನು ನಂಬಬಹುದು.

ಖಾಸಗಿ ವಿಶ್ವವಿದ್ಯಾಲಯಗಳ ಸಂಖ್ಯೆ ಹೆಚ್ಚುತ್ತಲೇ ಇರುವ ಪ್ರಸಕ್ತ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳನ್ನು ಸೆಳೆಯುವ ದಿಸೆಯಲ್ಲಿ ಜಾಹೀರಾತಿಗೆ ಹೆಚ್ಚಿನ ಸಂಪನ್ಮೂಲ ವಿನಿಯೋಗಿಸಲಾಗುತ್ತಿದೆ. ಆಕರ್ಷಕ ಜಾಹೀರಾತುಗಳನ್ನು ಗಮನಿಸಿ ಕಾಲೇಜುಗಳ ಆಯ್ಕೆಗೆ ಮುಂದಾಗುವ ಬದಲು, ಎನ್‌ಐಆರ್‌ಎಫ್ ರ‍್ಯಾಂಕಿಂಗ್, ಎನ್‌ಬಿಎ ಮಾನ್ಯತೆ, ಹಳೆ ಹಾಗೂ ಹಾಲಿ ಓದುತ್ತಿರುವ ವಿದ್ಯಾರ್ಥಿಗಳ ಅಭಿಪ್ರಾಯ ಹೀಗೆ ಹಲವು ಮಾನದಂಡಗಳ ಆಧಾರದ ಮೇಲೆ ಕಾಲೇಜು ಆರಿಸಿಕೊಳ್ಳುವುದು ಸೂಕ್ತ.

ವಾಚಕರ ವಾಣಿ

ಸಾವಿನ ಬಾಗಿಲು ತೆರೆದವರ ಚಿತ್ರಗಳು ಗೋಚರ!

‘ಸಾವಿನ ಬಾಗಿಲು ತೆರೆದವರಾರು?’ (ಒಳನೋಟ, ಪ್ರ.ವಾ., ಜೂನ್ 8) ವರದಿಯನ್ನು ಓದುತ್ತಾ ಹೋದಾಗ 11 ಮಂದಿಯ ಜೀವ ಬಲಿ ತೆಗೆದುಕೊಂಡ ಕಾಲ್ತುಳಿತ ಪ್ರಕರಣದಲ್ಲಿ ಯಾರದು ಪ್ರತ್ಯಕ್ಷ ಪಾತ್ರವಿದ್ದೀತು ಮತ್ತು ಯಾರ ಪಾತ್ರ ತೆರೆಯ ಹಿಂದೆ ನಿಂತು ದುರಂತಕ್ಕೆ ಪರೋಕ್ಷವಾಗಿ ಕಾರಣವಾಯಿತು ಎನ್ನುವುದು ಲೇಖನದ ಮುಕ್ತಾಯ ಭಾಗಕ್ಕೆ ಬರುವಷ್ಟರಲ್ಲಿ ಸ್ಪಷ್ಟವಾಗುತ್ತದೆ. ಈ ಪ್ರಕರಣದ ಕುರಿತು ಹೈಕೋರ್ಟ್ ಸ್ವಯಂಪ್ರೇರಿತವಾಗಿ ವಿಚಾರಣೆ ಕೈಗೆತ್ತಿಕೊಂಡಿದೆ. ಈ ತಿಂಗಳ 10ರಂದು ಕೋರ್ಟ್‌ನ ಮುಂದೆ ಪ್ರಕರಣವು ಮತ್ತೆ ವಿಚಾರಣೆಗೆ ಬರಲಿದೆ. ಆಗ ಯಾವ ಯಾವ ಸಂಗತಿಗಳು ಹೊರಬರಲಿವೆ ಎಂಬುದು ಕುತೂಹಲ ಮೂಡಿಸಿದೆ.

ಸಾಮಗ ದತ್ತಾತ್ರಿ, ಬೆಂಗಳೂರು

ಶಹಬ್ಬಾಸ್ ಮಗಳೆ...

ಚಳ್ಳಕೆರೆ ತಾಲ್ಲೂಕಿನ ಗ್ರಾಮವೊಂದರಲ್ಲಿ 8ನೇ ತರಗತಿಯಲ್ಲಿ ಓದುತ್ತಿರುವ ಬಾಲಕಿ ಓದಿನಲ್ಲಿ, ಕ್ರೀಡೆಯಲ್ಲಿ ಮುಂದಿದ್ದಳು. ಇಂತಹ ಪ್ರಬುದ್ಧ ಬಾಲಕಿಯ ಮದುವೆಯನ್ನು ಅವಳ ಪಾಲಕರು, ಬಳಗದವರು ದಿಢೀರನೆ ಸೋದರ ಮಾವನೊಂದಿಗೆ ಹೂಡಿ ತಾಳಿ ಕಟ್ಟಲು ಒತ್ತಾಯಿಸಿದಾಗ ಆಕೆ ಪ್ರತಿಭಟಿಸಿದ್ದು ಹೊಡೆತ, ಬಡಿತಗಳನ್ನು ಸಹಿಸುತ್ತ ಪಾರಾದ ಸುದ್ದಿಯು (ಪ್ರ.ವಾ., ಜೂನ್ 7) ಇಡೀ ಮಹಿಳಾ ಸಮುದಾಯಕ್ಕೆ ಸ್ಫೂರ್ತಿ ತಂದಿದೆ. ವಿದ್ಯಾರ್ಥಿನಿಯ ಧೈರ್ಯ ಮತ್ತು ಸಾಹಸವು ಅಭಿನಂದನಾರ್ಹ.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ಬದಲಾದ ಚಿಂತನೆ

ಕನ್ನಡ ಭಾಷೆಯ ಬಳಕೆ ವಿಚಾರವು ಕರ್ನಾಟಕದಲ್ಲಿ ನೆಲಸಿರುವ ಉತ್ತರ ಭಾರತದವರು ಮತ್ತು ಕನ್ನಡಿಗರ ಮಧ್ಯೆ ಆಗಾಗ್ಗೆ ಸಂಘರ್ಷಕ್ಕೆ ಕಾರಣವಾಗುತ್ತಿದೆ. ಈ ನಡುವೆಯೇ ‘ಕರ್ನಾಟಕದಲ್ಲಿ ಉದ್ಯೋಗದಲ್ಲಿರುವವರು ಕನ್ನಡ ಕಲಿಯಬೇಕು ಮತ್ತು ಮಾತನಾಡಬೇಕು’ ಎಂದು ಉದ್ಯಮಿ ಮೋಹನದಾಸ್ ಪೈ ನೀಡಿರುವ ಹೇಳಿಕೆಯು ವರದಿಯಾಗಿದೆ.

ಕೆಲವು ಕಂಪನಿಯ ಅಧಿಕಾರಿಗಳು ಕನ್ನಡ ಕಲಿಯಲು ಆಸಕ್ತಿ ವಹಿಸದಿರುವುದು ಸರಿಯಲ್ಲ. ಇದು ಅನಗತ್ಯವಾಗಿ ಸಂಘರ್ಷಕ್ಕೆ ದಾರಿಯಾಗಲಿದೆ ಎಂದಿದ್ದಾರೆ. ಕನ್ನಡ ನಾಮಫಲಕ ಅಳವಡಿಕೆಯನ್ನು ಕಡ್ಡಾಯ ಮಾಡುವ ನಿರ್ಧಾರ ಮತ್ತು ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಾತಿ ವಿಚಾರದಲ್ಲಿ ಪೈ ಅವರು ವ್ಯತಿರಿಕ್ತ ಅಭಿಪ್ರಾಯ ತಳೆದಿದ್ದರು. ಆ ವೇಳೆ ಸಾಮಾಜಿಕ ಜಾಲತಾಣದಲ್ಲಿ ಭಾರಿ ಟ್ರೋಲ್‌ಗೆ ಗುರಿಯಾಗಿದ್ದರು. ಈಗ ಅವರ ಚಿಂತನೆಯು ಸ್ವಲ್ಪ ಬದಲಾದಂತೆ ಕಾಣುತ್ತಿದೆ. ಕನ್ನಡಪರ ಹೋರಾಟಗಾರರ ಕಾರ್ಯಸೂಚಿ ಹಿಂದಿರುವ ನೈಜ ಉದ್ದೇಶವು ಅವರಿಗೆ ತಡವಾಗಿಯಾದರೂ ಅರ್ಥವಾದಂತಿದೆ.

ರಮಾನಂದ ಶರ್ಮಾ, ಬೆಂಗಳೂರು

ನೌಕರರ ವರ್ಗಾವಣೆ: ಪಾರದರ್ಶಕತೆ ಮರೀಚಿಕೆ

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತದಲ್ಲಿ ಅಮಾಯಕರು ಜೀವ ಕಳೆದುಕೊಂಡಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಪೊಲೀಸ್ ಅಧಿಕಾರಿಗಳ ಎತ್ತಂಗಡಿ ಮಾಡಿರುವುದರ ಬಗ್ಗೆ ಚರ್ಚೆ ನಡೆದಿದೆ.

ಅಧಿಕಾರಿಗಳು ಆಯಕಟ್ಟಿನ ಜಾಗ ಬಯಸಿ ರಾಜಕಾರಣಿಗಳ ಬಳಿ ಅಂಗಲಾಚುವ ಪರಿಸ್ಥಿತಿಯು ಇಂತಹ ಘಟನೆಗಳಿಗೆ ಕಾರಣವಾಗಬಲ್ಲದು. ಸರ್ಕಾರಿ ನೌಕರರ ವರ್ಗಾವಣೆಯಲ್ಲಿ ಪಾರದರ್ಶಕತೆ ಇಲ್ಲ. ಹಣ, ಜಾತಿ, ಪ್ರಭಾವ ಮೇಲುಗೈ ಸಾಧಿಸಿವೆ. ಇನ್ನಷ್ಟು ಜನರ ಪ್ರಾಣ ಹಾನಿ ತಪ್ಪಿಸುವ ದಿಸೆಯಲ್ಲಿ ಸರ್ಕಾರವು ವರ್ಗಾವಣೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕಿದೆ.

ಬಿ.ಬಿ.ಎಲ್. ಗೌಡ, ಬೆಂಗಳೂರು

ದಲಿತರಿಗೆ ಸಾಮಾಜಿಕ ಬಹಿಷ್ಕಾರ ಅಮಾನವೀಯ

ಮಂಡ್ಯ ಜಿಲ್ಲೆಯ ಎಲೆಚಾಕನಹಳ್ಳಿಯ ಮಾರಮ್ಮ ದೇವಿ ದೇವಾಲಯದಲ್ಲಿ ದಲಿತರು ಪೂಜೆ ಸಲ್ಲಿಸಿದ್ದಕ್ಕೆ ಆ ಗ್ರಾಮದ ಪ್ರಬಲ ಸಮುದಾಯದವರು ವಿರೋಧ ವ್ಯಕ್ತಪಡಿಸಿದ್ದಾರೆ. ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕಿರುವುದು (ಪ್ರ.ವಾ., ಜೂನ್ 7) ಅಕ್ಷಮ್ಯ.

ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಏಳೂವರೆ ದಶಕ ಉರುಳಿದರೂ ಇನ್ನೂ ಇಂತಹ ಅಮಾನವೀಯ ಘಟನೆಗಳು ನಡೆಯುತ್ತಿರುವುದು ವಿಷಾದನೀಯ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಿದರೆ ಇಂತಹ ಹೇಯ ಕೃತ್ಯಗಳು ಮರುಕಳಿಸುವುದು ತಪ್ಪಲಿದೆ.

ಭಾರತವು ಶೀಘ್ರವೇ ಜಪಾನ್ ದೇಶವನ್ನು ಹಿಂದಿಕ್ಕಿ ಜಾಗತಿಕ ಮಟ್ಟದಲ್ಲಿ ನಾಲ್ಕನೇ ಅತಿದೊಡ್ಡ ಆರ್ಥಕತೆಯಾಗಲಿದೆ ಎಂದು ರಾಜಕೀಯ ಧುರೀಣರು ಬೀಗುತ್ತಿದ್ದಾರೆ. ಅವರೆಲ್ಲರೂ ಸಮಾಜದಲ್ಲಿನ ಅಸಮಾನತೆ ನಿರ್ಮೂಲನೆಗೆ ಮುಂದಾಗಬೇಕಿದೆ.

ಸಂಜು, ಹೆಂದೊರೆ, ಶಿರಾ

ಈ ಮನೋಧೋರಣೆ ಬದಲಾಗಲಿ

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಜಮೀನು ಕೆಲಸಕ್ಕೆ ಕೂಲಿ ಕಾರ್ಮಿಕರು ಸಿಗುತ್ತಿಲ್ಲ. ಉಚಿತವಾಗಿ ಅಕ್ಕಿ ನೀಡುವುದರ ಜೊತೆಗೆ ಮಹಿಳೆಯರಿಗೆ ಉಚಿತವಾಗಿ ಹಣ ಕೊಡುತ್ತಿರುವುದರಿಂದ ಕೃಷಿ ಕೆಲಸಕ್ಕೆ ಯಾರೂ ಬರುತ್ತಿಲ್ಲ. ಕೈಯಲ್ಲಿ ಬ್ಯಾಗ್ ಹಿಡಿದು ಓಡಾಡುವವರ ಸಂಖ್ಯೆ ಹೆಚ್ಚಾಗಿದೆ (ಪ್ರ.ವಾ., ಜೂನ್ 8) ಎಂಬ ವಿಧಾನ ಪರಿಷತ್‌ನ ಸಭಾಪತಿ ಬಸವರಾಜ ಹೊರಟ್ಟಿ ಅವರ ಮಾತು, ಅವರ ಸ್ಥಾನ ಮತ್ತು ಹಿರಿತನಕ್ಕೆ ಶೋಭೆ ತರುವುದಿಲ್ಲ. ಇದು ಖಂಡನೀಯ.

ಈ ಹಿಂದೆ, 1911ರಲ್ಲಿ ಗೋಪಾಲಕೃಷ್ಣ ಗೋಖಲೆ ಅವರು ಅಂದಿನ ಇಂಪೀರಿಯಲ್ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಸಿಗಬೇಕೆಂದು ಮಸೂದೆ ಮಂಡಿಸಿದಾಗ, ಶಾಸನಸಭೆಯ ಬಹುತೇಕ ಸದಸ್ಯರು ‘ಎಲ್ಲಾ ಮಕ್ಕಳು ಶಾಲೆಗೆ ಹೋದರೆ, ನಮ್ಮ ಹೊಲ- ಗದ್ದೆಗಳಲ್ಲಿ ಕೆಲಸ ಮಾಡುವವರು ಯಾರು’ ಎಂಬ ಪ್ರಶ್ನೆ ಎತ್ತಿದ್ದರು. ಒಂದು ವರ್ಗದ ಜನ ಕೂಲಿ ಕೆಲಸಕ್ಕಾಗಿಯೇ ಇದ್ದಾರೆ ಎಂಬ ಈ ಮನೋಧೋರಣೆ ಬದಲಾಗಬೇಕು. ಈ ಬಗೆಯ ಅಸಹನೆ ಒಳ್ಳೆಯದಲ್ಲ.

ನಿರಂಜನಾರಾಧ್ಯ ವಿ.ಪಿ., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಅಮೆರಿಕದಲ್ಲಿ ಅನಿರೀಕ್ಷಿತ ಬೆಳವಣಿಗೆಗಳು ನಡೆಯುತ್ತಿವೆ. ಆಪ್ತಮಿತ್ರರಂತೆ ಇದ್ದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉದ್ಯಮಿ ಇಲಾನ್ ಮಸ್ಕ್ ಬದ್ಧವೈರಿಗಳಂತೆ ಬದಲಾಗಿದ್ದಾರೆ. ಮಸ್ಕ್ ಅವರು ಟ್ರಂಪ್ ಸರ್ಕಾರದ ನೀತಿಯನ್ನು ಬಹಿರಂಗವಾಗಿ ಟೀಕಿಸುತ್ತಿದ್ದಾರೆ. ಅದು ಟ್ರಂಪ್ ಅವರನ್ನು ಕೆರಳಿಸಿದೆ. ಒಂದು ಕಾಲದ ತಮ್ಮ ಗೆಳೆಯನ ಬಗ್ಗೆ ಟ್ರಂಪ್ ಕಟುವಾಗಿ ವರ್ತಿಸುತ್ತಿದ್ದಾರೆ. ಶ್ವೇತಭವನದಲ್ಲಿ ಹುದ್ದೆಯೊಂದನ್ನು ನಿಭಾಯಿಸುತ್ತಿದ್ದ ಮಸ್ಕ್ ಅವರನ್ನು, ಅಲ್ಲಿಂದಲೂ ಹೊರಹಾಕಲಾಗಿದೆ. ಸಾಮಾಜಿಕ ಜಾಲ ತಾಣಗಳಲ್ಲಿ ಇಬ್ಬರ ನಡುವೆ ಬಹಿರಂಗ ಸಮರವೇ ನಡೆಯುತ್ತಿದೆ. ಇದು ಸ್ಪೇಸ್ ಎಕ್ಸ್, ಟೆಸ್ಲಾ ಸೇರಿದಂತೆ ಮಸ್ಕ್ ಅವರ ಉದ್ಯಮಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ ಎನ್ನಲಾಗಿದೆ

ಸ್ನೇಹದಿಂದ ವೈರದವರೆಗೆ: ವರ್ಷದಲ್ಲಿ ಹಳಸಿದ ಸಂಬಂಧ

ಮಸ್ಕ್ v/s ಟ್ರಂಪ್



ಪ್ರಜಾವಾಣಿ ವಾರ್ತೆ

ಕೆಲವು ವಾರಗಳ ಹಿಂದಿನವರೆಗೂ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಸ್ಪೇಸ್ ಎಕ್ಸ್, ಟೆಸ್ಲಾ ಕಂಪನಿಗಳ ಮಾಲೀಕ ಇಲಾನ್ ಮಸ್ಕ್ ಅವರನ್ನು ಅಪರೂಪದ ಜೋಡಿ ಎಂದೇ ಕರೆಯಲಾಗುತ್ತಿತ್ತು. ಒಬ್ಬರು ಜಗತ್ತಿನ ಅತ್ಯಂತ ಶ್ರೀಮಂತ ಉದ್ಯಮಿಯಾದರೆ, ಮತ್ತೊಬ್ಬರು ಜಗತ್ತಿನ ಅತ್ಯಂತ ಶ್ರೀಮಂತ ರಾಷ್ಟ್ರದ ಅಧ್ಯಕ್ಷ. ಆದರೆ, ಇಬ್ಬರ ನಡುವಿನ ಆತ್ಮೀಯ ಒಡನಾಟಕ್ಕೆ ಒಂದು ವರ್ಷ ತುಂಬುವುದರ ಒಳಗಾಗಿ ಜೋಡಿಯ ನಡುವೆ ಮನಸ್ತಾಪ ಹುಟ್ಟಿಕೊಂಡಿದ್ದು, ಅದು ಈಗ ದ್ವೇಷ ಸಾಧಿಸುವ ಮಟ್ಟಕ್ಕೆ ಹೋಗಿದೆ. ಇದರ ಫಲವಾಗಿ ಮಸ್ಕ್ ಶ್ವೇತಭವನದಿಂದಲೂ ಹೊರಬಿದ್ದಿದ್ದಾರೆ.

ಮಸ್ಕ್ ರಾಜಕಾರಣದಿಂದ ಸದಾ ಒಂದು ಅಂತರ ಕಾಪಾಡಿಕೊಂಡೇ ಬಂದಿದ್ದರು. 2016ರಲ್ಲಿ ತಾನು ಹಿಲರಿ ಕ್ಲಿಂಟನ್‌ಗೆ, 2020ರಲ್ಲಿ ಜೋ ಬೈಡನ್‌ಗೆ ಮತ ಹಾಕಿದ್ದಾಗಿ ಹೇಳಿದ್ದರೂ ಅವರು ರಾಜಕೀಯದಿಂದ ದೂರವೇ ಇದ್ದರು. 2024ರ ಜುಲೈನಲ್ಲಿ ಚುನಾವಣಾ ಪ್ರಚಾರದಲ್ಲಿ ನಿರತರಾಗಿದ್ದಾಗ ಟ್ರಂಪ್ ಅವರ ಹತ್ಯಾ ಯತ್ನ ನಡೆದಿತ್ತು. ಅಲ್ಲಿಂದ ಮಸ್ಕ್ ಅವರು ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿದ್ದ ಡೊನಾಲ್ಡ್ ಟ್ರಂಪ್ ಅವರನ್ನು ಬೆಂಬಲಿಸತೊಡಗಿದರು. ತನ್ನ ಒಡೆತನದ 'ಎಕ್ಸ್' ವೇದಿಕೆಯಲ್ಲಿ ಟ್ರಂಪ್ ಪರ ಪ್ರಚಾರಕ್ಕೆ ಅನುಕೂಲ ಕಲ್ಪಿಸಿದ್ದಷ್ಟೇ ಅಲ್ಲದೇ, ಅವರಿಗಾಗಿ ಚುನಾವಣೆಯಲ್ಲಿ 25 ಕೋಟಿ ಡಾಲರ್ (₹2,145 ಕೋಟಿ) ವೆಚ್ಚವನ್ನೂ ಮಾಡಿದ್ದರು.

ಸಮಾನ ಮನಸ್ಕರು: ಡೊನಾಲ್ಡ್ ಟ್ರಂಪ್ ಮತ್ತು ಮಸ್ಕ್ ನಡುವೆ ಅನೇಕ ಸಾಮ್ಯಗಳಿದ್ದವು. ತೆರಿಗೆ ಕಡಿತ, ವಲಸೆ ನಿಯಂತ್ರಣದಂಥ ಅನೇಕ ವಿಚಾರಗಳಲ್ಲಿ ಇಬ್ಬರ ಅಭಿಪ್ರಾಯಗಳೂ ಒಂದೇ ಆಗಿದ್ದವು. ಇಬ್ಬರೂ ಜೊತೆಯಾಗಿದ್ದರಿಂದ ಪರಸ್ಪರರಿಗೆ ಹಲವು ಅನುಕೂಲಗಳಿದ್ದವು. ಜಗತ್ತಿನ ಸಿರಿವಂತ ಉದ್ಯಮಿಯ ಹಣಕಾಸಿನ ಬೆಂಬಲ ಟ್ರಂಪ್‌ಗೆ ಸಿಕ್ಕಿ, ಚುನಾವಣೆಯಲ್ಲಿ ಗೆದ್ದ ಅವರು ಎರಡನೆಯ ಬಾರಿಗೆ ಅಮೆರಿಕದ ಅಧ್ಯಕ್ಷರಾದರು. ಶ್ವೇತಭವನ ಪ್ರವೇಶಿಸಿದ ಟ್ರಂಪ್, ತಮ್ಮ ಗೆಳೆಯ ಮಸ್ಕ್ ಅವರನ್ನು ಮರೆಯಲಿಲ್ಲ. ಅವರನ್ನು ಸರ್ಕಾರದ ಕಾರ್ಯದಕ್ಷತಾ ಇಲಾಖೆಯ (ಡಿಒಜಿಇ) ಮುಖ್ಯಸ್ಥರನ್ನಾಗಿ ಮಾಡಿದರು. ಆಡಳಿತ ಸುಧಾರಣೆಗೆ ಕ್ರಮ ವಹಿಸುವುದರ ಜತೆಗೆ ಅನಗತ್ಯ ವೆಚ್ಚಗಳನ್ನು ಕಡಿತ ಮಾಡುವುದು ಈ ಇಲಾಖೆಯ ಕೆಲಸವಾಗಿತ್ತು.

ಟ್ರಂಪ್ ಆಡಳಿತದ ಆರಂಭದಲ್ಲಿ ಭಾರಿ ಹುಮ್ಮಸ್ಸಿನಿಂದ ಕಾರ್ಯಪ್ರವೃತ್ತರಾದ ಮಸ್ಕ್, ಯುಎಸ್ ಏಡ್ ಸೇರಿದಂತೆ ಸರ್ಕಾರದ ಹಲವು ಕಾರ್ಯಕ್ರಮಗಳನ್ನು ರದ್ದುಪಡಿಸಿ, ಸಿಬ್ಬಂದಿಯನ್ನು ಕಡಿತಗೊಳಿಸಿದರು. ನೋಡನೋಡುತ್ತಲೇ ಶ್ವೇತಭವನದಲ್ಲಿ ಅವರ ಪ್ರಭಾವ ಹೆಚ್ಚಾಗತೊಡಗಿತು. ಅದರ ಹಿಂದೆಯೇ ಹಲವು ವಿವಾದಗಳೂ ಅವರನ್ನು ಸುತ್ತುವರಿದವು. ಟ್ರಂಪ್ ಅವರ ಆಪ್ತರಿಂದ ಮಸ್ಕ್‌ಗೆ ನಿಧಾನಕ್ಕೆ ವಿರೋಧ ವ್ಯಕ್ತವಾಗಡತೊಗಿತು. ಕೊನೆಗೆ ತಾವೇ ಅಖಾಡಕ್ಕಿಳಿದ ಟ್ರಂಪ್, ಇದೇ ಮಾರ್ಚ್‌ನಲ್ಲಿ ಡಿಒಜಿಇ ಅಧಿಕಾರವನ್ನು ಮೊಟಕುಗೊಳಿಸಿದರು.

ಇನ್ನೊಂದೆಡೆ, ಮಸ್ಕ್ ಅವರ ರಾಜಕೀಯ ಚಟುವಟಿಕೆಗಳು, ನಕಾರಾತ್ಮಕ ಪ್ರಚಾರದಿಂದ ಅವರ ಉದ್ಯಮಕ್ಕೆ ಪೆಟ್ಟು ಬೀಳತೊಡಗಿತು. ಅದು ಟೆಸ್ಲಾ ಬ್ರ್ಯಾಂಡ್ ಮೇಲೆ ಪರಿಣಾಮ ಬೀರಿ, ಜಾಗತಿಕ ಮಾರುಕಟ್ಟೆಯಲ್ಲಿ ಅದರ ಷೇರುಗಳ ಬೆಲೆ ಕುಸಿಯಿತು.

ಕೊನೆಗೆ, ಮೇ 28ರಂದು ಡಿಒಜಿಇ ಹುದ್ದೆಯಿಂದ ತಾನು ನಿರ್ಗಮಿಸುತ್ತಿರುವುದಾಗಿ ಮಸ್ಕ್ ಘೋಷಿಸಿದರು. ತನ್ನ ಇಲಾಖೆಯು ಸರ್ಕಾರದ 18,000 ಕೋಟಿ ಡಾಲರ್ (₹15.44 ಲಕ್ಷ ಕೋಟಿ) ಅನ್ನು ಉಳಿಸಿದೆ ಎಂದು ಪ್ರತಿಪಾದಿಸಿದರು. ಆ ಹುದ್ದೆಗೇರಿದ್ದ ಸಂದರ್ಭದಲ್ಲಿ ಸರ್ಕಾರದ 2 ಲಕ್ಷ ಕೋಟಿ ಡಾಲರ್ (₹172 ಲಕ್ಷ ಕೋಟಿ) ಉಳಿಸುವುದಾಗಿ ಮಸ್ಕ್ ಘೋಷಿಸಿದ್ದರು.

ಮಸೂದೆಯಿಂದ ಮನಸ್ತಾಪ: ಇದರ ನಡುವೆಯೇ, ಟ್ರಂಪ್ ಅವರು ಸುಂಕ ಮತ್ತು ವೆಚ್ಚ ಮಸೂದೆ ತರಲು ಮುಂದಾದರು. ಡಿಒಜಿಇ ಉಳಿಸುವ ಹಣ ಬಳಸಿಕೊಂಡು ಅಮೆರಿಕದಲ್ಲಿ ಗಣನೀಯ ತೆರಿಗೆ ಕಡಿತ ಮಾಡುವುದು ಟ್ರಂಪ್ ಅವರ ಉದ್ದೇಶವಾಗಿತ್ತು. ಇದು 'ದೊಡ್ಡ, ಸುಂದರ ಮಸೂದೆ' (ಒಬಿಬಿಬಿ) ಎಂದೇ ಅವರು ಪ್ರತಿಪಾದಿಸಿದರು. ಡಿಒಜಿಇಯಿಂದ ಅರ್ಧದಲ್ಲಿಯೇ ಮಸ್ಕ್ ನಿರ್ಗಮಿಸಿದ ನಂತರವೂ ಟ್ರಂಪ್ ಮಸೂದೆ ತರುವ ದಿಸೆಯಲ್ಲಿ ಮುಂದಡಿ ಇಟ್ಟರು.

ಆದರೆ, ಈ ಮಸೂದೆಯಿಂದ ಅಮೆರಿಕದ ಜನರ ಮೇಲೆ ಸಾಲದ ಹೊರೆ ಹೆಚ್ಚಲಿದೆ ಎನ್ನುವುದು ಮಸ್ಕ್ ಅಭಿಪ್ರಾಯವಾಗಿತ್ತು. ಈ ವಿಚಾರದಲ್ಲಿ ಟ್ರಂಪ್ ಮತ್ತು ಅವರ ರಿಪಬ್ಲಿಕನ್ ಪಕ್ಷದ ಮುಖಂಡರ ಮನವೊಲಿಕೆಯ ಪ್ರಯತ್ನ ನಡೆಸಿದರಾದರೂ, ಅದು ಫಲ ನೀಡಲಿಲ್ಲ. ಅಲ್ಲಿಗೂ ಸುಮ್ಮನಾಗದ ಮಸ್ಕ್, ತನ್ನದೇ 'ಎಕ್ಸ್' ವೇದಿಕೆಯಲ್ಲಿ 'ಮಸೂದೆ ತಡೆಯಿರಿ' ('ಕಿಲ್ ದ ಬಿಲ್') ಆಂದೋಲನ ಆರಂಭಿಸಿದರು. ಅದು ಟ್ರಂಪ್ ಮತ್ತು ಮಸ್ಕ್ ನಡುವಿನ ಮನಸ್ತಾಪ ಸ್ಫೋಟಗೊಳ್ಳಲು ಕಾರಣವಾಯಿತು.

ಸುಂಕ ಮತ್ತು ವೆಚ್ಚ ಮಸೂದೆಯು ತನ್ನ ಸರ್ಕಾರದ ಮಹತ್ವದ ಆರ್ಥಿಕ ನೀತಿಯಾಗಿದೆ ಎಂದು ಟ್ರಂಪ್ ಪ್ರಚಾರ ಮಾಡಿದರು. ಅದು ಬೃಹತ್ತಾದ, ಅತಿರೇಕದ ಮಸೂದೆಯಾಗಿದ್ದು, ಕಾಯ್ದೆಯಾಗಿ ಜಾರಿಯಾದರೆ, ದೇಶದ ಸಾಲದ ಹೊರೆ ಹೆಚ್ಚಿಸುವುದರ ಜತೆಗೆ, ಡಿಒಜಿಇ ಮುಖ್ಯಸ್ಥನಾಗಿ ತಾನು ಮಾಡಿದ ಕೆಲಸವನ್ನೂ ನೀರುಪಾಲು ಮಾಡುತ್ತದೆ ಎಂದು ಮಸ್ಕ್ ಮಸೂದೆ ವಿರುದ್ಧ ಪ್ರಚಾರ ಮಾಡತೊಡಗಿದರು. ಅಧ್ಯಕ್ಷರ ವಿರುದ್ಧ ಹೋಗುವುದರ ಬಗ್ಗೆ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅಂಥವರು ಎಚ್ಚರಿಸಿದರೂ ಮಸ್ಕ್ ಹಿಂದೆ ಸರಿಯಲಿಲ್ಲ. ಮಸ್ಕ್ ವರ್ತನೆಯಿಂದ ತಮಗೆ ಬೇಸರವಾಗಿದೆ ಎಂದು ಟ್ರಂಪ್ ಅವರೇ ಹೇಳಿಕೊಂಡರು. ಮತ್ತೂ ಮುಂದುವರಿದ ಮಸ್ಕ್, 'ನಾನಿಲ್ಲದಿದ್ದರೆ ಟ್ರಂಪ್ ಅವರು ಚುನಾವಣೆಯಲ್ಲಿ ಸೋಲುತ್ತಿದ್ದರು' ಎಂದೂ ಪ್ರತಿಪಾದಿಸಿದರು.

'ಮಸ್ಕ್‌ಗೆ ತಲೆ ಕೆಟ್ಟಿದೆ' ಎಂದ ಟ್ರಂಪ್, 'ಮಸ್ಕ್ ಅವರು ಟ್ರಂಪ್ ಎನ್ನುವ ಮಾನಸಿಕ ವ್ಯಾಧಿಯಿಂದ ಬಳಲುತ್ತಿದ್ದಾರೆ' ಎಂದಿದ್ದಲ್ಲದೇ, ಸರ್ಕಾರದೊಂದಿಗೆ ಅವರು ಮಾಡಿಕೊಂಡಿರುವ ಒಪ್ಪಂದಗಳನ್ನು ರದ್ದುಪಡಿಸುವ ಬೆದರಿಕೆಯನ್ನೂ ಹಾಕಿದರು. ಆದರೂ ಸುಮ್ಮನಾಗದ ಮಸ್ಕ್, ಮುಂದಿನ ವರ್ಷ ನಡೆಯಲಿರುವ ಮಧ್ಯಂತರ ಚುನಾವಣೆಗಳಲ್ಲಿ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಗಳನ್ನು ಬೆಂಬಲಿಸುವುದಾಗಿ ಘೋಷಿಸಿರುವುದು ಟ್ರಂಪ್ ಅವರನ್ನು ಕೆರಳಿಸಿದೆ. ತಮ್ಮ ಮತ್ತು ಮಸ್ಕ್ ನಡುವಣ ಸಂಬಂಧ ಕೊನೆಗೊಂಡಿದೆ ಎಂದು ಘೋಷಿಸಿರುವ ಟ್ರಂಪ್, ಒಂದು ವೇಳೆ ಅವರು ಡೆಮಾಕ್ರಟಿಕ್ ಅಭ್ಯರ್ಥಿಗಳನ್ನು ಬೆಂಬಿಸಿದ್ದೇ ಆದರೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಟ್ರಂಪ್ ಅವರಿಂದ ದೂರವಾದ ನಂತರ ಮಸ್ಕ್, ಶ್ವೇತಭವನಕ್ಕೆ ಹಲವು ಸವಾಲುಗಳನ್ನು ಒಡ್ಡುತ್ತಿದ್ದಾರೆ. ಇವರ ಮನಸ್ತಾಪದಿಂದ ಅಮೆರಿಕದ ರಾಜಕಾರಣ ಮತ್ತು ಉದ್ಯಮರಂಗದ ಮೇಲೆ ಯಾವ ರೀತಿಯ ಪರಿಣಾಮಗಳು ಉಂಟಾಗಬಹುದು ಎನ್ನುವ ಬಗ್ಗೆ ಜಾಗತಿಕ ಮಟ್ಟದಲ್ಲಿ ಚರ್ಚೆಗಳು ನಡೆಯುತ್ತಿವೆ.

ಆಧಾರ: ಪಿಟಿಐ, ಬಿಬಿಸಿ, ರಾಯಿಟರ್ಸ್, 'ಎಕ್ಸ್' ಪೋಸ್ಟ್‌ಗಳು

ಸ್ಪೇಸ್ ಎಕ್ಸ್–ಸರ್ಕಾರದ ಒಪ್ಪಂದಗಳ ಮೇಲೆ ತೂಗುಕತ್ತಿ

ಟ್ರಂಪ್ ಮತ್ತು ಮಸ್ಕ್ ನಡುವಿನ ಕಲಹವು ಮಸ್ಕ್ ಒಡೆತನದ ಸ್ಪೇಸ್ ಎಕ್ಸ್ ಕಂಪನಿ ಹಾಗೂ ಅಮೆರಿಕ ಸರ್ಕಾರದ ನಡುವೆ ಏರ್ಪಟ್ಟಿರುವ ₹1.89 ಲಕ್ಷ ಕೋಟಿ ಮೊತ್ತದ (2,200 ಕೋಟಿ ಡಾಲರ್) ಗುತ್ತಿಗೆ ಒಪ್ಪಂದಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಒಂದು ವೇಳೆ ಒಪ್ಪಂದಗಳು ರದ್ದಾದರೆ, ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಕಾರ್ಯಗಳಿಗೆ ತೀವ್ರ ಹಿನ್ನಡೆಯಾಗಲಿದೆ.

ಇಬ್ಬರ ನಡುವೆ ವಾಕ್ಸಮರ ಜೋರಾಗುತ್ತಿದ್ದಂತೆಯೇ ಟ್ರಂಪ್ ಅವರು, ಮಸ್ಕ್ ಮಾಲೀಕತ್ವದ ಕಂಪನಿಗಳೊಂದಿಗೆ ಸರ್ಕಾರ ಮಾಡಿಕೊಂಡಿರುವ ಒಪ್ಪಂದವನ್ನು ರದ್ದು ಮಾಡುವ ಬೆದರಿಕೆಯನ್ನು 'ಎಕ್ಸ್'ನಲ್ಲಿ ಹಾಕಿದ್ದರು.

ಇದಕ್ಕೆ ಪ್ರತಿಯಾಗಿ ಮಸ್ಕ್ ಕೂಡ, ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಗಗನಯಾತ್ರಿಗಳನ್ನು ಕರೆದುಕೊಂಡು ಹೋಗಲು ನಾಸಾ ಬಳಸುತ್ತಿರುವ ಸ್ಪೇಸ್‌ಎಕ್ಸ್‌ನ ಡ್ರ್ಯಾಗನ್ ಬಾಹ್ಯಾಕಾಶ ಕೋಶವನ್ನು ವಾಪಸ್ ಪಡೆಯುವ ಪ್ರಕ್ರಿಯೆಯನ್ನು ಆರಂಭಿಸುವುದಾಗಿ 'ಎಕ್ಸ್'ನಲ್ಲಿ ಹೇಳಿದ್ದರು.

ಇದೇ ಪೋಸ್ಟ್‌ಗೆ ಬಳಕೆದಾರರೊಬ್ಬರು ಮಾಡಿದ ಕಮೆಂಟ್‌ಗೆ 'ಡ್ರ್ಯಾಗನ್ ಬಾಹ್ಯಾಕಾಶ ಕೋಶವನ್ನು ವಾಪಸ್ ಪಡೆಯುವುದಿಲ್ಲ' ಎಂದು ಮಸ್ಕ್ ಪ್ರತಿಕ್ರಿಯಿಸಿದ್ದರು.

ನಾಸಾವು ಈಗ ಬಾಹ್ಯಾಕಾಶ ನಿಲ್ದಾಣಕ್ಕೆ ಗಗನಯಾತ್ರಿಗಳನ್ನು ಕಳುಹಿಸಲು ಖಾಸಗಿಯವರ ಬಾಹ್ಯಾಕಾಶ ಕೋಶಗಳನ್ನು ಅವಲಂಬಿಸಿದೆ. ಈ ಸಂಬಂಧ ಸ್ಪೇಸ್ ಎಕ್ಸ್‌ನೊಂದಿಗೆ 500 ಕೋಟಿ ಡಾಲರ್ (₹42,900 ಕೋಟಿ) ಮೌಲ್ಯದ ಒಪ್ಪಂದ ಮಾಡಿಕೊಂಡಿದೆ. ಸದ್ಯ ಸ್ಪೇಸ್‌ಎಕ್ಸ್‌ನ ಡ್ರ್ಯಾಗನ್ ಕೋಶ ಮಾತ್ರ ಗಗನಯಾತ್ರಿಗಳನ್ನು ಬಾಹ್ಯಾಕಾಶಕ್ಕೆ ಕೊಂಡೊಯ್ಯುವ ಸಾಮರ್ಥ್ಯ ಹೊಂದಿದೆ. ಒಂದು ವೇಳೆ ಮಸ್ಕ್, ಡ್ರ್ಯಾಗನ್ ಅನ್ನು ವಾಪಸ್ ಪಡೆದರೆ ನಾಸಾದ ಅಧ್ಯಯನಕ್ಕೆ ತೊಂದರೆಯಾಗಲಿದೆ.

ಚಂದ್ರ ಮತ್ತು ಮಂಗಳ ಗ್ರಹಕ್ಕೆ ಮಾನವರನ್ನು ಕಳುಹಿಸುವ ಉದ್ದೇಶದಿಂದ ಅದಕ್ಕೆ ಪೂರಕವಾದ ರಾಕೆಟ್‌ಗಳ ಅಭಿವೃದ್ಧಿಗಾಗಿ ನಾಸಾವು ಸ್ಪೇಸ್ ಎಕ್ಸ್ ಜೊತೆಗೆ 1,500 ಕೋಟಿ ಡಾಲರ್ (₹1.29 ಲಕ್ಷ ಕೋಟಿ) ವೆಚ್ಚದ ಒಪ್ಪಂದವನ್ನೂ ಮಾಡಿಕೊಂಡಿದೆ. ಇದರ ಅಡಿಯಲ್ಲೇ ಸ್ಪೇಸ್ ಎಕ್ಸ್ ಫಾಲ್ಕನ್–9 ರಾಕೆಟ್‌ಗಳು ಮತ್ತು ಬಹು ಬಳಕೆಯ ಸ್ಟಾರ್‌ಶಿಪ್ ರಾಕೆಟ್ ಅನ್ನು ಅಭಿವೃದ್ಧಿ ಪಡಿಸಿದೆ.

ಇದಲ್ಲದೇ, ಅಮೆರಿಕದ ರಕ್ಷಣಾ ಇಲಾಖೆ ಪೆಂಟಗನ್‌ನ ರಾಷ್ಟ್ರೀಯ ಭದ್ರತಾ ಉಪಗ್ರಹಗಳನ್ನು ಉಡಾವಣೆ ಮಾಡಲು ಮತ್ತು ಅಮೆರಿಕದ ಗುಪ್ತಚರ ಸಂಸ್ಥೆಯ ಬೇಹುಗಾರಿಕಾ ಉಪಗ್ರಹಗಳ ಗುಚ್ಛಗಳನ್ನು ಅಭಿವೃದ್ಧಿ ಪಡಿಸುವ ಸಂಬಂಧವೂ ಸ್ಪೇಸ್ ಎಕ್ಸ್‌ನೊಂದಿಗೆ ಒಪ್ಪಂದ ಮಾಡಿಕೊಂಡಿವೆ.

'ಎಪ್‌ಸ್ಟೈನ್ ಫೈಲ್ಸ್‌ನಲ್ಲಿ ಟ್ರಂಪ್ ಹೆಸರು'

ಡೊನಾಲ್ಡ್ ಟ್ರಂಪ್ ವಿರುದ್ಧ ಮಸ್ಕ್ ಮಾಡಿದ ಅತ್ಯಂತ ಗಂಭೀರ ಆರೋಪ, ಎಪ್‌ಸ್ಟೈನ್ ಫೈಲ್ಸ್‌ಗೆ ಸಂಬಂಧಿಸಿದ್ದು. 'ಮಹಿಳೆಯರ ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳ ಅಪರಾಧಿ ಜೆಫ್ರಿ ಎಪ್‌ಸ್ಟೈನ್ ಹಗರಣದಲ್ಲಿ ಡೊನಾಲ್ಡ್ ಟ್ರಂಪ್ ಅವರ ಹೆಸರೂ ಇದೆ. ಹೀಗಾಗಿಯೇ ಅದಕ್ಕೆ ಸಂಬಂಧಿಸಿದ ದಾಖಲೆಗಳು (ಎಪ್‌ಸ್ಟೈನ್) ಇನ್ನೂ ಸಾರ್ವಜನಿಕವಾಗಿ ಬಿಡುಗಡೆಯಾಗಿಲ್ಲ' ಎಂದು ಮಸ್ಕ್ ಆರೋಪ ಮಾಡಿದ್ದಾರೆ. ಅಧ್ಯಕ್ಷ ಟ್ರಂಪ್ ಅವರನ್ನು ವಾಗ್ದಂಡನೆಗೆ ಗುರಿ ಮಾಡಬೇಕು ಎಂಬ ಬೇಡಿಕೆಗೆ 'ಎಕ್ಸ್'ನಲ್ಲಿ ಬೆಂಬಲವನ್ನೂ ಘೋಷಿಸಿದ್ದಾರೆ. ಕೆಲಕಾಲದ ನಂತರ ಮಸ್ಕ್, ಆ ಎಕ್ಸ್ ಪೋಸ್ಟ್‌ಗಳನ್ನು ತೆಗೆದುಹಾಕಿದರೂ ಅದು ಅಮೆರಿಕದಲ್ಲಿ ಸಂಚಲನವನ್ನೇ ಉಂಟುಮಾಡಿದೆ.



ಮಸ್ಕ್ ಅವರು ಡಿಒಜಿಇ ಹುದ್ದೆ ತೊರೆಯುವ ಸಂದರ್ಭದಲ್ಲಿ ಟ್ರಂಪ್ ಅವರು ಚಿನ್ನದ ಬೀಗದ ಕೀ ಉಡುಗೊರೆ ನೀಡಿದ್ದರು

ರಾಜಕೀಯ ಪಕ್ಷ ಆರಂಭಿಸಲಿದ್ದಾರೆಯೇ ಮಸ್ಕ್?

ಇಂತಹ ಚರ್ಚೆಯೊಂದು ಈಗ ಅಮೆರಿಕದಲ್ಲಿ ನಡೆಯುತ್ತಿದೆ. ಟ್ರಂಪ್ ಜೊತೆಗೆ ಸಂಬಂಧ ಹಳಸಿದ ನಂತರ ಮಸ್ಕ್ ಅವರು 'ಎಕ್ಸ್'ನಲ್ಲಿ ತಮ್ಮ ಫಾಲೊವರ್ಸ್‌ಗೆ ಈ ಬಗ್ಗೆ ಪ್ರಶ್ನೆಯೊಂದನ್ನು ಕೇಳಿದ್ದಾರೆ.

'ಅಮೆರಿಕದ ಶೇ 80ರಷ್ಟು ಜನರನ್ನು ಪ್ರತಿನಿಧಿಸುವ ಹೊಸ ರಾಜಕೀಯ ಪಕ್ಷವನ್ನು ಸ್ಥಾಪಿಸಲು ಇದು ಸರಿಯಾದ ಸಮಯವೇ' ಎಂಬ ಪ್ರಶ್ನೆಗೆ, 'ಎಕ್ಸ್'ನಲ್ಲಿ ಮಸ್ಕ್ ಅವರನ್ನು ಹಿಂಬಾಲಿಸುವ ಶೇ 80ರಷ್ಟು ಮಂದಿ 'ಹೌದು' ಎಂದು ಉತ್ತರಿಸಿದ್ದಾರೆ.

ಶೇ 80ರಷ್ಟು ಮಂದಿ ಹಿಂಬಾಲಕರು ತಮ್ಮ ಪ್ರಸ್ತಾವದ ಪರವಾಗಿ ಮಾತನಾಡಿರುವುದನ್ನೂ ಅವರು ಎಕ್ಸ್‌ನಲ್ಲಿ ಹಂಚಿಕೊಂಡಿದ್ದು, 'ದಿ ಅಮೆರಿಕ ಪಾರ್ಟಿ' ಎಂಬ ಹೆಸರನ್ನೂ ಇಟ್ಟಿದ್ದಾರೆ.

ಭರವಸೆಯೇ ಬಾಳಿನ ಬೆಳಕು

ನುಡಿ ಬೆಳಗು



ದಾದಾಪೀರ್ ನವಿಲೇಹಾಳ್

ಕುರುಕ್ಷೇತ್ರ ಮುಗಿದ ನಂತರ ಧರ್ಮರಾಯ ಇನ್ನೇನೂ ಸಮಸ್ಯೆಯಿಲ್ಲ ಎಂದುಕೊಂಡು ದರ್ಬಾರಿನಲ್ಲಿ ವಿರಾಜಮಾನನಾಗಿರುವಾಗ ರೈತರಿಬ್ಬರು ಬರುತ್ತಾರೆ. ಅವರಿಬ್ಬರ ನಡುವೆ ಒಂದು ತಗಾದೆಯಿದೆ. ಒಬ್ಬ ರೈತ ತನ್ನ ಜಮೀನನ್ನು ಇನ್ನೊಬ್ಬನಿಗೆ ಮಾರಿದ್ದಾನೆ. ತಾನು ಖರೀದಿಸಿದ ಹೊಲದಲ್ಲಿ ಉಳುಮೆ ಮಾಡುವಾಗ ಅವನಿಗೆ ಕೊಪ್ಪರಿಗೆಯಷ್ಟು ನಿಧಿ ದೊರೆತಿದೆ. ಅವನು ಜಮೀನು ಕೊಟ್ಟ ರೈತನ ಬಳಿ ಸೀದಾ ಬಂದು ನಿಧಿಯನ್ನು ತಂದೊಪ್ಪಿಸಿದ. ತಾನು ಜಮೀನು ಮಾತ್ರ ಖರೀದಿಸಿರುವುದಾಗಿಯೂ ಅದರಲ್ಲಿ ದೊರೆತ ನಿಧಿ ನನಗೆ ಸೇರತಕ್ಕದ್ದಲ್ಲವೆಂದೂ ಹೇಳಿ ಹೊರಟ. ತಕ್ಷಣವೇ ಜಮೀನು ಮಾರಿದ ರೈತ ಆತನನ್ನು ನಿಲ್ಲಿಸಿ ನಿಧಿಯನ್ನು ನಿರಾಕರಿಸುತ್ತಾನೆ. ನಾನು ಜಮೀನು ಮಾರಿರುವುದಾಗಿಯೂ ಅದರಲ್ಲಿ ದೊರೆಯುವ ಯಾವುದೂ ನನ್ನದಲ್ಲವೆಂದೂ ಹೇಳುತ್ತಾನೆ. ನಾನೊಲ್ಲೆ ನಾನೊಲ್ಲೆ ಎಂದು ಶುರುವಾದ ಇವರಿಬ್ಬರ ನಡುವಿನ ವಾದ ಧರ್ಮರಾಯನ ದರ್ಬಾರಿಗೆ ಬಂದು ನ್ಯಾಯ ತೀರ್ಮಾನಕ್ಕಾಗಿ ಕಾದಿದೆ.

ಅನಾಯಾಸವಾಗಿ ದೊರೆತ ಸಂಪತ್ತು ನಮಗೆ ಬೇಡ ಎಂದು ನಿರಾಕರಿಸುವ ಪ್ರಜೆಗಳು ತನ್ನ ರಾಜ್ಯಭಾರದ ದೇಶದಲ್ಲಿರುವುದು ಧರ್ಮರಾಯನಿಗೆ ಒಳಗೊಳಗೇ ಹೆಮ್ಮೆ. ಹಾಗಂತ ಹಿಗ್ಗಿ ಸುಮ್ಮನಿರುವಂತಿಲ್ಲ. ಇಬ್ಬರಿಗೂ ಸಮ್ಮತವಾದ ನ್ಯಾಯ ಒದಗಿಸಬೇಕು. ಧರ್ಮರಾಯ ನೀಡುವ ನ್ಯಾಯದಲ್ಲಿ ಲೋಪವಿರಬಾರದು, ಅದು ಎಂದೆಂದೂ ಮಾದರಿಯಾಗಿರಬೇಕು. ರಾಜ ಯೋಚಿಸುತ್ತಾನೆ. ತಾನು ಇಂದು ನೀಡಬೇಕಾದ ನ್ಯಾಯ ನಾಳೆಯೂ ಯೋಗ್ಯವಾಗಿರಬೇಕು. ತಗಾದೆಯಲ್ಲಿ ಇರುವ ಇಬ್ಬರಲ್ಲಿ ಒಬ್ಬರದಾದರೂ ತಪ್ಪಿರಬೇಕು. ಆಗ ನ್ಯಾಯದಾನ ಸುಲಭ. ಇಲ್ಲಿ ಹಾಗಿಲ್ಲ. ಮೇಲೆ ಕೆಳಗೆ ತೂಗಿ ಧರ್ಮರಾಯ ಆ ಇಬ್ಬರೂ ರೈತರಿಗೆ ನಾಳೆ ಬರುವಂತೆ ಸೂಚಿಸುತ್ತಾನೆ. ಪಕ್ಕದಲ್ಲಿ ಕುಳಿತಿದ್ದ ಭೀಮ ಕಿಸಕ್ಕನೆ ನಗುತ್ತಾನೆ. ಧರ್ಮರಾಯ ನಕ್ಕಿದ್ದು ಯಾಕೆಂದು ಕೇಳುತ್ತಾನೆ. ಭೀಮನ ಉತ್ತರ :'ಆ ರೈತರಿಗೆ ನಾಳೆ ಬರಲು ಹೇಳಿದೆಯಲ್ಲಾ, ನಾಳೆ ನಾವೆಲ್ಲಾ ಬದುಕಿರುವ ಭರವಸೆಯಾದರೂ ಏನು?'


ಭೀಮನ ಪ್ರಶ್ನೆ ನಿರಾಕರಿಸಲಾಗದ ಸತ್ಯವನ್ನು ಹೇಳುತ್ತದೆ ನಿಜ, ಆದರೆ ಭೂಮಿಯಲ್ಲಿ ಹುಟ್ಟಿರುವ ಎಲ್ಲರೂ ನಾಳೆಗಳ ಭರವಸೆಯಲ್ಲಿಯೇ ಬದುಕಿನ ಅನನ್ಯ ಚೈತನ್ಯವನ್ನು ಕಂಡುಕೊಳ್ಳುವುದು ಸಹಜ. ನಾಳೆ ಅಂದರೆ ಅದು ಕೇವಲ ಬೆಳಗು ಬೈಗುಗಳ ದಿನ ಮಾತ್ರವಲ್ಲ. ಅಲ್ಲಿ ನಾವು ರೂಪಿಸಿಕೊಂಡ ಯೋಜನೆಗಳಿವೆ, ಕನಸುಗಳಿವೆ, ಲೆಕ್ಕಾಚಾರಗಳಿವೆ. ಇವುಗಳನ್ನು ಸಾಧಿಸಲು ಅಗತ್ಯವಾದ ಭರವಸೆಯಿದೆ. ಭರವಸೆಯೇ ಇಲ್ಲದೆ ಹೋದರೆ ಬದುಕಿಗೆ ಏನರ್ಥ? ಪ್ರಕೃತಿಯ ಚಟುವಟಿಕೆಗಳು ನಮ್ಮಲ್ಲಿ ಬದುಕುವ ಚೈತನ್ಯವನ್ನು ಇಮ್ಮಡಿಗೊಳಿಸುತ್ತವೆ. ಸದಾ ಬೆಳಗುವ ಸೂರ್ಯ ಭೂಮಿಗೆ ಸಮೃದ್ಧಿಯನ್ನು ಸೌಂದರ್ಯವನ್ನು ಸುರಿಯುತ್ತಾನೆ. ರೈತರು ಮುಗಿಲತ್ತ ನೋಡಿ ಮಳೆ ಬರುತ್ತದೆಂದು ಬಿತ್ತುವುದಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಾರೆ. ರಾತ್ರಿ ಮಲಗುತ್ತಲೇ ಬೆಳಗಾಗುತ್ತದೆ ಬೇಗ ಎದ್ದೇಳಬೇಕು ಎದ್ದ ತಕ್ಷಣ ಏನೇನು ಮಾಡಬೇಕೆಂದು ಯೋಜಿಸುತ್ತಾರೆ. ಇದೆಲ್ಲವೂ ಗಟ್ಟಿಯಾದ ಭರವಸೆಯಿಂದಲೇ ನಡೆಯುತ್ತದೆ. ನಿಜವಾದ ಅರ್ಥದಲ್ಲಿ ಭರವಸೆಯೇ ಬಾಳಿನ ಬೆಳಕು. ಧರ್ಮರಾಯ ಅಂಥ ಭರವಸೆಯಿಂದಲೇ ನ್ಯಾಯದಾನ ನಿರೀಕ್ಷೆಯಲ್ಲಿದ್ದ ರೈತರಿಗೆ ನಾಳೆ ಬರಲು ಸೂಚಿಸಿದ.

ಇದಕ್ಕೆ ಇನ್ನೂ ಒಂದು ಆಯಾಮವಿದೆ. ನ್ಯಾಯ ಕೊಡಬೇಕಾದವರು ಒಂದಲ್ಲ ಹತ್ತು ಬಾರಿ ಯೋಚಿಸಿ ಸರಿತಪ್ಪುಗಳ ತುಲನೆ ಮಾಡಬೇಕಾಗುತ್ತದೆ. ನ್ಯಾಯ ಪಡೆಯಬೇಕಾದವರ ಹಿನ್ನೆಲೆ ಮತ್ತು ಯೋಗ್ಯತೆಯನ್ನು ಪರಿಶೀಲಿಸಬೇಕಾಗುತ್ತದೆ. ಇನ್ಯಾರೋ ಕೊಡುವ ನ್ಯಾಯ ತೀರ್ಮಾನವನ್ನು ಸಮಾಜ ಅಥವಾ ಕಾಲ ಅಷ್ಟು ಸೂಕ್ಷ್ಮವಾಗಿ ಗಮನಿಸುವುದಿಲ್ಲ. ಆದರೆ ಆಳುವವರು, ಅದರಲ್ಲೂ ನೈತಿಕವಾಗಿ ಎತ್ತರದ ಸ್ಥಾನದಲ್ಲಿರುವ ಧರ್ಮರಾಯನಂಥವರು ಕೊಡುವ ತೀರ್ಮಾನ ಕಾಲಾತೀತವಾಗಿರಬೇಕೆಂದು ನಿರೀಕ್ಷಿಸಲಾಗುತ್ತದೆ. ಯಾಕೆಂದರೆ ಧರ್ಮರಾಯ ಪ್ರತಿನಿಧಿಸುವ ಪರಂಪರೆ ಉನ್ನತವಾದುದು. ಈ ಎಲ್ಲದರ ಭಾರವನ್ನು ಧರ್ಮರಾಯನ ನ್ಯಾಯ ಹೊರಬೇಕಾಗುತ್ತದೆ. ಮತ್ತು ನಾಳೆ ಬನ್ನಿ ಎಂದು ಹೇಳುವ ಮಾತು ಭವಿಷ್ಯದಲ್ಲಿ ನ್ಯಾಯದಾನ ಮಾಡುವವರ ಹೊಣೆಗಾರಿಕೆಯನ್ನೂ ನ್ಯಾಯದ ಗುಣಗೌರವವನ್ನೂ ಸೂಚಿಸುತ್ತದೆ. ನಾಳೆ ಎಂಬ ಭರವಸೆಯನ್ನು ಯಾರೂ ಹಗುರವಾಗಿ ಪರಿಗಣಿಸಬಾರದು ಎಂಬ ಆಶಯವೂ ಅದರಲ್ಲಿದೆ.

ಮಾಗಿದ ಬದುಕು ಗೊನೆ ಬಿಟ್ಟ ಬಾಳೆಯಂತೆ. ಗೊನೆ ಕಡಿದರೆ ಮುಂದೇನು ಎಂದು ಯೋಚಿಸದೆ ತನ್ನ ಬುಡದಲ್ಲಿ ಬೆಳೆದ ಹಿಂಡು ಹಿಳ್ಳುಗಳಲ್ಲಿ ಪ್ರಾಣವೂರಿ ಹಿಗ್ಗುವ ಗುಣ ಭರವಸೆಯಿಂದಲೇ ಬರುತ್ತದೆ.

ರಾಷ್ಟ್ರೀಯ

ಅಂತರಿಕ್ಷಯಾನ ಅದ್ಭುತ: ಗಗನಯಾತ್ರಿ ಶುಭಾಂಶು



ಶುಭಾಂಶು ಶುಕ್ಲಾ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದತ್ತ (ಐಎಸ್‌ಎಸ್) ಪ್ರಯಾಣ ಬೆಳೆಸಲಿರುವ ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ 'ಇದೊಂದು ಅದ್ಭುತ ಪಯಣ' ಎಂದು ಬಣ್ಣಿಸಿದ್ದಾರೆ. 'ಈ ಬಾಹ್ಯಾಕಾಶ ಕಾರ್ಯಾಚರಣೆಯ ಭಾಗವಾಗಿರುವ ನಾನು ಅದೃಷ್ಟಶಾಲಿ' ಎಂದಿದ್ದಾರೆ.

ಭಾರತೀಯ ವಾಯುಪಡೆಯ ಪೈಲಟ್, 39 ವರ್ಷದ ಶುಭಾಂಶು ಶುಕ್ಲಾ ಅವರು ಅಂತರಿಕ್ಷಯಾನ ಕೈಗೊಳ್ಳಲಿರುವ ಭಾರತದ ಎರಡನೇ ಗಗನಯಾನಿಯಾಗಿದ್ದಾರೆ. 1984ರಲ್ಲಿ ಭಾರತದ ರಾಕೇಶ್ ಶರ್ಮಾ ಅವರು ರಷ್ಯಾದ ಗಗನನೌಕೆಯಲ್ಲಿ ಗಗನಯಾನ ಕೈಗೊಂಡಿದ್ದರು. 41 ವರ್ಷಗಳ ಬಳಿಕ, ಭಾರತದ ಮತ್ತೊಬ್ಬ ಗಗನಯಾನಿ ಬಾಹ್ಯಾಕಾಶಕ್ಕೆ ತೆರಳುತ್ತಿದ್ದಾರೆ.

ಜೂನ್ 10ರಂದು ಬೆಳಿಗ್ಗೆ 5.52ಕ್ಕೆ ಫ್ಲಾರಿಡಾದಲ್ಲಿರುವ ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಸ್ಪೇಸ್‌ಎಕ್ಸ್‌ನ ಫಾಲ್ಕನ್ –9 ರಾಕೆಟ್, ಗಗನಯಾನಿಗಳಿರುವ 'ಡ್ರ್ಯಾಗನ್' ವ್ಯೋಮನೌಕೆಯನ್ನು ಹೊತ್ತು ಐಎಸ್‌ಎಸ್‌ನತ್ತ ಹಾರಲಿದೆ. ಜೂನ್ 11ರಂದು ತಡರಾತ್ರಿ 12.30ಕ್ಕೆ (ಭಾರತೀಯ ಕಾಲಮಾನ ರಾತ್ರಿ 10.30) ಡ್ರ್ಯಾಗನ್ ಐಎಸ್‌ಎಸ್‌ನೊಂದಿಗೆ ಜೋಡಣೆ (ಡಾಕಿಂಗ್) ಗೊಳ್ಳಲಿದೆ.

'ಆ್ಯಕ್ಸಿಯಂ-4' ಕಾರ್ಯಕ್ರಮದ ಭಾಗವಾಗಿ ಐಎಸ್‌ಎಸ್‌ಗೆ ತೆರಳುತ್ತಿರುವ ಶುಕ್ಲಾ ಅವರೊಂದಿಗೆ, ಕಮಾಂಡರ್ ಪೆಗ್ಗಿ ವಿಟ್ಸನ್, ಹಂಗರಿಯ ಟಿಬೊರ್ ಕಾಪು ಹಾಗೂ ಪೋಲೆಂಡ್‌ನ ಸ್ಲಾವೋಸ್ ಯು. ವಿಸ್ನಿವ್ಸ್ಕಿ ಪಯಣಿಸಲಿದ್ದಾರೆ.

'ಇದು ಅದ್ಭುತವಾದ ಪಯಣವಾಗಿದೆ. ನಿಮಗಿಂತ ದೊಡ್ಡದಾಗಿರುವ ಯಾವುದೋ ಒಂದರ ಭಾಗವಾಗುತ್ತಿದ್ದೀರಿ ಎಂದು ಹೇಳುವ ಕ್ಷಣಗಳಿವು. ಇದರ ಭಾಗವಾಗಲು ನಾನು ಎಷ್ಟೊಂದು ಅದೃಷ್ಟಶಾಲಿ ಎಂದಷ್ಟೇ ಹೇಳಬಲ್ಲೆ' ಎಂದು ಶುಕ್ಲಾ ಅವರು ಆ್ಯಕ್ಸಿಮಾ ಸ್ಪೇಸ್ ಬಿಡುಗಡೆ ಮಾಡಿರುವ ಕಿರು ವಿಡಿಯೊದಲ್ಲಿ ಹೇಳಿದ್ದಾರೆ.

'ಶುಕ್ಸ್' ಎಂಬ ಅಡ್ಡ ಹೆಸರಿನಿಂದ ಕರೆಯಲ್ಪಡುವ ಶುಕ್ಲಾ ಅವರು ಲಖನೌದಲ್ಲಿ ಜನಿಸಿದವರು.

'ಶುಕ್ಸ್‌ನ ಬುದ್ಧಿವಂತಿಕೆ ಹಾಗೂ ಜ್ಞಾನವು ಅವರಿಗೆ 130 ವರ್ಷ ವಯಸ್ಸಾಗಿರಬಹುದು ಎಂದು ತೋರಿಸುತ್ತದೆ' ಎಂದು ಬಣ್ಣಿಸುತ್ತಾರೆ 1980ರಿಂದ ಅಂತರಿಕ್ಷಯಾನ ಕೈಗೊಳ್ಳುತ್ತಿರುವ ಹಂಗೇರಿಯಾದ ಗಗನಯಾನಿ ಟಿಬೊರ್ ಕಾಪು.

'ಡ್ರ್ಯಾಗನ್' ವ್ಯೋಮನೌಕೆಯಲ್ಲಿ ನನ್ನ ಪೈಲಟ್ ಆಗಿ ಶುಕ್ಲಾ ಇರುವುದು ಅದ್ಭುತವಾದ ಸಂಗತಿ. ಬಾಹ್ಯಾಕಾಶ ನೌಕೆಯ ತಂತ್ರಜ್ಞಾನ ವಿಷಯದಲ್ಲಿ ಅವರು ಅಪರಿಮಿತ ಜ್ಞಾನ ಹೊಂದಿದ್ದಾರೆ' ಎಂದು ಅವರು ಶ್ಲಾಘಿಸಿದ್ದಾರೆ.



ಭೂಕುಸಿತ ಸಂಭವಿಸಿರುವ ಚಾಟನ್ ಪ್ರದೇಶದ ನಿವಾಸಿಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಯಿತು ಪಿಟಿಐ ಚಿತ್ರ


ಸಿಕ್ಕಿಂನಲ್ಲಿ ಭೂಕುಸಿತ: 28 ಜನರು, 20 ಸೈನಿಕರ ಸ್ಥಳಾಂತರ

ಗ್ಯಾಂಗ್ಟಕ್ (ಪಿಟಿಐ): ಭಾರಿ ಮಳೆಯಿಂದ ಉಂಟಾದ ಹಲವು ಭೂಕುಸಿತಗಳಿಂದಾಗಿ, ರಸ್ತೆ ಸಂಪರ್ಕ ಕಡಿತಗೊಂಡಿರುವ ಉತ್ತರ ಸಿಕ್ಕಿಂನ ಚಾಟೆನ್‌ನಲ್ಲಿ ಸಿಲುಕಿದ್ದ 28 ಜನರು ಮತ್ತು 20 ಸೈನಿಕರನ್ನು ಭಾನುವಾರ ಸ್ಥಳಾಂತರಿಸಲಾಗಿದೆ.

ಸ್ಥಳೀಯರು ಸೇರಿದಂತೆ ಟ್ಯಾಕ್ಸಿ ಚಾಲಕರು ಮತ್ತು ಚಾಟೆನ್‌ನಲ್ಲಿ ನೆಲಸಿದ್ದ ಸರ್ಕಾರಿ ಅಧಿಕಾರಿಗಳನ್ನು ಸ್ಥಳಾಂತರಿಸಲು ಹೆಲಿಕಾಪ್ಟರ್ ನಿಯೋಜಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಮೂವರು ಬಾಲಕರು ಸೇರಿದಂತೆ 28 ಜನರನ್ನು ಯಶಸ್ವಿಯಾಗಿ ಸ್ಥಳಾಂತರಿಸಲಾಗಿದೆ. ಇವರೆಲ್ಲರೂ ಸುರಕ್ಷಿತವಾಗಿದ್ದಾರೆ. ಹೆಲಿಕಾಪ್ಟರ್ ಬಳಸಿ ಎರಡು ಸುತ್ತಿನ ರಕ್ಷಣಾ ಕಾರ್ಯಾಚರಣೆ ನಡೆಸಲಾಯಿತು. ಮೊದಲ ಸುತ್ತಿನಲ್ಲಿ ನಾಗರಿಕರು ಮತ್ತು ಎರಡನೇ ಸುತ್ತಿನಲ್ಲಿ ಸೈನಿಕರನ್ನು ಸ್ಥಳಾಂತರ ಮಾಡಲಾಯಿತು' ಎಂದು ಮಾಹಿತಿ ನೀಡಿದ್ದಾರೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಜೂನ್ 9, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ತ್ರಯೋದಶಿ ಗಂ. 9-36 ನಕ್ಷತ್ರ: ವಿಶಾಖ ಗಂ.15-31 ಯೋಗ: ಶಿವ ಗಂ. 13-09 ಕರಣ: ತೈತಿಲ ಗಂ. 9-36, ವೃಷಭ ಮಾಸದ 26 ನೇ ದಿನ. ಮಳೆ ನಕ್ಷತ್ರ : ಮೃಗಶಿರ 1ನೇ ಪಾದ.

ರಾಹುಕಾಲ : ಬೆಳಿಗ್ಗೆ 07-30 – 09-00

ಸೂರ್ಯೋದಯ : 06-07 **ಸೂರ್ಯಾಸ್ತ :** 06-53

ಮುಸ್ಲಿಂ ದಿನಾಂಕ : 12 ಜುಲ್‌ಹಿಜಾ

ಅದೃಷ್ಟ ಸಂಖ್ಯೆ : 5, 9

ಮೇಷ: ಮನುಷ್ಯ ಪ್ರಯತ್ನದ ಜತೆ ದೇವರ ಮೊರೆ ಹೋಗುವುದರಿಂದ ಕಾರ್ಯ ಸಿದ್ಧಿಯಾಗಲಿದೆ. ಎದುರಾಳಿಗಳು ಮರುಪ್ರಶ್ನೆಯನ್ನು ಮಾಡಲಾಗದಂಥ ಮಾತುಗಳನ್ನು ಆಡುವಿರಿ. ಉದ್ಯೋಗದ ಗೆಲುವು ನಿಮ್ಮದೆ ಆಗಿರುತ್ತದೆ.

ವೃಷಭ: ಕೆಲ ಯೋಜನೆಗಳನ್ನು ಹೊರತುಪಡಿಸಿದರೆ ಎಲ್ಲವೂ ಸಾಂಗವಾಗಿ ನೆರವೇರುತ್ತವೆ. ನಿಮ್ಮ ವಾಕ್ಚಟುತ್ವವು ಸರಿಯಾದ ಸಮಯಕ್ಕೆ ಸಹಾಯಕ್ಕೆ ಬರಲಿದೆ.

ಮಿಥುನ: ಮನೆಯನ್ನು ನಿರ್ಮಾಣ ಮಾಡುವ ಅಥವಾ ನವೀಕರಿಸುವಂತಹ ಆಲೋಚನೆಯಲ್ಲಿ ತೊಡಗುವಿರಿ. ಅಂತರಾತ್ಮದ ಮಾತನ್ನು ಕೇಳುವುದರಿಂದ ಶ್ರೇಯಸ್ಸು ಉಂಟಾಗುತ್ತದೆ. ಸಣ್ಣ ಕೈಗಾರಿಕೆ ಉದ್ಯಮಿಗಳಿಗೆ ಲಾಭವಿದೆ.

ಕರ್ಕಾಟಕ: ಮೇಲಧಿಕಾರಿಗಳಲ್ಲಿ ವೇತನ ಹೆಚ್ಚಳದ ಬಗ್ಗೆ ಮನೋಭಿಲಾಷೆಗಳನ್ನು ವ್ಯಕ್ತಪಡಿಸಲು ಹಿಂಜರಿಯಬೇಡಿ. ಪುಸ್ತಕ ಮುದ್ರಣಾಲಯದವರಿಗೆ ಅಥವಾ ಪುಸ್ತಕದ ವ್ಯಾಪಾರಿಗಳಿಗೆ ಒಳ್ಳೆಯ ಲಾಭ.

ಸಿಂಹ: ಸ್ವ ಉದ್ಯೋಗಿಗಳಿಂದ ಅಪೇಕ್ಷೆಯ ರೀತಿಯಾಗಿ ಧನಸಹಾಯ ಸಿಗಲಿದೆ. ಕಾನೂನಿನ ವಿದ್ಯಾರ್ಥಿಗಳು ವ್ಯಾಸಂಗಕ್ಕಾಗಿ ವಿದೇಶಕ್ಕೆ ತೆರಳುವ ಅವಕಾಶ ಒದಗಲಿದೆ. ಪ್ರಯಾಣದಲ್ಲಿ ವಿಳಂಬವಾಗುತ್ತದೆ.

ಕನ್ಯಾ: ಆಡಳಿತ ಕೆಲಸಗಳಿಗೆ ಸೂಕ್ತ ವ್ಯಕ್ತಿಯನ್ನು ತಿಳಿಸುವಂತೆ ಪರಿಚಿತರಲ್ಲಿ ಕೇಳಿಕೊಳ್ಳುವುದರಿಂದ ಸುಲಭವಾಗಿ ಫಲ ಸಿಗುವುದು. ರಾಜಕೀಯ ವ್ಯಕ್ತಿಗಳಿಗೆ ಓಡಾಟ ಹೆಚ್ಚಲಿದೆ. ಶುಭಕ್ಕಾಗಿ ದುರ್ಗಾಪರಮೇಶ್ವರಿಯನ್ನು ಆರಾಧಿಸಿ.

ತುಲಾ: ವ್ಯವಸ್ಥಿತವಾಗಿ ದಿನಚರಿ ರೂಪಿಸಿಕೊಂಡರೆ ಈಗಾಗಲೇ ಆರಂಭಿಸಿರುವ ಯೋಜನೆಗಳು ಸಂಪೂರ್ಣ ಶುಭಫಲದೊಂದಿಗೆ ಪೂರ್ಣಗೊಳ್ಳಲಿವೆ. ಚಲನಚಿತ್ರ ಯಶಸ್ವಿಗೊಂಡು ಲಾಭ ಗಳಿಸುವಂತೆ ಆಗುವುದು.

ವೃಶ್ಚಿಕ: ಅಭಿಪ್ರಾಯಗಳಿಗೆ ಮನ್ನಣೆ ಇದೆಯೇ ಎಂಬುದನ್ನು ಮೊದಲು ಖಚಿತಪಡಿಸಿಕೊಂಡು ಹಿತವಚನಗಳನ್ನು ಹೇಳಲು ಮುಂದುವರಿಯಿರಿ. ನ್ಯಾಯಾಧೀಶರಿಗೆ ಅನಿವಾರ್ಯದ ಸಂದರ್ಭ ಎದುರಾಗಲಿದೆ.

ಧನು: ಮನೆಯಲ್ಲಿ ಶಾಂತ ವಾತಾವರಣವಿದ್ದು, ನಿಧಾನಗತಿಯ ಕಾರ್ಯಗಳು ಚುರುಕಾಗಿ ಮನಸ್ಸಿಗೆ ತುಸು ನೆಮ್ಮದಿ ಬರುವುದು. ಜಮೀನು ಕೊಡುಕೊಳ್ಳುವಿಕೆ ವ್ಯವಹಾರಗಳು ಹೆಚ್ಚಲಿವೆ. ಅದರಲ್ಲಿ ಲಾಭವಾಗುವುದು.

ಮಕರ: ಕೌಟುಂಬಿಕವಾಗಿ ತೀರ್ಮಾನ ತೆಗೆದುಕೊಳ್ಳುವ ವಿಚಾರದಲ್ಲಿ ಏಕಮುಖವಾದ ನಿರ್ಧಾರವಾಗಲಿ, ಆತುರವಾಗಲಿ ಬೇಡ. ಸಿಹಿತಿಂಡಿ ವ್ಯಾಪಾರಿಗಳಿಗೆ ಲಾಭದ, ನಷ್ಟದ ಮಿಶ್ರಫಲ ಅನುಭವಕ್ಕೆ ಬರಲಿದೆ.

ಕುಂಭ: ಬರಬೇಕಾಗಿದ್ದ ಹಣಕ್ಕೆ ತುಸು ಅಡಚಣೆಗಳನ್ನು ನಿವಾರಿಸಿಕೊಳ್ಳಬೇಕಾಗುವುದು. ಉದ್ಯೋಗದಲ್ಲಿ ಸಮಾಧಾನ ಸಿಗದಿದ್ದರೂ ಆರ್ಥಿಕವಾಗಿ ತೊಂದರೆಗಳಾಗುವುದಿಲ್ಲ. ನಿರುದ್ಯೋಗಿಗಳಿಗೆ ಉತ್ತಮ ಕೆಲಸ ದೊರೆಯಲಿದೆ.

ಮೀನ: ಬಂಧುಮಿತ್ರರೊಂದಿಗೆ ಸಂತೋಷ ವಿಷಯಗಳನ್ನು ಹಂಚಿಕೊಳ್ಳುವುದು ಸರಿಯಲ್ಲ. ದಿನಗೂಲಿ ಕಾರ್ಮಿಕ ವರ್ಗದವರಿಗೆ ಪರಿಶ್ರಮದಿಂದ ಆದಾಯ ಸಿಗಲಿದೆ. ಸರ್ಕಾರಿ ಕೆಲಸಗಳಲ್ಲಿ ಅಡೆತಡೆ ಎದುರಾಗಬಹುದು.

ಪದಬಂಧ 6068


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗೆ ಜಯವಿದ್ದರೂ ಇದು ಸೋಲು (4)
3.ಸಿಂಹವನ್ನು ಹೀಗೂ ಕರೆಯುತ್ತಾರೆ (4)
5.ಈತ ಲಗ್ನವಾಗುತ್ತಿರುವವನು (4)
7.ಉತ್ಸುಕತೆ ಈ ತರಹ ಬಂದಿದೆ (3)
8.ನೆಲೆಗೊಳಿಸುವುದು (5)
11.ಮತಿ ಇಟ್ಟುಕೊಂಡು ನೀಡಿದ ಒಪ್ಪಿಗೆ (3)
12.ಈತ ಹಂಚಿಕೆದಾರ (4)
15.ಪಾಂಡವರಿಗೂ ಕೌರವರಿಗೂ ಯುದ್ಧ ನಡೆದ ಸ್ಥಳ (4)
16.ಲೆಕ್ಕ ಬರೆಯುವವನು ಇಲ್ಲಿದ್ದಾನೆ (4)

ಮೇಲಿಂದ ಕೆಳಕ್ಕೆ

1.ರಾಜನ ಗೃಹವಿದು (4)
2.ವಿರಳವಾಗಿ ಜನ್ಮ ಬಂದಿದೆ (3)
3.ತಾಮ್ರವೂ ತವರವೂ ಸೇರಿ ಆದ ಮಿಶ್ರ ಲೋಹ (2)
4.ನಡುವೆ ನಿಂತು ಜೀ ಎನ್ನುತ್ತಿರುವ ಮಂತ್ರಿ (3)
6.ಗರ ಬಡಿದಂತಿರುವ ಪತಿವ್ರತೆ (3)
7.ಕಾಮನಿಂದ ಮೂಡಿದ ಅತಿಯಾದ ಆಸೆ (3)
8.ಏಳಿಗೆಯನ್ನು ಹೀಗೆನ್ನಿ (3)
9.ಪದ ಹೇಳಿ ಪಡೆದ ಡಿಗ್ರಿ (3)
10.ಇದು ಕಳಂಕವಿಲ್ಲದ್ದು (4)
11.ಸರಕ್ಕನೆ ತಂದ ಸಾಮಾನು (3)
13.ಆಸಕ್ತನಾದವನು ತರದೊಳಗಿದ್ದಾನಲ್ಲಾ (3)
14.ತಾಪತ್ರಯ ದಲ್ಲಿದ್ದಾಗ ಬರೆದ ಓಲೆ (2)



6067ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ರಸನ 3.ಉತ್ತರ 5.ಭಾವ 6.ಸರಿ 8.ನಸುಕು 9.ತವಕ 11.ಕಮರಿ 12.ವಿಧಾತ 13.ಗುಲಾಮ 15.ಪಾದುಕೆ 17.ಯಮ 19.ಹಾನಿ 20.ತಿಲಕ 21.ರುಮಾಲು

ಮೇಲಿಂದ ಕೆಳಕ್ಕೆ:
1.ರವ 2.ನಯನ 3.ಉಸುಕು 4.ರಸ 5.ಭಾರತ 7.ರಿಪೇರಿ 10.ಕಡಿತ 11.ಕರಗು 12.ವಿಷಯ 14.ಮಯನಿ 15.ಪಾತಕ 16.ಕೆಸರು 18.ಮತಿ 19.ಹಾಲು

ಸುಡೊಕು 6452

	4				1		2	
8		7		3				9
		5			9		8	3
	6					3		8
	7	4	1	8	3			
3						5		1
	8		3		4		1	
		1		9		8		4
4	3		5			2		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6451 ಸುಡೊಕು

8	3	1	6	7	2	5	4	9
6	9	2	5	4	1	8	7	3
5	4	7	3	8	9	2	1	6
4	7	8	9	6	5	3	2	1
3	6	9	2	1	8	4	5	7
2	1	5	4	3	7	9	6	8
1	5	6	8	2	3	7	9	4
7	2	3	1	9	4	6	8	5
9	8	4	7	5	6	1	3	2

ಸಂಕ್ಷಿಪ್ತ ಸುದ್ದಿ

ಬಿಒಬಿ, ಎಚ್‌ಡಿಎಫ್‌ಸಿ ಬ್ಯಾಂಕ್ ಬಡ್ಡಿ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡ (ಬಿಒಬಿ) ಮತ್ತು ಖಾಸಗಿ ವಲಯದ ಎಚ್‌ಡಿಎಫ್‌ಸಿ ಬ್ಯಾಂಕ್ ಸಾಲದ ಮೇಲಿನ ಬಡ್ಡಿ ದರವನ್ನು ಕಡಿತಗೊಳಿಸಿವೆ.

ಪರಿಷ್ಕೃತ ಬಡ್ಡಿ ದರವು ಜೂನ್ 7ರಿಂದ ಜಾರಿಗೆ ಬಂದಿದೆ ಎಂದು ಬ್ಯಾಂಕ್‌ಗಳು ಭಾನುವಾರ ತಿಳಿಸಿವೆ.

ಬ್ಯಾಂಕ್ ಆಫ್ ಬರೋಡ ರೆಪೊ ಆಧರಿತ ಸಾಲದ ಬಡ್ಡಿ ದರವನ್ನು (ಆರ್‌ಎಲ್‌ಎಲ್‌ಆರ್) ಶೇ 0.50ರಷ್ಟು ತಗ್ಗಿಸಿದೆ. ಬಡ್ಡಿ ದರ ಶೇ 8.15 ಇದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಮಾರ್ಜಿನಲ್ ಕಾಸ್ಟ್ ಆಫ್ ಫಂಡ್ ಆಧಾರಿತ ಸಾಲದ (ಎಂಸಿಎಲ್‌ಆರ್) ಮೇಲಿನ ಬಡ್ಡಿದರವನ್ನು ಶೇ 0.10ರಷ್ಟು ಕಡಿತಗೊಳಿಸಿದ್ದು, ಶೇ 8.90 ಆಗಿದೆ.

ಮೂರು ತಿಂಗಳ ಬಡ್ಡಿ ದರ ಶೇ 8.95, ಆರು ತಿಂಗಳು ಮತ್ತು ಒಂದು ವರ್ಷದ ಬಡ್ಡಿ ದರ ಶೇ 9.05 ಆಗಿದೆ. ಎರಡು ಮತ್ತು ಮೂರು ವರ್ಷದ ಸಾಲದ ಬಡ್ಡಿ ದರ ಶೇ 9.20ರಿಂದ ಶೇ 9.10ಕ್ಕೆ ಇಳಿದಿದೆ ಎಂದು ಬ್ಯಾಂಕ್ ತಿಳಿಸಿದೆ.

ನವೋದ್ಯಮಗಳಿಗೆ ಹೂಡಿಕೆ ಕೊರತೆ: ಪೈ

ನವದೆಹಲಿ (ಪಿಟಿಐ): ಸರ್ಕಾರದ ನಿಯಮಗಳ ಕಾರಣದಿಂದಾಗಿ ಭಾರತದ ನವೋದ್ಯಮಗಳಿಗೆ ಭಾರತದಲ್ಲಿಯೇ ಹೂಡಿಕೆ ಸಿಗುತ್ತಿಲ್ಲ. ಇದು ಅವುಗಳಿಗೆ ಅಡ್ಡಿಯಾಗಿ ಪರಿಣಮಿಸಿದೆ ಎಂದು ಆರಿನ್ ಕ್ಯಾಪಿಟಲ್‌ನ ಅಧ್ಯಕ್ಷ ಮೋಹನದಾಸ್ ಪೈ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಭಾರತವು ವಿಶ್ವದಲ್ಲಿ ಮೂರನೇ ಅತಿದೊಡ್ಡ ನವೋದ್ಯಮ ಕೇಂದ್ರವಾಗಿದೆ. ಹೀಗಿದ್ದರೂ, ಈ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳದೆ ಇದ್ದರೆ ಜಾಗತಿಕ ಮಟ್ಟದಲ್ಲಿ ಹೊಸತನವನ್ನು ಕಂಡುಕೊಳ್ಳುವ ಸ್ಪರ್ಧೆಯಲ್ಲಿ ಭಾರತವು ಹಿಂದುಳಿಯುವ ಅಪಾಯ ಇದೆ ಎಂದು ಪೈ ಹೇಳಿದ್ದಾರೆ.

'ನಮ್ಮಲ್ಲಿ 1.65 ಲಕ್ಷ ನೋಂದಾಯಿತ ನವೋದ್ಯಮಗಳಿವೆ. 22 ಸಾವಿರ ನವೋದ್ಯಮಗಳಿಗೆ ಹೂಡಿಕೆ ಸಿಕ್ಕಿದೆ. ಅವೆಲ್ಲ ಒಟ್ಟು 600 ಬಿಲಿಯನ್ ಡಾಲರ್ (₹51 ಲಕ್ಷ ಕೋಟಿ) ಮೌಲ್ಯ ಸೃಷ್ಟಿಸಿವೆ. ಆದರೆ ಅಗತ್ಯ ಪ್ರಮಾಣದ ಬಂಡವಾಳ ಸಿಗದಿರುವುದು ನವೋದ್ಯಮಗಳ ಅತಿದೊಡ್ಡ ಸಮಸ್ಯೆ' ಎಂದು ಅವರು ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಎಲ್‌ಐಸಿಗೆ ಹೊಸ ಸಿಇಒ ನೇಮಕ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಆಗಿ ಸತ್ಪಾಲ್ ಭಾನೂ ಅವರನ್ನು ಜಾರಿಗೆ ಬರುವಂತೆ ನೇಮಿಸಲಾಗಿದೆ. ಈ ಹಿಂದಿನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಆಗಿದ್ದ ಸಿದ್ಧಾರ್ಥ ಮೊಹಂತಿ ಅವರ ಅಧಿಕಾರಾವಧಿಯು ಜೂನ್ 7ರಂದು ಮುಕ್ತಾಯಗೊಂಡಿದೆ. ಇವರು 1985ರಲ್ಲಿ ಎಲ್‌ಐಸಿಗೆ ಸೇರ್ಪಡೆಗೊಂಡಿದ್ದರು. ಇವರಿಂದ ತೆರವಾಗಿರುವ ಈ ಸ್ಥಾನಕ್ಕೆ ಹಣಕಾಸು ಸೇವೆಗಳ ಇಲಾಖೆಯು ಭಾನೂ ಅವರನ್ನು ನೇಮಿಸಿದೆ.

ಭಾನೂ ಅವರು ಎಲ್‌ಐಸಿಯ ನಾಲ್ಕು ವ್ಯವಸ್ಥಾಪಕ ನಿರ್ದೇಶಕರ ಪೈಕಿ ಹಿರಿಯರಾಗಿದ್ದಾರೆ. ಭಾನೂ ಅವರ ಅಧಿಕಾರಾವಧಿಯು ಸೆಪ್ಟೆಂಬರ್ 7 ಅಥವಾ ಹೊಸ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ನೇಮಕವಾಗುವವರೆಗೆ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಗೋಲ್ಡ್ ಇಟಿಎಫ್: ಹೂಡಿಕೆ ಹೇಗೆ?



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಹೂಡಿಕೆಗೆ ₹100 ಇದೆ ಎಂದಾದರೆ ಅದರಲ್ಲಿ ಕನಿಷ್ಠ ₹10 ಚಿನ್ನದ ಮೇಲೆ ತೊಡಗಿಸಬೇಕು ಎನ್ನುವುದು ಒಂದು ಲೆಕ್ಕಾಚಾರ. ಬಂಗಾರದ ಮೇಲೆ ಹೂಡಿಕೆ ಅಂತ ಬಂದಾಗ ಬಹುತೇಕರು ಒಡವೆ ಚಿನ್ನ, ಚಿನ್ನದ ನಾಣ್ಯ, ಚಿನ್ನದ ಬಿಸ್ಕೆಟ್‌ಗಳನ್ನು ಖರೀದಿಸುತ್ತಾರೆ. ಆದರೆ ಈ ರೀತಿಯ ವಸ್ತುರೂಪದ ಚಿನ್ನ ಕೊಂಡಾಗ ವೇಸ್ಟೇಜ್, ತಯಾರಿಕಾ ವೆಚ್ಚ, ಜಿಎಸ್‌ಟಿ ಹೀಗೆ ಹಲವು ಹೊರೆಗಳು ಬೀಳುತ್ತವೆ. ಜೊತೆಗೆ ಚಿನ್ನವನ್ನು ಸುರಕ್ಷಿತವಾಗಿ ಇಟ್ಟುಕೊಳ್ಳಲು ಪ್ರತಿ ವರ್ಷ ಬ್ಯಾಂಕ್ ಲಾಕರ್ ಶುಲ್ಕ ತೆರಬೇಕಿರುವುದರಿಂದ ಹೆಚ್ಚಿನ ಲಾಭ ಗಳಿಕೆ ಸಾಧ್ಯವಾಗುವುದಿಲ್ಲ. ಹಳದಿ ಲೋಹದ ಮೇಲಿನ ಹೂಡಿಕೆಗೆ ಈಗಿನ ಸಂದರ್ಭದಲ್ಲಿ ಹಲವು ಡಿಜಿಟಲ್ ಆಯ್ಕೆಗಳಿವೆ. ಅಂತಹ ಒಂದು ಪ್ರಮುಖ ಮಾದರಿ ಗೋಲ್ಡ್ ಇಟಿಎಫ್. ಗೋಲ್ಡ್ ಇಟಿಎಫ್‌ನಲ್ಲಿ ಹೂಡಿಕೆ ಮಾಡುವುದು ಹೇಗೆ ಎನ್ನುವುದನ್ನು ವಿವರವಾಗಿ ತಿಳಿಯೋಣ.

ಏನಿದು ಗೋಲ್ಡ್ ಇಟಿಎಫ್?: ಗೋಲ್ಡ್ ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್ ಎನ್ನುವುದು ಗೋಲ್ಡ್ ಇಟಿಎಫ್‌ನ ವಿಸ್ತೃತ ರೂಪ. ಷೇರು ಮಾರುಕಟ್ಟೆಯಲ್ಲಿ ಹೇಗೆ ವಿವಿಧ ಕಂಪನಿಗಳ ಷೇರುಗಳ ಖರೀದಿ ಮತ್ತು ಮಾರಾಟ ನಡೆಯುವುದೋ ಅದೇ ರೀತಿ ಗೋಲ್ಡ್ ಇಟಿಎಫ್‌ಗಳ ವಹಿವಾಟನ್ನು ಷೇರುಪೇಟೆಯಲ್ಲಿ ನಡೆಸಬಹುದು. ಚಿನ್ನದ ಬೆಲೆ ಏರಿಕೆಯಾದಂತೆ ಗೋಲ್ಡ್ ಇಟಿಎಫ್‌ಗಳ ಮೌಲ್ಯ ಹೆಚ್ಚಾಗುತ್ತದೆ. ಅದರ ಬೆಲೆ ತಗ್ಗಿದಂತೆಲ್ಲಾ ಗೋಲ್ಡ್ ಇಟಿಎಫ್ ಮೌಲ್ಯವೂ ಇಳಿಕೆಯಾಗುತ್ತದೆ. ಷೇರು ಮಾರುಕಟ್ಟೆಯಲ್ಲಿ ಲಭ್ಯವಿರುವ ಗೋಲ್ಡ್ ಇಟಿಎಫ್‌ಗಳ ಮೂಲಕ ನೀವು ಬಂಗಾರದ ಮೇಲೆ ಹೂಡಿಕೆ ಮಾಡಲು ಸಾಧ್ಯವಿದೆ. ಒಂದು ಗೋಲ್ಡ್ ಇಟಿಎಫ್ ಒಂದು ಗ್ರಾಂ ಚಿನ್ನಕ್ಕೆ ಸರಿಸಮಾನವಾಗಿರುತ್ತದೆ. ಆದರೆ ಅದಕ್ಕಿಂತ ಕಡಿಮೆ ಮೊತ್ತಕ್ಕೆ ಇಟಿಎಫ್ ಯೂನಿಟ್‌ಗಳನ್ನು ಖರೀದಿಸಲು ಸಾಧ್ಯವಿದೆ. ಉದಾಹರಣೆಗೆ, ಬಹುತೇಕ ಇಟಿಎಫ್‌ಗಳಲ್ಲಿ ₹85ರಿಂದ ₹90ಯಿಂದಲೇ ಹೂಡಿಕೆ ಆರಂಭಿಸಬಹುದಾಗಿದೆ. ಗೋಲ್ಡ್ ಇಟಿಎಫ್‌ಗಳು ಹೂಡಿಕೆದಾರರ ಮೊತ್ತಕ್ಕೆ ಪ್ರತಿಯಾಗಿ ಘನರೂಪದ ಚಿನ್ನ ಖರೀದಿಸುತ್ತವೆ.

ಇಟಿಎಫ್ ಹೂಡಿಕೆ ವಿಶೇಷತೆ: ಗೋಲ್ಡ್ ಇಟಿಎಫ್‌ಗಳು ನೇರವಾಗಿ ಚಿನ್ನದ ಮೇಲೆ ಹೂಡಿಕೆ ಮಾಡುತ್ತವೆ ಮತ್ತು ಇವನ್ನು ಖರೀದಿಸಲು ಡಿ-ಮ್ಯಾಟ್ ಖಾತೆ ಅತ್ಯಗತ್ಯ. ಗೋಲ್ಡ್ ಇಟಿಎಫ್‌ಗಳಲ್ಲಿ ವೆಚ್ಚ ಅನುಪಾತ (ಎಕ್ಸ್‌ಪೆನ್ಸ್ ರೇಷಿಯೊ) ಶೇ 0.30ರಿಂದ ಶೇ 1ರಷ್ಟಿರುತ್ತದೆ. ಅಂದರೆ ಗೋಲ್ಡ್ ಮ್ಯೂಚುವಲ್ ಫಂಡ್‌ಗಳಿಗಿಂತ ಇಟಿಎಫ್‌ಗಳಲ್ಲಿ ವೆಚ್ಚ ಅನುಪಾತ ಕಡಿಮೆ. ಷೇರು ಮಾರುಕಟ್ಟೆಯಲ್ಲಿ ಚಾಲ್ತಿಯ ಸಮಯದಲ್ಲಿ ಗೋಲ್ಡ್ ಇಟಿಎಫ್‌ಗಳ ಖರೀದಿ ಮತ್ತು ಮಾರಾಟ ಸಾಧ್ಯವಿರುವುದರಿಂದ ಹಣದ ಅಗತ್ಯವಿದ್ದಾಗ ನಗದೀಕರಣ ಸುಲಭ. ಗೋಲ್ಡ್ ಇಟಿಎಫ್‌ಗಳಲ್ಲಿ ಹೂಡಿಕೆ ಮಾಡಿ 12 ತಿಂಗಳಿಗಿಂತ ಹೆಚ್ಚು ಸಮಯವಾಗಿದ್ದರೆ ಗಳಿಕೆ ಮೇಲೆ ಶೇ 12.5 ರಷ್ಟು ಎಲ್‌ಟಿಸಿಜಿ ತೆರಿಗೆ ಅನ್ವಯಿಸುತ್ತದೆ. ಇಟಿಎಫ್‌ಗಳಲ್ಲಿ ಹೂಡಿಕೆ ಮಾಡಿ 12 ತಿಂಗಳ ಒಳಗೇ ಮಾರಾಟ ಮಾಡಿದರೆ ಹೂಡಿಕೆದಾರನ ತೆರಿಗೆ ಹಂತಕ್ಕೆ ಅನುಗುಣವಾಗಿ ತೆರಿಗೆ ಕಟ್ಟಬೇಕು. ಷೇರು ಪೇಟೆಯಲ್ಲಿ ಹತ್ತಾರು ಕಂಪನಿಗಳ ಗೋಲ್ಡ್ ಇಟಿಎಫ್‌ಗಳಿವೆ. ಐಸಿಐಸಿಐ ಪ್ರೂಡೆನ್ಶಿಯಲ್ ಗೋಲ್ಡ್ ಇಟಿಎಫ್, ನಿಪ್ಪಾನ್ ಇಂಡಿಯಾ ಇಟಿಎಫ್ ಗೋಲ್ಡ್ ಬೀಸ್, ಜೆರೋಧಾ ಗೋಲ್ಡ್ ಇಟಿಎಫ್ ಈ ಹೂಡಿಕೆಯ ಕೆಲ ಉದಾಹರಣೆಗಳು.

ಷೇರುಪೇಟೆ

ಚಿನ್ನದ ಮೇಲೆ ಹೂಡಿಕೆ ಏಕೆ?: ಸಾಮಾನ್ಯವಾಗಿ ಷೇರು ಮಾರುಕಟ್ಟೆ ಕುಸಿತ ಕಂಡಾಗ ಚಿನ್ನದ ಬೆಲೆ ಸ್ಥಿರವಾಗಿ ನಿಲ್ಲುತ್ತದೆ, ಇಲ್ಲವಾದರೆ ಗಣನೀಯವಾಗಿ ಏರಿಕೆ ಕಾಣುತ್ತದೆ. ಬೆಲೆ ಏರಿಕೆ, ಮಾರುಕಟ್ಟೆ ಏರಿಳಿತ, ಯುದ್ಧ ಸಂದರ್ಭ ಹೀಗೆ ನಾನಾ ಸನ್ನಿವೇಶಗಳಲ್ಲಿ ಚಿನ್ನವು ಹೂಡಿಕೆದಾರರ ಕೈ ಹಿಡಿದಿದೆ. ಐತಿಹಾಸಿಕ ಅಂಕಿ-ಅಂಶಗಳನ್ನು ನೋಡಿದಾಗ ಹೂಡಿಕೆದಾರರಿಗೆ ಬಂಗಾರ ಅತ್ಯುತ್ತಮ ಗಳಿಕೆ ತಂದುಕೊಟ್ಟಿದೆ. ಕ್ಯಾಪಿಟಲ್ ಮೈಂಡ್ ಅನಾಲಿಸಿಸ್ ಮಾಡಿರುವ ಅಧ್ಯಯನದ ಪ್ರಕಾರ 1970ರಿಂದ 2025ರವರೆಗಿನ 55 ವರ್ಷಗಳ ದತ್ತಾಂಶ ನೋಡಿದಾಗ ಚಿನ್ನ ಬರೋಬ್ಬರಿ ವಾರ್ಷಿಕ ಸರಾಸರಿ ಶೇ 13.3ರಷ್ಟು ಗಳಿಕೆ ಒದಗಿಸಿದೆ. ಷೇರು ಮಾರುಕಟ್ಟೆಯ ಐತಿಹಾಸಿಕ ಗಳಿಕೆ ನೋಡಿದಾಗ ವಾರ್ಷಿಕ ಸರಾಸರಿ ಶೇ 11.70ರಷ್ಟು ಲಾಭ ಹೂಡಿಕೆದಾರರಿಗೆ ಸಿಕ್ಕಿದೆ. ಅಂದರೆ, ದೀರ್ಘಾವಧಿಯಲ್ಲಿ ಷೇರು ಮಾರುಕಟ್ಟೆಯ ಗಳಿಕೆಯನ್ನೂ ಮೀರಿ ಚಿನ್ನ ಹೂಡಿಕೆದಾರರಿಗೆ ಲಾಭ ತಂದುಕೊಟ್ಟಿರುವುದು ಕಂಡುಬರುತ್ತದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

(ಗೋಲ್ಡ್ ಇಟಿಎಫ್ ಹೂಡಿಕೆ ಅವಕಾಶ ಒದಗಿಸುವ ಕೆಲವು ಕಂಪನಿಗಳ ಹೆಸರನ್ನು ಲೇಖನದಲ್ಲಿ ಮಾಹಿತಿಗೆ ಮಾತ್ರವೇ ಉಲ್ಲೇಖಿಸಲಾಗಿದೆ.)

ರೆಪೊ ದರ ಇಳಿಕೆ, ಪುಟಿದೆದ್ದ ಷೇರುಪೇಟೆ

ಜೂನ್ 6ರಂದು ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ. 82,188 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.91ರಷ್ಟು ಗಳಿಸಿಕೊಂಡಿದೆ. 25,003 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 1.02ರಷ್ಟು ಗಳಿಸಿಕೊಂಡಿದೆ. ಇನ್ನು ನಿಫ್ಟಿ ಮಿಡ್ ಕ್ಯಾಪ್ ಸೂಚ್ಯಂಕ ಶೇ 2.77ರಷ್ಟು ಜಿಗಿದಿದ್ದರೆ, ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 3.91ರಷ್ಟು ಏರಿಕೆಯಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರ ಮತ್ತು ನಗದು ಮೀಸಲು ಅನುಪಾತ (ಸಿಆರ್‌ಆರ್) ದರಗಳನ್ನು ಕಡಿಮೆ ಮಾಡಿದ ಪರಿಣಾಮ ಮಾರುಕಟ್ಟೆ ಪುಟಿದೆದ್ದಿದೆ.

ವಾರದ ಅವಧಿಯಲ್ಲಿ ವಲಯವಾರು ಪ್ರಗತಿ ನೋಡಿದಾಗ ರಿಯಲ್ ಎಸ್ಟೇಟ್ ಶೇ 9.51, ಲೋಹ ಶೇ 2.32, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 1.78, ಬ್ಯಾಂಕ್ ನಿಫ್ಟಿ ಶೇ 1.49, ಆಟೊ ಶೇ 1.44, ಫೈನಾನ್ಸ್ ಶೇ 1.32, ಫಾರ್ಮಾ ಶೇ 1.13, ಸರ್ವಿಸಸ್ ಶೇ 1.11, ಎಫ್‌ಎಂಸಿಜಿ ಶೇ 0.94ರಷ್ಟು ಗಳಿಸಿಕೊಂಡಿವೆ. ನಿಫ್ಟಿ ಮಾಧ್ಯಮ ಶೇ 0.32 ಮತ್ತು ಐ.ಟಿ ಶೇ 0.07ರಷ್ಟು ಇಳಿಕೆ ದಾಖಲಿಸಿವೆ.

ಇಳಿಕೆ – ಗಳಿಕೆ: ನಿಫ್ಟಿ 50ಯಲ್ಲಿ ವಾರದ ಲೆಕ್ಕಾಚಾರ ನೋಡಿದಾಗ ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಶೇ 2.99, ಟಿಸಿಎಸ್ ಶೇ 2.27, ಟಾಟಾ ಸ್ಟೀಲ್ ಶೇ 2.17, ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಶೇ 1.8, ಬಜಾಜ್ ಫಿನ್‌ಸರ್ವ್ ಶೇ 1.07, ಟಾಟಾ ಮೋಟರ್ಸ್ ಶೇ 1.06, ಹೀರೊ ಮೋಟೊಕಾರ್ಪ್ ಶೇ 0.83, ಎಲ್ ಆ್ಯಂಡ್ ಟಿ ಶೇ 0.78, ಏಷ್ಯನ್ ಪೇಂಟ್ಸ್ ಶೇ 0.53, ವಿಪ್ರೊ ಶೇ 0.44 ಮತ್ತು ಎನ್‌ಟಿಪಿಸಿ ಶೇ 0.42ರಷ್ಟು ಕುಸಿದಿವೆ.

ಎಟರ್ನಲ್ ಶೇ 9.72, ಶ್ರೀರಾಮ್ ಫೈನಾನ್ಸ್ ಶೇ 7.62, ಡಾ. ರೆಡ್ಡೀಸ್ ಲ್ಯಾಬ್ಸ್ ಶೇ 5.48, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 4.25, ಅದಾನಿ ಪೋರ್ಟ್ಸ್ ಶೇ 2.72, ಹಿಂಡಾಲ್ಕೋ ಇಂಡಸ್ಟ್ರೀಸ್ ಶೇ 2.61, ಜಿಯೊ ಫೈನಾನ್ಶಿಯಲ್ ಶೇ 2.55, ಸಿಪ್ಲಾ ಶೇ 2.44, ಟ್ರೆಂಟ್ ಶೇ 2.38, ಬಜಾಜ್ ಫೈನಾನ್ಸ್ ಶೇ 2.16, ಪವರ್ ಗ್ರಿಡ್ ಕಾರ್ಪೊರೇಷನ್ ಶೇ 2.05, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 1.75ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಆರ್‌ಬಿಐ ರೆಪೊ ದರ ಕಡಿತದ ಸಕಾರಾತ್ಮಕ ಪರಿಣಾಮ ಮಾರುಕಟ್ಟೆ ಮೇಲೆ ಇರಲಿದೆ. ಮಾರುಕಟ್ಟೆ ಏರುಗತಿಯಲ್ಲಿರುವುದರಿಂದ ಸದ್ಯದ ಸ್ಥಿತಿಯಲ್ಲಿ ಅಳೆದು ತೂಗಿ, ಕುಸಿತ ಕಂಡಾಗ ಉತ್ತಮ ಷೇರುಗಳ ಖರೀದಿಗೆ ಮುಂದಾಗಬಹುದು. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶಿಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಕೆ.ಜಿ)	₹125-488
ದ್ವಿತಳಿ (ಪ್ರ.ಕೆ.ಜಿ)	₹355-625

ಎನ್‌ಇಸಿಸಿ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹610

ಅಮೆರಿಕ ಪ್ರಜೆಗಳಿಗೆ ಚಾಡ್ ವೀಸಾ ಇಲ್ಲ

ಎನ್‌ಜಮೀನ (ಚಾಡ್) (ಎಪಿ/ ರಾಯಿಟರ್ಸ್): ತಮ್ಮ ದೇಶವು ಅಮೆರಿಕದ ಪ್ರಜೆಗಳಿಗೆ ವೀಸಾ ನೀಡುವುದನ್ನು ನಿಲ್ಲಿಸಿದೆ ಎಂದು ಚಾಡ್ ಅಧ್ಯಕ್ಷ ಮಹಮದ್ ಇದ್ರಿಸ್ ಡೆಬಿ ಅವರು ಘೋಷಿಸಿದ್ದಾರೆ.

ಚಾಡ್‌ನ ನಾಗರಿಕರು ಅಮೆರಿಕಕ್ಕೆ ಭೇಟಿ ನೀಡುವುದನ್ನು ನಿಷೇಧಿಸುವ ಡೊನಾಲ್ಡ್ ಟ್ರಂಪ್ ಆಡಳಿತದ ನಿರ್ಧಾರಕ್ಕೆ ಪ್ರತಿಕ್ರಿಯೆಯಾಗಿ, ಈ ನಿರ್ಧಾರ ತೆಗೆದುಕೊಂಡಿದ್ದಾರೆ.

'ಕ್ರಿಯೆಗೆ ತಕ್ಕ ಪ್ರತಿಕ್ರಿಯೆಯಾಗಿ ಅಮೆರಿಕದ ನಾಗರಿಕರಿಗೆ ವೀಸಾ ನೀಡುವುದನ್ನು ಸ್ಥಗಿತಗೊಳಿಸುವಂತೆ ನಮ್ಮ ಸರ್ಕಾರಕ್ಕೆ ನಿರ್ದೇಶನ ನೀಡಿದ್ದೇನೆ' ಎಂದು ಚಾಡ್ ಅಧ್ಯಕ್ಷರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

'ಅಮೆರಿಕಕ್ಕೆ ನೀಡಲು ಚಾಡ್ ಬಳಿ ವಿಮಾನ ಅಥವಾ ಶತಕೋಟಿ ಡಾಲರ್‌ಗಳಿಲ್ಲ. ಆದರೆ, ಚಾಡ್‌ಗೆ ತನ್ನದೇ ಆದ ಘನತೆ ಇದೆ' ಎಂದು ಡೆಬಿ ಹೇಳಿದ್ದಾರೆ. ಟ್ರಂಪ್ ಅವರಿಗೆ ಕತಾರ್ ಐಷಾರಾಮಿ ವಿಮಾನವನ್ನು ಉಡುಗೊರೆಯಾಗಿ ನೀಡಿರುವುದನ್ನು ಉಲ್ಲೇಖಿಸಿ ಅವರು ಹೀಗೆ ಹೇಳಿದ್ದಾರೆ.

ಇಂದಿನಿಂದ ಜಾರಿ (ವಾಷಿಂಗ್ಟನ್ ವರದಿ): ಪ್ರಯಾಣ ನಿಷೇಧಕ್ಕೆ ಸಂಬಂಧಿಸಿದ ಹೊಸ ನಿಯಮವನ್ನು ಅಮೆರಿಕ ಸೋಮವಾರದಿಂದ ಜಾರಿಗೊಳಿಸಿದೆ. ಪ್ರಯಾಣ ನಿಷೇಧ ಪಟ್ಟಿಗೆ 12 ಹೊಸ ದೇಶಗಳನ್ನು ಸೇರಿಸುವ ನಿಯಮಕ್ಕೆ ಟ್ರಂಪ್ ಅವರು ಬುಧವಾರ ಸಹಿ ಹಾಕಿದ್ದರು. ಅಫ್ಗಾನಿಸ್ತಾನ, ಮ್ಯಾನ್ಮಾರ್, ಚಾಡ್, ಕಾಂಗೊ ಗಣರಾಜ್ಯ, ಈಕ್ವಟೋರಿಯಲ್ ಗಿನಿ, ಎರಿಟ್ರಿಯಾ, ಹೈಟಿ, ಇರಾನ್, ಲಿಬಿಯಾ, ಸೊಮಾಲಿಯಾ, ಸುಡಾನ್ ಮತ್ತು ಯೆಮನ್ ದೇಶಗಳ ನಾಗರಿಕರು ಅಮೆರಿಕ ಪ್ರವೇಶಿಸುವುದರ ಮೇಲೆ ಸಂಪೂರ್ಣ ನಿರ್ಬಂಧ ಹೇರಲಾಗಿದೆ.

₹1.68 ಲಕ್ಷ ಕೋಟಿ ವಿದೇಶಿ ಹೂಡಿಕೆ: ಮಹಾರಾಷ್ಟ್ರಕ್ಕೆ ಮೊದಲ ಸ್ಥಾನ

ಎಫ್‌ಡಿಐ: ಕರ್ನಾಟಕಕ್ಕೆ 2ನೇ ಸ್ಥಾನ

ಮುಖ್ಯಾಂಶಗಳು

- ಮಹಾರಾಷ್ಟ್ರ–ಕರ್ನಾಟಕ ಎಫ್‌ಡಿಐ ಪಾಲು ಶೇ 51ರಷ್ಟು
- ಮೂಲಸೌಕರ್ಯ ಕ್ಷೇತ್ರದ ಅಭಿವೃದ್ಧಿ ಹೂಡಿಕೆ ಹೆಚ್ಚಲು ಕಾರಣ
- 2024–25ರಲ್ಲಿ ಒಟ್ಟು ₹6.95 ಲಕ್ಷ ಕೋಟಿ ಎಫ್‌ಡಿಐ

ನವದೆಹಲಿ (ಪಿಟಿಐ): 2024-25ನೇ ಆರ್ಥಿಕ ವರ್ಷದಲ್ಲಿ ದೇಶಕ್ಕೆ ಹರಿದು ಬಂದಿರುವ ಒಟ್ಟು ವಿದೇಶಿ ನೇರ ಬಂಡವಾಳ ಹೂಡಿಕೆಯಲ್ಲಿ (ಎಫ್‌ಡಿಐ) ಕರ್ನಾಟಕ ಮತ್ತು ಮಹಾರಾಷ್ಟ್ರದ ಪಾಲು ಶೇಕಡ 51ರಷ್ಟು ಆಗಿದೆ ಎಂದು ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ (ಡಿಪಿಐಐಟಿ) ಭಾನುವಾರ ತಿಳಿಸಿದೆ.

ದೇಶಕ್ಕೆ ಬಂದ ಒಟ್ಟು ಎಫ್‌ಡಿಐನಲ್ಲಿ ಮಹಾರಾಷ್ಟ್ರದ ಪಾಲು ಶೇ 31ರಷ್ಟು. ಇದು ರಾಜ್ಯಗಳ ಪೈಕಿ ಅತ್ಯಂತ ಹೆಚ್ಚಿನ ಪ್ರಮಾಣ. ಮಹಾರಾಷ್ಟ್ರವು ಒಟ್ಟು ₹1.68 ಲಕ್ಷ ಕೋಟಿ ಎಫ್‌ಡಿಐ ಸ್ವೀಕರಿಸಿದೆ. ಮಹಾರಾಷ್ಟ್ರದ ಬಳಿಕ ಅತಿ ಹೆಚ್ಚು ಎಫ್‌ಡಿಐ ಸ್ವೀಕರಿಸಿದ ರಾಜ್ಯ ಕರ್ನಾಟಕ. ಇದು ಒಟ್ಟು ₹56,794 ಕೋಟಿ ವಿದೇಶಿ ಹೂಡಿಕೆ ಪಡೆದಿದೆ ಎಂದು ಇಲಾಖೆ ತಿಳಿಸಿದೆ.

ನಂತರದ ಸ್ಥಾನಗಳಲ್ಲಿ ದೆಹಲಿ (₹51,475 ಕೋಟಿ), ಗುಜರಾತ್ (₹48,987 ಕೋಟಿ), ತಮಿಳುನಾಡು (₹31,571 ಕೋಟಿ), ಹರಿಯಾಣ (₹26,938 ಕೋಟಿ) ಮತ್ತು ತೆಲಂಗಾಣ (₹25,737 ಕೋಟಿ) ಇವೆ.

ಹೂಡಿಕೆ ಹೆಚ್ಚಲು ಕಾರಣವೇನು?: ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಮೂಲಸೌಕರ್ಯ ವಲಯದಲ್ಲಿ ಗಣನೀಯ ಸುಧಾರಣೆಯಾಗಿದೆ. ಹೆಚ್ಚಿನ ಹೂಡಿಕೆಯಾಗಲು ಇದು ಪ್ರಮುಖ ಕಾರಣವಾಗಿದೆ ಎಂದು ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.

ಈಕ್ವಿಟಿ ಒಳಹರಿವು, ಗಳಿಕೆಯನ್ನು ಮರು ಹೂಡಿಕೆ ಮಾಡಿದ್ದು, ಇತರೆ ಬಂಡವಾಳವನ್ನು ಈ ಎಫ್‌ಡಿಐ ಒಳಗೊಂಡಿದೆ. 2023–24ರ ಆರ್ಥಿಕ ವರ್ಷದಲ್ಲಿ ₹6.11 ಕೋಟಿ ವಿದೇಶಿ ನೇರ ಹೂಡಿಕೆ ಆಗಿತ್ತು. 2024–25ರ ಆರ್ಥಿಕ ವರ್ಷದಲ್ಲಿ ಈ ಹೂಡಿಕೆ ಪ್ರಮಾಣದಲ್ಲಿ ಶೇ 14ರಷ್ಟು ಏರಿಕೆಯಾಗಿದ್ದು, ₹6.95 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ಲಾಸ್ ಏಂಜಲೀಸ್: ನಿಲ್ಲದ ಪ್ರತಿಭಟನೆ

ವಲಸಿಗರ ವಿರುದ್ಧ ಶೋಧ ಕಾರ್ಯಾಚರಣೆ; 44 ಜನ ಸೆರೆ



ಲಾಸ್ ಏಂಜಲೀಸ್‌ನಲ್ಲಿ ಭದ್ರತಾ ಸಿಬ್ಬಂದಿ ಪ್ರತಿಭಟನಕಾರರ ವಿರುದ್ಧ ಅಶ್ರುವಾಯು ಶೆಲ್ ಪ್ರಯೋಗಿಸಿದರು —ಎಪಿ ಚಿತ್ರ

ಲಾಸ್ ಏಂಜಲೀಸ್ (ರಾಯಿಟರ್ಸ್/ ಪಿಟಿಐ): ವಲಸೆ ಅಧಿಕಾರಿಗಳು ಕೈಗೊಂಡಿರುವ ಶೋಧ ಕಾರ್ಯಾಚರಣೆ ವಿರೋಧಿಸಿ ಲಾಸ್ ಏಂಜಲೀಸ್‌ನಲ್ಲಿ ಸತತ ಎರಡನೇ ದಿನವಾದ ಶನಿವಾರವೂ ಪ್ರತಿಭಟನೆ ನಡೆಯಿತು.

ಕಾನೂನು ಸುವ್ಯವಸ್ಥೆ ಕಾಪಾಡಲು ನ್ಯಾಷನಲ್ ಗಾರ್ಡ್ಸ್‌ನ 2 ಸಾವಿರ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಡೊನಾಲ್ಡ್ ಟ್ರಂಪ್ ಸರ್ಕಾರ ತಿಳಿಸಿದೆ. ಲಾಸ್ ಏಂಜಲೀಸ್‌ನಲ್ಲಿ ಹಿಂಸಾಚಾರ ಮುಂದುವರಿದರೆ ಸೇನೆಯನ್ನು ನಿಯೋಜಿಸಲು ಪೆಂಟಗನ್ ಸಿದ್ಧವಾಗಿದೆ ಎಂದು ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಎಚ್ಚರಿಸಿದ್ದಾರೆ.

ಲಾಸ್ ಏಂಜಲೀಸ್‌ನ ಆಗ್ನೇಯ ಭಾಗದಲ್ಲಿ ಪ್ರತಿಭಟನಕಾರರು ಭದ್ರತಾ ಸಿಬ್ಬಂದಿ ಜತೆ ಶನಿವಾರ ಘರ್ಷಣೆಗೆ ಇಳಿದಿದ್ದಾರೆ. ಕೆಲವು ಪ್ರತಿಭಟನಕಾರರು ಮೆಕ್ಸಿಕೊ ದೇಶದ ಧ್ವಜ ಪ್ರದರ್ಶಿಸಿದ್ದಾರೆ. ಶನಿವಾರ ರಾತ್ರಿ ನಡೆದ ಪ್ರತಿಭಟನೆಯಲ್ಲಿ ಸುಮಾರು 60ಕ್ಕೂ ಹೆಚ್ಚು ಮಂದಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದ್ದಾರೆ.

ವಲಸೆ ಮತ್ತು ಕಸ್ಟಮ್ಸ್ ಅಧಿಕಾರಿಗಳು ಲಾಸ್ ಏಂಜಲೀಸ್ ನಗರದ ವಿವಿಧ ಭಾಗಗಳಲ್ಲಿ ಶೋಧ ಕಾರ್ಯಾಚರಣೆ ಕೈಗೊಂಡಿದ್ದು, ವಲಸೆ ನೀತಿ ಉಲ್ಲಂಘಿಸಿದ ಆರೋಪದಲ್ಲಿ 44 ಮಂದಿಯನ್ನು ಶುಕ್ರವಾರ ಬಂಧಿಸಿದ್ದಾರೆ. ಇದರ ಬೆನ್ನಲ್ಲೇ ಪ್ರತಿಭಟನೆ ಆರಂಭವಾಗಿದೆ.

'ಶುಕ್ರವಾರ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಸಾವಿರಕ್ಕೂ ಅಧಿಕ ಮಂದಿಯು ಭದ್ರತಾ ಸಿಬ್ಬಂದಿ ಹಾಗೂ ವಲಸೆ ಅಧಿಕಾರಿಗಳ ಜತೆ ಘರ್ಷಣೆಗೆ ಇಳಿದಿದ್ದರು' ಎಂದು ಆಂತರಿಕ ಭದ್ರತಾ ಇಲಾಖೆ ತಿಳಿಸಿದೆ.

ಆದರೆ ನ್ಯಾಷನಲ್ ಗಾರ್ಡ್ಸ್‌ನ ಸಿಬ್ಬಂದಿಯನ್ನು ನಿಯೋಜಿಸುವ ಟ್ರಂಪ್ ಅವರ ನಿರ್ಧಾರವನ್ನು ಕ್ಯಾಲಿಫೋರ್ನಿಯಾ ಗವರ್ನರ್ ಗ್ಯಾವಿನ್ ನ್ಯೂಸಮ್ ಟೀಕಿಸಿದ್ದಾರೆ. 'ಉದ್ದೇಶಪೂರ್ವಕವಾಗಿ ಪ್ರಚೋದನೆ ಉಂಟುಮಾಡುವ ಕ್ರಮ' ಎಂದು ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. 'ನಮ್ಮಲ್ಲಿ ಭದ್ರತಾ ಸಿಬ್ಬಂದಿಯ ಕೊರತೆಯಿಲ್ಲ. ಅವರು (ಟ್ರಂಪ್) ಪ್ರಚಾರವನ್ನು ಬಯಸುತ್ತಾರೆ' ಎಂದು ಹೇಳಿದ್ದಾರೆ.

ಕಾಶ್ ಪಟೇಲ್ ಎಚ್ಚರಿಕೆ: ಪ್ರತಿಭಟನೆ ಹೆಸರಿನಲ್ಲಿ ಪೊಲೀಸರ ಜತೆ ಸಂಘರ್ಷಕ್ಕೆ ಇಳಿಯುವವರನ್ನು ಜೈಲಿಗೆ ಅಟ್ಟಲಾಗುವುದು ಎಂದು ಅಮೆರಿಕದ ತನಿಖಾ ಸಂಸ್ಥೆ ಎಫ್‌ಬಿಐ ನಿರ್ದೇಶಕರಾದ ಕಾಶ್ ಪಟೇಲ್ ಎಚ್ಚರಿಸಿದ್ದಾರೆ.

ಸಾರ್ವಜನಿಕ ಸ್ಥಳದ ಒತ್ತುವರಿ ಮುಂದುವರಿಸುವಂತಿಲ್ಲ: ಹೈಕೋರ್ಟ್

ನವದೆಹಲಿ (ಪಿಟಿಐ): ಒತ್ತುವರಿ ಮಾಡಿಕೊಂಡಿರುವವರು ತಮಗೆ ಪುನರ್ವಸತಿ ಕಲ್ಪಿಸಿಕೊಡುವವರೆಗೂ ಸಾರ್ವಜನಿಕ ಆಸ್ತಿಯ ಒತ್ತುವರಿಯನ್ನು ಮುಂದುವರಿಸುವ ಹಕ್ಕನ್ನು ಪಡೆಯಲು ಸಾಧ್ಯವಿಲ್ಲ ಎಂದು ದೆಹಲಿ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ದಕ್ಷಿಣ ದೆಹಲಿಯ ಕಾಲ್ಕಾಜಿಯಲ್ಲಿರುವ ಭೂಮಿಹೀನ್ ಕ್ಯಾಂಪ್‌ನಲ್ಲಿ ಒತ್ತುವರಿ ತೆರವು ಪ್ರಕ್ರಿಯೆಯನ್ನು ಕಾನೂನಿನ ಪ್ರಕಾರ ಮುಂದುವರಿಸುವ ಅಧಿಕಾರವನ್ನು ದೆಹಲಿ ಅಭಿವೃದ್ಧಿ ಪ್ರಾಧಿಕಾರಕ್ಕೆ (ಡಿಡಿಎ) ನೀಡುವಾಗ ಹೈಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

'ಒತ್ತುವರಿ ಮಾಡಿಕೊಂಡಿರುವ ಜಮೀನನ್ನು ತನ್ನಲ್ಲೇ ಇಟ್ಟುಕೊಂಡರೆ ಅದರಿಂದ ಸಾರ್ವಜನಿಕ ಯೋಜನೆಗಳಿಗೆ ಅಡ್ಡಿಯಾಗುತ್ತದೆ. ಆದ್ದರಿಂದ ಒತ್ತುವರಿ ಮಾಡಿಕೊಂಡ ಜಾಗದಲ್ಲಿ ವಾಸ ಮುಂದುವರಿಸಲು ಅರ್ಜಿದಾರರಿಗೆ ಯಾವುದೇ ಕಾನೂನುಬದ್ಧ ಹಕ್ಕು ಇಲ್ಲ' ಎಂದು ನ್ಯಾಯಮೂರ್ತಿ ಧರ್ಮೇಶ್ ಶರ್ಮಾ ಅವರು ಜೂನ್ 6ರಂದು ಹೊರಡಿಸಿದ ಆದೇಶದಲ್ಲಿ ತಿಳಿಸಿದ್ದಾರೆ.

ಒತ್ತುವರಿ ತೆರವು ಪ್ರಕ್ರಿಯೆ ಸ್ಥಗಿತಗೊಳಿಸಿ ಸ್ಥಳದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಮತ್ತು ಅರ್ಜಿದಾರರನ್ನು ಬಲವಂತವಾಗಿ ಹೊರಹಾಕದಂತೆ ಡಿಡಿಎಗೆ ನಿರ್ದೇಶನ ನೀಡಬೇಕೆಂದು ಕೋರಿ ಸುಮಾರು 1,200 ಜನರು ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸಿದ ಹೈಕೋರ್ಟ್ ಈ ತೀರ್ಪು ನೀಡಿದೆ.

ಭೂಮಿಹೀನ್ ಕ್ಯಾಂಪ್‌ನಲ್ಲಿರುವ ಸುಮಾರು ಮೂರು ದಶಕಗಳಷ್ಟು ಹಳೆಯದಾದ ಕೊಳೆಗೇರಿಯು ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಇತರ ರಾಜ್ಯಗಳಿಂದ ವಲಸೆ ಬಂದವರಿಗೆ ನೆಲೆಯಾಗಿತ್ತು.

ಬಿಜೆಪಿ ವಿರುದ್ಧ ಆಕ್ರೋಶ

ಇಲ್ಲಿನ ಮದ್ರಾಸಿ ಕೊಳೆಗೇರಿಯ ತೆರವು ಸ್ಥಳಕ್ಕೆ ಆಮ್ ಆದ್ಮಿ ಪಕ್ಷದ ಸಂಸದ ಸಂಜಯ್ ಸಿಂಗ್ ಮತ್ತು ದೆಹಲಿ ಎಎಪಿ ಘಟಕದ ಅಧ್ಯಕ್ಷ ಸೌರಭ್ ಭಾರದ್ವಾಜ್ ಭಾನುವಾರ ಭೇಟಿ ನೀಡಿ ಸಂಕಷ್ಟಕ್ಕೆ ಸಿಲುಕಿರುವ ನಿವಾಸಿಗಳ ಜೊತೆ ಚರ್ಚಿಸಿದರು. ಇದೇ ವೇಳೆ ದೆಹಲಿಯ ಬಿಜೆಪಿ ಸರ್ಕಾರದ ತೆರವು ಕಾರ್ಯಾಚರಣೆ ವಿರುದ್ಧ ವಾಗ್ದಾಳಿ ನಡೆಸಿದರು.

ಪ್ರಧಾನಿ ಮೋದಿ ಅವರು 'ಎಲ್ಲಿ ಗುಡಿಸಲಿದೆಯೋ ಅಲ್ಲೇ ಮನೆ' ಎಂದು ಭರವಸೆ ನೀಡಿದ್ದರು. ಆದರೆ, ತಾವೂ ಇತರ ಹಲವರಂತೆ ಪೊಳ್ಳು ಎಂಬುದನ್ನು ಸಾಬೀತು ಮಾಡಿದ್ದಾರೆ' ಎಂದು ಎಎಪಿ ನಾಯಕರು ಟೀಕಿಸಿದರು.

'ಮನೆ ಕಟ್ಟಿಕೊಡುವುದಾಗಿ ಹೇಳಿದ್ದ ಬಿಜೆಪಿ ಈಗ ಗುಡಿಸಲುಗಳ ಮೇಲೆ ಬುಲ್ಡೋಜರ್ ಹರಿಸುತ್ತಿದೆ. ಕೊಳಚೆ ಪ್ರದೇಶದ ನಿವಾಸಿಗಳ ಹಕ್ಕು ರಕ್ಷಿಸಲು ಎಎಪಿ ಸಂಸತ್ತಿನವರೆಗೂ ಹೋರಾಟ ಮಾಡುತ್ತದೆ' ಎಂದು ಸೌರಭ್ ಭಾರದ್ವಾಜ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಗ್ರಾಹಕ ವ್ಯಾಜ್ಯಗಳ ಪರಿಹಾರ ವೇದಿಕೆಯ ಪ್ರಶ್ನೆ

ಮಾಂಸಾಹಾರ ಹೋಟೆಲ್‌ನಲ್ಲಿ ಸಸ್ಯಾಹಾರಿ ಏಕೆ ಖರೀದಿಸಬೇಕು?

ಮುಂಬೈ (ಪಿಟಿಐ): ಮಾಂಸಾಹಾರವು ಗ್ರಾಹಕನೊಬ್ಬನ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಎನಿಸುವುದಾದರೆ ಅಪ್ಪಟ ಸಸ್ಯಾಹಾರಿ ವ್ಯಕ್ತಿ ಸಸ್ಯಾಹಾರ ಮತ್ತು ಮಾಂಸಾಹಾರ ಎರಡನ್ನೂ ಪೂರೈಸುವ ಹೋಟೆಲ್‌ಗಳಲ್ಲಿ ಏಕೆ ಖರೀದಿ ಮಾಡಬೇಕು? ಹೀಗೆಂದು ಮುಂಬೈ ಉಪನಗರ ಗ್ರಾಹಕ ವ್ಯಾಜ್ಯಗಳ ಪರಿಹಾರ ವೇದಿಕೆ ಪ್ರಶ್ನೆ ಮಾಡಿದೆ.

'ಒಬ್ಬ ವಿವೇಚನಾಯುಕ್ತ ವ್ಯಕ್ತಿ ಆಹಾರ ಸೇವನೆಗೂ ಮುನ್ನ ಸಸ್ಯಾಹಾರ, ಮಾಂಸಾಹಾರದ ಬಗ್ಗೆ ವಿಂಗಡಿಸುವ ಅವಕಾಶಗಳನ್ನು ಹೊಂದಿದ್ದಾರೆ' ಎಂದು ಕಳೆದ ತಿಂಗಳು ಮುಂಬೈ ಉಪನಗರ ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ವೇದಿಕೆ ಹೇಳಿದೆ.

2020ರ ಡಿಸೆಂಬರ್‌ನಲ್ಲಿ ಸಿಯಾನ್ ರೆಸ್ಟೋರೆಂಟ್ ವಿರುದ್ಧ ಇಬ್ಬರು ವ್ಯಕ್ತಿಗಳು ದೂರು ನೀಡಿದ್ದರು. 'ನಾವು ಡಾರ್ಜಿಲಿಂಗ್ ಮೊಮೊಸ್ ಕಾಂಬೋ ಜೊತೆಗೆ ತಂಪು ಪಾನೀಯ ಖರೀದಿ ಮಾಡಿದ್ದೆವು. ಆದರೆ ಅವರು ಚಿಕನ್ ಡಾರ್ಜಿಲಿಂಗ್ ಮೊಮೊಸ್ ಪೂರೈಸಿದ್ದರು. ಸೂಚನಾ ಫಲಕದಲ್ಲಿ ಸಸ್ಯಾಹಾರಿ ಅಥವಾ ಮಾಂಸಾಹಾರಿ ಎಂದು ಸರಿಯಾಗಿ ಬರೆದಿರಲಿಲ್ಲ. ಕಂಪನಿಯ ನಿರ್ಲಕ್ಷ್ಯದಿಂದ ನಮಗೆ ಮಾನಸಿಕ ಆಘಾತವಾಗಿದೆ. ನಮ್ಮ ಧಾರ್ಮಿಕ ಭಾವನೆ, ನಂಬಿಕೆಗೆ ಗಾಸಿ ಆಗಿದ್ದು, ₹6 ಲಕ್ಷ ಪರಿಹಾರ ಕೊಡಿಸಿ' ಎಂದು ವೇದಿಕೆಯ ಮೊರೆ ಹೋಗಿದ್ದರು.

'ಗ್ರಾಹಕರಿಗೆ ನೀಡಿದ್ದ ರಶೀದಿಯಲ್ಲೇ ಮಾಂಸಾಹಾರ ಎಂದು ನಮೂದಿಸಿದ್ದೆವು. ಸದ್ಭಾವನೆಯಿಂದ ₹1,200 ಮೌಲ್ಯದ ಗಿಫ್ಟ್ ವೋಚರ್ ನೀಡುವುದಾಗಿ ತಿಳಿಸಿದ್ದೆವು. ಆದರೆ ನಮ್ಮ ಸಿಬ್ಬಂದಿಯನ್ನು ನಿಂದಿಸಿದ್ದ ಗ್ರಾಹಕರು ಹಲ್ಲೆಯನ್ನೂ ಮಾಡಿದ್ದರು. ಅವರು ₹3 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು' ಎಂದು ರೆಸ್ಟೋರೆಂಟ್ ವಾದ ಮಾಡಿತ್ತು.

'ದೂರುದಾರರು ಅಪ್ಪಟ ಸಸ್ಯಾಹಾರಿಗಳಾಗಿದ್ದರೆ, ಮಾಂಸಾಹಾರ ನಿಮ್ಮ ಭಾವನೆಗಳಿಗೆ ಗಾಸಿ ತರುವುದಾದರೆ, ಅವರು ಸಸ್ಯಾಹಾರಿ ಹೋಟೆಲ್‌ನಲ್ಲಿ ಖರೀದಿಸದೇ ಮಾಂಸಾಹಾರ ಮತ್ತು ಸಸ್ಯಾಹಾರ ಎರಡೂ ಇರುವ ಹೋಟೆಲ್ ಅನ್ನು ಏಕೆ ಆಯ್ಕೆ ಮಾಡಿಕೊಳ್ಳಬೇಕಿತ್ತು' ಎಂದು ವೇದಿಕೆ ಪ್ರಶ್ನಿಸಿದೆ.

ದೂರುದಾರರು ಸರಿಯಾದ ಸಾಕ್ಷ್ಯ ಒದಗಿಸದ ಕಾರಣ, ರಶೀದಿಯಲ್ಲಿ ಮಾಂಸಾಹಾರ ಮೊಮೊಸ್ ಎಂಬ ಉಲ್ಲೇಖ ಇದ್ದದ್ದನ್ನು ಪರಿಗಣಿಸಿದ ವೇದಿಕೆಯು ಅರ್ಜಿಗಳನ್ನು ವಜಾಗೊಳಿಸಿದೆ.

ಕೂಟದ ಅಂತಿಮ ದಿನವೂ 6 ಚಿನ್ನದ ಪದಕ ಗೆದ್ದ ಭಾರತದ ಅಥ್ಲೀಟ್‌ಗಳು

ತೈವಾನ್ ಓಪನ್: ಭಾರತ ಪಾರಮ್ಯ

ತೈಪೆ ಸಿಟಿ (ಪಿಟಿಐ): ಭಾರತದ ಅಥ್ಲೀಟ್‌ಗಳು ತೈವಾನ್ ಓಪನ್ ಇಂಟರ್‌ನ್ಯಾಷನಲ್ ಅಥ್ಲೆಟಿಕ್ಸ್ ಕೂಟದ ಅಂತಿಮ ದಿನವಾದ ಭಾನುವಾರ 6 ಚಿನ್ನದ ಪದಕಗಳನ್ನು ಗೆದ್ದರು. ಶನಿವಾರವೂ 6 ಚಿನ್ನ ಗೆದ್ದಿದ್ದ ಭಾರತ, ಕೂಟದಲ್ಲಿ ಪ್ರಾಬಲ್ಯ ಮೆರೆಯಿತು.

ಪುರುಷರ 4x400 ಮೀ. ರಿಲೆ ಸ್ಪರ್ಧೆಯಲ್ಲಿ ಭಾರತ ತಂಡವು ನೂತನ ಕೂಟ ದಾಖಲೆಯೊಂದಿಗೆ ಸ್ವರ್ಣ ಪದಕ ಜಯಿಸಿತು. ಸಂತೋಷ್ ಟಿ., ವಿಶಾಲ್ ಟಿ.ಕೆ., ಧರ್ಮವೀರ್ ಚೌಧರಿ ಹಾಗೂ ಮನು ಟಿ.ಎಸ್. ಅವರನ್ನೊಳಗೊಂಡ ತಂಡ 3 ನಿಮಿಷ, 5.58 ಸೆಕೆಂಡುಗಳಲ್ಲಿ ಗುರಿ ತಲುಪಿತು.

ಮೂರು ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿರುವ ವಿದ್ಯಾ ರಾಮರಾಜ್ ಅವರು ಮಹಿಳೆಯರ 400 ಮೀ. ಹರ್ಡಲ್ಸ್‌ನಲ್ಲಿ ಚಿನ್ನದ ಪದಕ ಪಡೆದುಕೊಂಡರು. ಮೂಲತಃ ತಮಿಳುನಾಡಿನವರಾದ ವಿದ್ಯಾ, ಗುರಿ ಮುಟ್ಟಲು 56.53 ಸೆಕೆಂಡುಗಳನ್ನು ತೆಗೆದುಕೊಂಡರು. ಇದು, ಈ ವರ್ಷದಲ್ಲಿ ಅವರ ಮೂರನೇ ವೈಯಕ್ತಿಕ ಶ್ರೇಷ್ಠ ಸಾಧನೆಯಾಗಿದೆ. ಇದಕ್ಕೂ ಮೊದಲು, ಫೆಡರೇಷನ್ ಕಪ್ ಫೈನಲ್‌ನಲ್ಲಿ 56.04 ಸೆಕೆಂಡುಗಳಲ್ಲಿ ಹಾಗೂ ಏಷ್ಯನ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ 56.46 ಸೆಕೆಂಡುಗಳಲ್ಲಿ ಅವರು ಗುರಿ ಮುಟ್ಟಿದ್ದರು.

ಮಹಿಳೆಯರ 800 ಮೀ. ಓಟದ ಸ್ಪರ್ಧೆಯಲ್ಲಿ ಪೂಜಾ ಅವರು ಕೂಟ ದಾಖಲೆಯೊಂದಿಗೆ (2 ನಿ., 02.79 ಸೆ.) ಸ್ವರ್ಣ ಪದಕ ಜಯಿಸಿದರು. ಭಾರತದವರೇ ಆದ ಟ್ವಿಂಕಲ್ ಚೌಧರಿ ಅವರು 2 ನಿಮಿಷ, 6.96 ಸೆಕೆಂಡುಗಳಲ್ಲಿ ಗುರಿ ತಲುಪಿ, ಬೆಳ್ಳಿ ಪದಕ ಗೆದ್ದರು. ಪುರುಷರ ವಿಭಾಗದ 800 ಮೀ. ಸ್ಪರ್ಧೆಯಲ್ಲಿ ಕೃಷ್ಣ ಕುಮಾರ್ 1 ನಿಮಿಷ, 48.46 ಸೆಕೆಂಡುಗಳಲ್ಲಿ ಗುರಿ ತಲುಪಿ, ಕೂಟ ದಾಖಲೆಯೊಂದಿಗೆ ಚಿನ್ನದ ಪದಕ ತಮ್ಮದಾಗಿಸಿಕೊಂಡರು.

ಪುರುಷರ ವಿಭಾಗದ 400 ಮೀ. ಸ್ಪರ್ಧೆಯಲ್ಲಿ ಯಶಸ್ ಫಾಲಾಕ್ಷ ಅವರು ವೈಯಕ್ತಿಕ ಶ್ರೇಷ್ಠ ಸಾಧನೆಯೊಂದಿಗೆ (49.22 ಸೆ.) ಬೆಳ್ಳಿ ಪದಕ ಪಡೆದುಕೊಂಡರು. ಆತಿಥೇಯ ತೈಪೆಯ ಶುಂಗ್ ವೈ-ಲಿನ್ ಅವರು 49 ಸೆಕೆಂಡುಗಳಲ್ಲಿ ಗುರಿ ತಲುಪಿ, ಚಿನ್ನ ಗಳಿಸಿದರು.

ಮಹಿಳೆಯರ ವಿಭಾಗದ ಉದ್ದ ಜಿಗಿತ ಸ್ಪರ್ಧೆಯಲ್ಲಿ ಭಾರತದ ಶೈಲಿ ಸಿಂಗ್ (6.41 ಮೀ.) ಆ್ಯನ್ಸಿ ಸೋಜನ್ (6.39 ಮೀ.) ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು ಆಸ್ಟ್ರೇಲಿಯಾದ ಡೆಲ್ಟಾ ಅಮಿಝೊವ್‌ಸ್ಕಿ ಅವರು 6.49 ಮೀ. ಜಿಗಿದು ಚಿನ್ನದ ಪದಕ ತಮ್ಮದಾಗಿಸಿಕೊಂಡರು.

ಜಾವೆಲಿನ್‌ನಲ್ಲಿ ಭಾರತ ಪಾರಮ್ಯ: ಪುರುಷರ ವಿಭಾಗದ ಜಾವೆಲಿನ್ ಎಸೆತದಲ್ಲಿ ಭಾರತದ ರೋಹಿತ್ ಯಾದವ್ 74.42 ಮೀ. ದೂರ ಎಸೆದು ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡರು. ತೈಪೆಯ ಯುವಾಂಗ್ ಶಿಹ್-ಫೆಂಗ್ (74.04 ಮೀ.) ಹಾಗೂ ಶೆಂಗ್ ಶಾಯೊ-ಸುನ್ (73.95 ಮೀ.) ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕಕ್ಕೆ ತೃಪ್ತಿಪಟ್ಟರು.

ಮಹಿಳೆಯರ ವಿಭಾಗದ ಸ್ಪರ್ಧೆಯಲ್ಲಿ ಅನ್ನು ರಾಣಿ ಅವರು (56.82 ಮೀ.) ಚಿನ್ನದ ಪದಕ ಪಡೆದುಕೊಂಡರು. ಶ್ರೀಲಂಕಾದ ಹತರಬಗೆ ಲೆಕಮಾಲಾಗೆ (56.62 ಮೀ.) ಬೆಳ್ಳಿ ಹಾಗೂ ಆತಿಥೇಯ ತೈಪೆಯ ಪಿನ್-ಸುನ್ ಶು (53.03 ಮೀ.) ಕಂಚಿನ ಪದಕ ಗೆದ್ದರು.

ಈ ಮೂಲಕ 12 ಚಿನ್ನ, 3 ಬೆಳ್ಳಿ ಹಾಗೂ ಒಂದು ಕಂಚಿನ ಪದಕದೊಂದಿಗೆ ಭಾರತವು ಕೂಟದಲ್ಲಿ ಪಾರಮ್ಯ ಮೆರೆಯಿತು.




ಪುರುಷರ 4x400 ಮೀ. ರಿಲೆ ಸ್ಪರ್ಧೆಯಲ್ಲಿ ಸಂತೋಷ್ ಟಿ., ವಿಶಾಲ್ ಟಿ.ಕೆ., ಧರ್ಮವೀರ್ ಚೌಧರಿ ಹಾಗೂ ಮನು ಟಿ.ಎಸ್. ಅವರನ್ನೊಳಗೊಂಡ ಭಾರತ ತಂಡವು ನೂತನ ಕೂಟ ದಾಖಲೆಯೊಂದಿಗೆ ಸ್ವರ್ಣ ಪದಕ ಜಯಿಸಿತು

ಮುಖ್ಯಾಂಶಗಳು

- ಕೂಟದ ಆರಂಭಿಕ ದಿನವಾದ ಶನಿವಾರವೂ 6 ಚಿನ್ನ ಗೆದ್ದಿದ್ದ ಭಾರತ
- 12 ಚಿನ್ನ, 3 ಬೆಳ್ಳಿ, ಒಂದು ಕಂಚಿನ ಪದಕದೊಂದಿಗೆ ಕೂಟದಲ್ಲಿ ಭಾರತ ಪಾರಮ್ಯ
- ಕೂಟ ದಾಖಲೆ ನಿರ್ಮಿಸಿದ ಪೂಜಾ, ಕೃಷ್ಣ ಕುಮಾರ್, ಪುರುಷರ ರಿಲೆ ತಂಡ



ಯಶಸ್ ಫಾಲಾಕ್ಷ



ಕೃಷ್ಣ ಕುಮಾರ್

ಲಂಡನ್‌ನಲ್ಲಿ ಗಿಲ್ ಬಳಗ ತಾಲೀಮು

ಮುಖ್ಯ ಕೋಚ್ ಗಂಭೀರ್ ಮಾರ್ಗದರ್ಶನದಲ್ಲಿ ಅಭ್ಯಾಸ

ಲಂಡನ್ (ಪಿಟಿಐ): ಶುಭಮನ್ ಗಿಲ್ ನಾಯಕತ್ವದ ಭಾರತ ಕ್ರಿಕೆಟ್ ತಂಡವು ಇಂಗ್ಲೆಂಡ್‌ನಲ್ಲಿ ಭಾನುವಾರ ಅಭ್ಯಾಸ ಆರಂಭಿಸಿತು.

ಇದೇ 20ರಿಂದ ಲೀಡ್ಸ್‌ನಲ್ಲಿ ಭಾರತ ಮತ್ತು ಇಂಗ್ಲೆಂಡ್ ತಂಡ ಟೆಸ್ಟ್ ಸರಣಿ ಆರಂಭವಾಗಲಿದೆ. ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ. ಅದರಿಂದಾಗಿ ಯುವ ಆಟಗಾರರೇ ಹೆಚ್ಚಿನ ಸಂಖ್ಯೆಯಲ್ಲಿರುವ ತಂಡವು ಕಣಕ್ಕಿಳಿಯಲಿದೆ.

ನಾಯಕ ಗಿಲ್, ಉಪನಾಯಕ ರಿಷಭ್ ಪಂತ್, ವೇಗಿ ಪ್ರಸಿದ್ಧ ಕೃಷ್ಣ, ಮೊಹಮ್ಮದ್ ಸಿರಾಜ್, ಅರ್ಷದೀಪ್ ಸಿಂಗ್ ಮತ್ತು ಅನುಭವಿ ರವೀಂದ್ರ ಜಡೇಜ ಅವರು ಮುಖ್ಯ ಕೋಚ್ ಗೌತಮ್ ಗಂಭೀರ್ ಮಾರ್ಗದರ್ಶನದಲ್ಲಿ ತಾಲೀಮು ನಡೆಸಿದರು.

ಭಾರತ ತಂಡದ 37ನೇ ನಾಯಕರಾಗಿ ಗಿಲ್ ಅವರನ್ನು ಈಚೆಗಷ್ಟೇ ನೇಮಕ ಮಾಡಲಾಗಿತ್ತು. 2007ರ ನಂತರ ಭಾರತ ತಂಡವು ಇಂಗ್ಲೆಂಡ್‌ನಲ್ಲಿ ಟೆಸ್ಟ್ ಸರಣಿ ಗೆದ್ದಿಲ್ಲ. ಪ್ರಸಕ್ತ ಸರಣಿಯಲ್ಲಿ ಐದು ಟೆಸ್ಟ್‌ಗಳು ನಡೆಯಲಿವೆ. ಮೊದಲನೇಯ ಪಂದ್ಯವು ಹೆಡಿಂಗ್ಲಿ, ಎರಡನೇಯದ್ದು ಎಜ್‌ಬಾಸ್ಟನ್, ನಂತರದ ಪಂದ್ಯಗಳು ಕ್ರಮವಾಗಿ ಲಾರ್ಡ್ಸ್, ಓಲ್ಡ್ ಟ್ರಾಫರ್ಡ್ ಮತ್ತು ದ ಓವಲ್‌ನಲ್ಲಿ ನಡೆಯಲಿವೆ.

ಈ ಸರಣಿಯಲ್ಲಿ ಭಾರತ ತಂಡದಲ್ಲಿ ಆಡಲಿರುವ ಕೆಲವು ಆಟಗಾರರು ಈಗಾಗಲೇ ಭಾರತ ಎ ತಂಡದಲ್ಲಿದ್ದಾರೆ. ಇಂಗ್ಲೆಂಡ್ ಲಯನ್ಸ್ ವಿರುದ್ಧದ 'ಟೆಸ್ಟ್' ಪಂದ್ಯಗಳಲ್ಲಿ ಅವರು ಆಡುತ್ತಿದ್ದು ಇಲ್ಲಿಯ ವಾತಾವರಣಕ್ಕೆ ಹೊಂದಿಕೊಳ್ಳುತ್ತಿದ್ದಾರೆ.



ಲಂಡನ್‌ನಲ್ಲಿ ತಂಡದ ಅಭ್ಯಾಸ ಸಂದರ್ಭದಲ್ಲಿ ನಾಯಕ ಶುಭಮನ್ ಗಿಲ್ ಬಿಸಿಸಿಐ ಎಕ್ಸ್ ಚಿತ್ರ

ಕ್ರಿಕೆಟಿಗ ರಿಂಕು, ಸಂಸದೆ ಪ್ರಿಯಾ ನಿಶ್ಚಿತಾರ್ಥ

ಲಖನೌ (ಪಿಟಿಐ): ಕ್ರಿಕೆಟಿಗ ರಿಂಕು ಸಿಂಗ್ ಮತ್ತು ಸಮಾಜವಾದಿ ಪಕ್ಷದ ಸಂಸದೆ ಪ್ರಿಯಾ ಸರೋಜ್ ಅವರ ನಿಶ್ಚಿತಾರ್ಥ ಭಾನುವಾರ ನೆರವೇರಿತು.

ಇಲ್ಲಿನ ಹೋಟೆಲ್‌ವೊಂದರಲ್ಲಿ ನಡೆದ ಅದ್ದೂರಿ ಕಾರ್ಯಕ್ರಮದಲ್ಲಿ ರಿಂಕು ಸಿಂಗ್ ಹಾಗೂ ಪ್ರಿಯಾ ಅವರು ಪರಸ್ಪರ ಉಂಗುರ ಬದಲಿಸಿಕೊಂಡರು. ಉತ್ತರಪ್ರದೇಶದ ಮಾಜಿ ಮುಖ್ಯಮಂತ್ರಿ ಅಖಿಲೇಶ್ ಯಾದವ್, ಅವರ ಪತ್ನಿ ಡಿಂಪಲ್ ಯಾದವ್, ರಾಜೀವ್ ಶುಕ್ಲಾ, ಜಯಾ ಬಚ್ಚನ್ ಹಾಗೂ ಕ್ರಿಕೆಟಿಗ ಭುವನೇಶ್ವರ ಕುಮಾರ್ ಸೇರಿ ಹಲವು ಗಣ್ಯರು ಭಾಗಿಯಾಗಿದ್ದರು.

ಇದೇ ನವೆಂಬರ್ 18ರಂದು ವಿವಾಹ ನೆರವೇರಲಿದೆ. 27 ವರ್ಷದ ರಿಂಕು ಸಿಂಗ್ ಅವರು ಭಾರತ ತಂಡದಲ್ಲಿ ಎರಡು ಅಂತರರಾಷ್ಟ್ರೀಯ ಏಕದಿನ ಪಂದ್ಯಗಳಲ್ಲಿ ಹಾಗೂ 33 ಟಿ20 ಪಂದ್ಯಗಳಲ್ಲಿ ಆಡಿದ್ದಾರೆ. ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಪ್ರಮುಖ ಆಟಗಾರರಾಗಿಯೂ ಗುರುತಿಸಿಕೊಂಡಿದ್ದಾರೆ. ಪ್ರಿಯಾ (26) ಅವರು ಜೌನ್‌ಪುರದ ಮಚಲೀ ಶಹರ್ ಕ್ಷೇತ್ರದಿಂದ ಮೊದಲ ಬಾರಿಗೆ ಸಂಸದೆಯಾಗಿ ಆಯ್ಕೆಯಾಗಿದ್ದಾರೆ.



ಸಮಾಜವಾದಿ ಪಕ್ಷದ ಸಂಸದೆ ಪ್ರಿಯಾ ಸರೋಜ್ ಅವರೊಂದಿಗೆ ಕ್ರಿಕೆಟಿಗ ರಿಂಕು ಸಿಂಗ್ ಅವರು ಭಾನುವಾರ ನಿಶ್ಚಿತಾರ್ಥ ಮಾಡಿಕೊಂಡರು ಪಿಟಿಐ ಚಿತ್ರ

ಮಹಿಳಾ ಹಾಕಿ: ಭಾರತ ಶುಭಾರಂಭ

ಅಂಟ್ವೆರ್ಪ್ (ಬೆಲ್ಜಿಯಂ): ಸಾಂಘಿಕ ಆಟ ಪ್ರದರ್ಶಿಸಿದ ಭಾರತ ಜೂನಿಯರ್ ಮಹಿಳಾ ತಂಡವು ಭಾನುವಾರ ಎಫ್‌ಐಎಚ್ ಜೂನಿಯರ್ ಮಹಿಳಾ ವಿಶ್ವಕಪ್ ಟೂರ್ನಿಗೆ ಪೂರ್ವಭಾವಿಯಾಗಿ ನಡೆಯುತ್ತಿರುವ ಯುರೋಪ್ ಪ್ರವಾಸದ ಮೊದಲ ಪಂದ್ಯದಲ್ಲಿ ಶುಭಾರಂಭ ಮಾಡಿದೆ.

ಐದು ಅಭ್ಯಾಸ ಪಂದ್ಯಗಳ ಮೊದಲ ಹಣಾಹಣಿಯಲ್ಲಿ ಭಾರತದ ವನಿತೆಯರು 3-2 ಗೋಲುಗಳಿಂದ ಆತಿಥೇಯ ಬೆಲ್ಜಿಯಂ ತಂಡವನ್ನು ಸೋಲಿಸಿದರು.

ಭಾರತ ತಂಡದ ಪರವಾಗಿ ಗೀತಾ ಯಾದವ್ (11ನೇ ನಿಮಿಷ), ಸೋನಮ್ (40ನೇ) ಮತ್ತು ಲಾಲ್ತಾಂಟ್ಲುವಾಂಗಿ (45ನೇ) ಗೋಲು ಗಳಿಸಿದರು. ಆತಿಥೇಯ ತಂಡದ ಪರ ಮೇರಿ ಗೋಯೆನ್ಸ್ (25ನೇ) ಮತ್ತು ಲೂಯಿಸ್ ವ್ಯಾನ್ ಹೆಕೆ (34ನೇ) ಚೆಂಡನ್ನು ಗುರಿ ಸೇರಿಸಿದರು.

ತುಷಾರ್ ಖಾಂಡ್ಕರ್ ಮಾರ್ಗದರ್ಶನದ ಭಾರತ ತಂಡವು ಬೆಲ್ಜಿಯಂ ವಿರುದ್ಧ ಮೂರು, ಆಸ್ಟ್ರೇಲಿಯಾ ಹಾಗೂ ನೆದರ್ಲೆಂಡ್ಸ್ ವಿರುದ್ಧ ತಲಾ ಒಂದು ಪಂದ್ಯಗಳನ್ನು ಆಡಲಿದೆ. ಮಂಗಳವಾರ ಮತ್ತೆ ಬೆಲ್ಜಿಯಂ ತಂಡವನ್ನು ಎದುರಿಸಲಿದೆ.

ಎಫ್‌ಐಎಚ್ ಜೂನಿಯರ್ ಮಹಿಳಾ ಹಾಕಿ ವಿಶ್ವಕಪ್ ಟೂರ್ನಿಯು, ಚಿಲಿಯ ಸ್ಯಾಂಟಿಯಾಗೊದಲ್ಲಿ ಈ ವರ್ಷದ ಡಿಸೆಂಬರ್‌ನಲ್ಲಿ ನಡೆಯಲಿದೆ.



ಭಾರತ ಜೂನಿಯರ್ ಮಹಿಳಾ ಹಾಕಿ ತಂಡದ ಆಟಗಾರ್ತಿಯರು –ಹಾಕಿ ಇಂಡಿಯಾ ಎಕ್ಸ್ ಚಿತ್ರ

ಎಫ್‌ಐಎಚ್ ಪ್ರೊ ಲೀಗ್ ಹಾಕಿ:

ಪುಟಿದೇಳುವ ಛಲದಲ್ಲಿ ಭಾರತ

ಅಮಸ್ಟೆಲ್‌ವೀನ್ (ಪಿಟಿಐ): ಭಾರತ ಪುರುಷರ ಹಾಕಿ ತಂಡವು ಸೋಮವಾರ ನಡೆಯಲಿರುವ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯ ಯುರೋಪಿಯನ್ ಲೆಗ್ ಪಂದ್ಯದಲ್ಲಿ ಪುಟಿದೇಳುವ ಛಲದಲ್ಲಿದೆ.

ಟೂರ್ನಿಯ ಮೊದಲ ಪಂದ್ಯದಲ್ಲಿ ಭಾರತ ತಂಡವು 1-2ರಿಂದ ಒಲಿಂಪಿಕ್ಸ್ ಚಾಂಪಿಯನ್ ನೆದರ್ಲೆಂಡ್ಸ್ ವಿರುದ್ಧ ಸೋತಿತ್ತು. ಆ ಪಂದ್ಯದ ಆರಂಭಿಕ ಹಂತದಲ್ಲಿ ಭಾರತದ ಆಟಗಾರರು ಉತ್ತಮ ಆಟವಾಡಿದ್ದರು. ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರು ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗೋಲು ಗಳಿಸಿದ್ದರು. ಅದರಿಂದಾಗಿ ತಂಡ ಮುನ್ನಡೆ ಸಾಧಿಸಿತ್ತು.

ದಿಟ್ಟ ತಿರುಗೇಟು ನೀಡಿದ ಡಚ್ ಪಡೆಯು ತಿಜಿಸ್ ವ್ಯಾನ್ ಡ್ಯಾಮ್ ಅವರ ಎರಡು ಗೋಲುಗಳು ಭಾರತದ ಕೈಯಿಂದ ಗೆಲುವನ್ನು ಕಿತ್ತುಕೊಂಡವು.

'ನಾವು ಮೊದಲಾರ್ಧದಲ್ಲಿ ಉತ್ತಮವಾಗಿ ಆಡಿದ್ದೆವು. ಮೂರನೇ ಕ್ವಾರ್ಟರ್‌ನಲ್ಲಿ ಅಷ್ಟೊಂದು ಚೆನ್ನಾಗಿ ಆಡಲಾಗಲಿಲ್ಲ. ನಾಲ್ಕನೇ ಕ್ವಾರ್ಟರ್‌ನಲ್ಲಿ ಉತ್ತಮವಾಗಿ ಆಡಿದರೂ ಗೋಲು ಗಳಿಸಲು ಸಾಧ್ಯವಾಗಲಿಲ್ಲ' ಎಂದು ಭಾರತ ತಂಡದ ಮುಖ್ಯ ಕೋಚ್ ಕ್ರೇಗ್ ಫುಲ್ಟನ್ ಅವರು ಪಂದ್ಯದ ನಂತರ ಹೇಳಿದ್ದರು.

ಟೂರ್ನಿಯಲ್ಲಿ ಇನ್ನೂ ಏಳು ಪಂದ್ಯಗಳು ಬಾಕಿಯಿವೆ. ಈ ಹಂತದಲ್ಲಿ ಭಾರತ ತಂಡವು 15 ಅಂಕಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ.

ಮುಂದಿನ ವರ್ಷ ನಡೆಯಲಿರುವ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಸ್ಥಾನ ಪಡೆಯುವ ಛಲದಲ್ಲಿರುವ ಭಾರತ ತಂಡವು ಇನ್ನೂ ಉಳಿದಿರುವ ಪಂದ್ಯಗಳಲ್ಲಿ ಗೆಲುವು ಸಾಧಿಸಿ ಅಂಕಗಳನ್ನು ಹೆಚ್ಚಿಸಿಕೊಳ್ಳಬೇಕಿದೆ.

ಈ ವರ್ಷಾರಂಭದಲ್ಲಿ ಭಾರತ ತಂಡವು ಭುವನೇಶ್ವರದಲ್ಲಿ ಪ್ರೊ ಲೀಗ್‌ನ ತವರು ಚರಣದ ಪಂದ್ಯಗಳನ್ನು ಆಡಿತ್ತು. ಅದರಲ್ಲಿ ನಡೆದ ಎಂಟು ಪಂದ್ಯಗಳಲ್ಲಿ 5ರಲ್ಲಿ ಗೆದ್ದಿತ್ತು. 15 ಅಂಕ ಗಳಿಸಿತ್ತು.



ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಮನ್‌ಪ್ರೀತ್ ಸಿಂಗ್ ಪಿಟಿಐ ಚಿತ್ರ

ಖಲೀಲ್ ದಾಳಿಗೆ ಕುಸಿದ ಇಂಗ್ಲೆಂಡ್ ಲಯನ್ಸ್

ನಾರ್ತಾಂಪ್ಟನ್ (ಇಂಗ್ಲೆಂಡ್) (ಪಿಟಿಐ): ಎಡಗೈ ವೇಗಿ ಖಲೀಲ್ ಅಹಮದ್ (70ಕ್ಕೆ4) ಅವರ ಅಮೋಘ ಬೌಲಿಂಗ್ ಬಲದಿಂದ ಭಾರತ ಎ ತಂಡವು ಇಲ್ಲಿ ನಡೆಯುತ್ತಿರುವ ಇಂಗ್ಲೆಂಡ್ ಲಯನ್ಸ್ ಎದುರಿನ 'ಟೆಸ್ಟ್' ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಅಲ್ಪ ಮುನ್ನಡೆ ಸಾಧಿಸಿತು.

ಪಂದ್ಯದ ಮೂರನೇ ದಿನವಾದ ಭಾನುವಾರ ಚಹಾ ವಿರಾಮದ ವೇಳೆಗೆ ಭಾರತ ಎ ತಂಡವು 21 ರನ್‌ಗಳ ಮುನ್ನಡೆ ಸಾಧಿಸಿತು. ಎರಡನೇ ದಿನದಾಟದ ಅಂತ್ಯಕ್ಕೆ ಆತಿಥೇಯ ತಂಡವು 3ಕ್ಕೆ192 ರನ್ ಗಳಿಸಿತ್ತು. ಭಾನುವಾರ ಬೆಳಿಗ್ಗೆ ನಾಟಕೀಯ ರೀತಿಯಲ್ಲಿ ಉಳಿದ ವಿಕೆಟ್‌ಗಳನ್ನು ಕಳೆದುಕೊಂಡಿತು. ನಾಲ್ಕು ವಿಕೆಟ್‌ಗಳು ಕೇವಲ 10 ರನ್‌ಗಳ ಅಂತರದಲ್ಲಿ ಪತನವಾದವು.

ಖಲೀಲ್ ಬೌಲಿಂಗ್‌ನಲ್ಲಿ ಆತಿಥೇಯ ತಂಡದ ನಾಯಕ ಜೇಮ್ಸ್ ರಿವ್ ಮತ್ತು ಜಾರ್ಜ್ ಹಿಲ್ ಅವರು ಸತತ ಎರಡು ಎಸೆತಗಳಲ್ಲಿ ಔಟಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಎ: 348. ಇಂಗ್ಲೆಂಡ್ ಲಯನ್ಸ್: 89 ಓವರ್‌ಗಳಲ್ಲಿ 327 (ಎಮಿಲಿಯೊ ಗಾಯ್ 71, ಟಾಮ್ ಹೇನ್ಸ್ 54, ಜೋರ್ಡಾನ್ ಕಾಕ್ಸ್ 45, ಜೋಶ್ ಟಂಗ್ ಔಟಾಗದೇ 36, ಖಲೀಲ್ ಅಹಮದ್ 70ಕ್ಕೆ4, ಅನ್ಷುಲ್ ಕಾಂಭೋಜ್ 56ಕ್ಕೆ2, ತುಷಾರ್ ದೇಶಪಾಂಡೆ 62ಕ್ಕೆ2)

ಫ್ರೆಂಚ್ ಓಪನ್ ಟೆನಿಸ್: ದಾಖಲೆ ಅವಧಿಯ ಫೈನಲ್‌ನಲ್ಲಿ ಯಾನಿಕ್ ಸಿನ್ನರ್‌ಗೆ ನಿರಾಸೆ

ಸತತ 2ನೇ ವರ್ಷ ಅಲ್ಕರಾಜ್‌ಗೆ ಕಿರೀಟ

ಪ್ಯಾರಿಸ್ (ಎಎಫ್‌ಪಿ): ದಾಖಲೆ ಅವಧಿಯ ಫೈನಲ್ ಪಂದ್ಯದಲ್ಲಿ, ಭಾನುವಾರ ಅಮೋಘವಾಗಿ ಪ್ರತಿ ಹೋರಾಟ ತೋರಿದ ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರು 4-6, 6-7 (4-7), 6-4, 7-6 (7-3), 7-6 (10-2)ರಿಂದ ಅಗ್ರ ಶ್ರೇಯಾಂಕದ ಯಾನಿಕ್ ಸಿನ್ನರ್ ಅವರನ್ನು ಸೋಲಿಸಿ, ಫ್ರೆಂಚ್ ಓಪನ್ ಟೆನಿಸ್ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಮೊದಲೆರಡು ಸೆಟ್ ಕಳೆದುಕೊಂಡ ಸ್ಪೇನ್‌ನ ಆಟಗಾರ ನಂತರ ಮೂರು ಬಾರಿ ಮ್ಯಾಚ್ ಪಾಯಿಂಟ್ ರಕ್ಷಿಸಿ ಸೋಲಿನಂಚಿನಿಂದ ಪಾರಾದರು. ಬಳಿಕ, ದಿಟ್ಟ ಆಟವಾಡಿ ಪಂದ್ಯದ ಮೇಲೆ ಹಿಡಿತ ಸಾಧಿಸಿದರು. ಈ ಪಂದ್ಯ 5 ಗಂಟೆ 29 ನಿಮಿಷ ನಡೆದಿದ್ದು, ಫ್ರೆಂಚ್ ಓಪನ್ ಟೂರ್ನಿಯ ಓಪನ್ ಯುಗದ ದಾಖಲೆಯಾಗಿದೆ.

1982ರ ಫೈನಲ್‌ನಲ್ಲಿ, ಸ್ವೀಡನ್‌ನ ಮ್ಯಾಟ್ಸ್ ವಿಲಾಂಡರ್ ಅವರು ಅರ್ಜೆಂಟೀನಾದ ಗಿಲೆರ್ಮೊ ವಿಲಾಸ್ ವಿರುದ್ಧ 4 ಗಂಟೆ 42 ನಿಮಿಷ ನಡೆದಿದ್ದ ಪಂದ್ಯದಲ್ಲಿ ಗೆಲುವು ದಾಖಲಿಸಿದ್ದು ಈವರೆಗಿನ ದಾಖಲೆಯಾಗಿತ್ತು.

ಸರ್ಬಿಯಾದ ದಿಗ್ಗಜ ನೊವಾಕ್ ಜೊಕೊವಿಚ್ ಅವರನ್ನು ಮಣಿಸಿ, ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಮೊದಲ ಬಾರಿ ಫೈನಲ್‌ಗೇರಿದ್ದ ಸಿನ್ನರ್ ನಿರಾಶೆ ಅನುಭವಿಸಬೇಕಾಯಿತು. ಅವರು, ಗ್ರಾನ್ ಸ್ಲಾಮ್ ಫೈನಲ್‌ನಲ್ಲಿ ಇದೇ ಮೊದಲ ಬಾರಿಗೆ ಸೋಲನುಭವಿಸಿದರು.

ರೋಲಂಡ್ ಗ್ಯಾರೋಸ್‌ನಲ್ಲಿ 2024ರಲ್ಲೂ ಚಾಂಪಿಯನ್ ಆಗಿದ್ದ ಅಲ್ಕರಾಜ್‌ಗೆ ಇದು ಐದನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯಾಗಿದೆ.





ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಭಾನುವಾರ ಪುರುಷರ ಸಿಂಗಲ್ಸ್‌ನಲ್ಲಿ ಟ್ರೋಫಿ ಜಯಿಸಿದ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ (ಎಡಚಿತ್ರ) ಫೈನಲ್‌ನಲ್ಲಿ ಪರಾಭವಗೊಂಡ ಯಾನಿಕ್ ಸಿನ್ನರ್ –ರೋಲ್ಯಾಂಡ್ ಗ್ಯಾರೋಸ್ 'ಎಕ್ಸ್' ಚಿತ್ರ

ಪಾವೊಲಿನಿ ಜೋಡಿಗೆ ಕಿರೀಟ: ಒಲಿಂಪಿಕ್ಸ್ ಚಿನ್ನದ ಪದಕವಿಜೇತ ಆಟಗಾರ್ತಿ ಸಾರಾ ಎರಾನಿ ಮತ್ತು ಜಾಸ್ಮಿನ್ ಪಾವೊಲಿನಿ ಫ್ರೆಂಚ್ ಓಪನ್ ಮಹಿಳಾ ವಿಭಾಗದ ಪ್ರಶಸ್ತಿಯನ್ನು ಮೊದಲ ಸಲ ಗೆದ್ದರು.

ಎರಡನೇ ಶ್ರೇಯಾಂಕದ, ಇಟಲಿಯ ಈ ಜೋಡಿಯು ಹೋದ ವರ್ಷ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ರನ್ನರ್ಸ್ ಅಪ್ ಆಗಿತ್ತು. ಈ ಬಾರಿ ಫೈನಲ್‌ನಲ್ಲಿ ಈ ಜೋಡಿಯು 6-4, 2-6, 6-1ರಿಂದ ಆನಾ ಡ್ಯಾನಿಲಿನಾ ಮತ್ತು ಅಲೆಕ್ಸಾಂದ್ರಾ ಕ್ರುನಿಚ್ ಎದುರು ಜಯಿಸಿದರು.

ಎರಾನಿ ಅವರಿಗೆ ಇದು ಫ್ರೆಂಚ್ ಓಪನ್‌ನಲ್ಲಿ ಎರಡನೇ ಪ್ರಶಸ್ತಿಯಾಗಿದೆ. ಒಟ್ಟು ಆರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಅವರು ಗೆದ್ದಿದ್ದಾರೆ. ಎರಾನಿ ಅವರಿಗೆ ಈ ವರ್ಷದ ಟೂರ್ನಿಯಲ್ಲಿ ಇದು ಎರಡನೇ ಕಿರೀಟ. ಅವರು ಮಿಶ್ರ ಡಬಲ್ಸ್‌ನಲ್ಲಿ ಆ್ಯಂಡ್ರಿಯಾ ವಾವಾಸೊರಿ ಅವರೊಂದಿಗೆ ಟ್ರೋಫಿ ಜಯಿಸಿದ್ದರು.

ಲಿಲ್ಲಿ ಟ್ಯಾಗರ್‌ಗೆ ಜೂನಿಯರ್ ಕಿರೀಟ: ಪ್ಯಾರಿಸ್ (ಎಪಿ): ಆಸ್ಟ್ರಿಯಾದ 17 ವರ್ಷ ವಯಸ್ಸಿನ ಲಿಲ್ಲಿ ಟ್ಯಾಗರ್, ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಜೂನಿಯರ್ ಬಾಲಕಿಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಜಯಿಸಿದರು.

ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಇದೇ ಮೊದಲ ಬಾರಿಗೆ ಲಿಲ್ಲಿ ಆಡಿದ್ದರು. ಫೈನಲ್‌ನಲ್ಲಿ ಅವರು 6-2, 6-0ಯಿಂದ ಬ್ರಿಟನ್‌ನ ಹೆನಾ ಕ್ಲುಗ್‌ಮ್ಯಾನ್ ವಿರುದ್ಧ ಜಯಿಸಿದರು. ಬಾಲಕರ ವಿಭಾಗದ ಫೈನಲ್‌ನಲ್ಲಿ ಜರ್ಮನಿಯ ನೀಲ್ಸ್ ಮೆಕ್‌ಡೊನಾಲ್ಡ್ 6-7 (5), 6-0, 6-3ರಿಂದ ತಮ್ಮದೇ ದೇಶದ ಮ್ಯಾಕ್ಸ್ ಶೊಯೆನಾಸ್ ವಿರುದ್ಧ ಜಯಿಸಿದರು.

ಡಬಲ್ಸ್: ಮಾರ್ಸೆಲ್, ಝೆಬಾಲೊಸ್‌ಗೆ ಕಿರೀಟ

ಪ್ಯಾರಿಸ್ (ಎಪಿ): ಅನುಭವಿ ಆಟಗಾರರಾದ ಮಾರ್ಸೆಲ್ ಗ್ರಾನೊಲರ್ಸ್ ಮತ್ತು ಹೊರೈಸಿಯೊ ಝೆಬಾಲೊಸ್ ಜೋಡಿಯು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪುರುಷರ ವಿಭಾಗದ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡಿತು.

ಸ್ಪೇನ್ ದೇಶದ 39 ವರ್ಷ ವಯಸ್ಸಿನ ಗ್ರಾನೊಲರ್ಸ್ ಮತ್ತು ಅರ್ಜೆಂಟೀನಾದ 40 ವರ್ಷ ವಯಸ್ಸಿನ ಝೆಬಾಲೊಸ್ ಅವರ ಜೋಡಿಯು ಗ್ರ್ಯಾನ್‌ಸ್ಲಾಮ್‌ನಲ್ಲಿ ನಾಲ್ಕನೇ ಬಾರಿ ಫೈನಲ್ ತಲುಪಿತ್ತು. ಆದರೆ ಮಣ್ಣಿನಂಕಣದಲ್ಲಿ ಇವರಿಬ್ಬರಿಗೂ ಇದು ಮೊದಲ ಫೈನಲ್.

ಇದರಲ್ಲಿ ಅವರು 6-0, 6-7(5), 7-5ರಿಂದ ಬ್ರಿಟನ್ ಜೋಡಿ ಜೋ ಸಾಲಿಸ್ಬರಿ ಮತ್ತು ನೀಲ್ ಸ್ಕುಪಾಸ್ಕಿ ವಿರುದ್ಧ ಗೆದ್ದರು. ಈ ಟೂರ್ನಿಯಲ್ಲಿ ಗ್ರಾನೊಲರ್ಸ್ ಜೋಡಿಯು ಐದನೇ ಶ್ರೇಯಾಂಕ ಪಡೆದಿತ್ತು. 2019ರಲ್ಲಿ ಅಮೆರಿಕ ಓಪನ್ ಮತ್ತು 2021 ಹಾಗೂ 2023ರಲ್ಲಿ ವಿಂಬಲ್ಡನ್‌ನಲ್ಲಿ ರನ್ನರ್ಸ್ ಅಪ್ ಆಗಿದ್ದರು.

ಫುಟ್‌ಬಾಲ್: ಅಲ್ಕೆಮಿ ತಂಡಕ್ಕೆ ಗೆಲುವು

ಬೆಂಗಳೂರು: ಸಂಘ್ರಾಂಗ್ ಶಾಯಿ ರಾಣಿ ಅವರ ಆಟದ ನೆರವಿನಿಂದ ಅಲ್ಕೆಮಿ ಐಎಫ್‌ಎ ತಂಡವು ಕೆಎಸ್‌ಎಫ್‌ಎ ವೈಪಿಎಲ್ (21 ವರ್ಷದೊಳಗಿನವರ) ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 4-1 ಗೋಲುಗಳಿಂದ ರಾಮನ್ ಎಸ್.ಎ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಸಂಘ್ರಾಂಗ್ (66ನೇ ಮತ್ತು 68ನೇ ನಿಮಿಷ) ಎರಡು ಗೋಲು ಗಳಿಸಿದರು. ಮೈಬಮ್ ಡೇವಿಡ್ ಸಿಂಗ್ (45 + 3ನೇ) ಮತ್ತು ಫ್ರಾನ್ಸಿಸ್ ರೊಸಾಂಗ್ಲಿಯಾನ (63ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು. ರಾಮನ್ ತಂಡದ ಪರ ರಾಹುಲ್ ಎಂ (12ನೇ) ಒಂದು ಗೋಲು ತಂದಿತ್ತರು.

ದಿನದ ಮತ್ತೊಂದು ಪಂದ್ಯದಲ್ಲಿ ಸ್ಟಾರ್ ಸಾಕರ್ ತಂಡವು 1-0 ಗೋಲಿನಿಂದ ಸ್ಪೋರ್ಟ್ಸ್‌ಹಡ್ ಎಫ್‌ಸಿ ತಂಡವನ್ನು ಸೋಲಿಸಿತು. ಸ್ಟಾರ್ ತಂಡದ ಪರ ಲಿನ್ಸನ್ ಜಾನ್ (52ನೇ) ಏಕೈಕ ಗೋಲು ದಾಖಲಿಸಿದರು.

ಚಿಕ್ಕಮಗಳೂರು ಜಿಲ್ಲಾ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೆಹಾನ್ ಖಾನ್ ಮತ್ತು ನೆಟ್ಲಾ ಚಂದ್ರ ಅವರ ಆಟದ ಬಲದಿಂದ ಚಿಕ್ಕಮಗಳೂರು ಜಿಲ್ಲಾ ತಂಡವು ಡಿ.ಎನ್. ರಾಜಣ್ಣ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಜೂನಿಯರ್ (18 ವರ್ಷದೊಳಗಿನವರ) ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಬಾಲಕರ ವಿಭಾಗದ ಪಂದ್ಯದಲ್ಲಿ 81-65ರಿಂದ ಹೂಪ್ಸ್ 7 ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್ ಬಾಲ್ ಕೋರ್ಟ್‌ನಲ್ಲಿ ಭಾನುವಾರ ನಡೆದ ರೌಂಡ್ ರಾಬಿನ್ ಲೀಗ್ ಪಂದ್ಯದಲ್ಲಿ ವಿರಾಮದ ವೇಳೆಗೆ 6 ಅಂಕಗಳ (35-41) ಹಿನ್ನಡೆಯಲ್ಲಿದ್ದ ಚಿಕ್ಕಮಗಳೂರು ತಂಡವು ಉತ್ತರಾರ್ಧ ದಲ್ಲಿ ಪಾರಮ್ಯ ಮೆರೆದು ಗೆಲುವು ಸಾಧಿಸಿತು.

ರೆಹಾನ್ ಮತ್ತು ಚಂದ್ರ ತಲಾ 23 ಅಂಕ ಗಳಿಸಿದರು. ಹೂಪ್ಸ್ ಪರ ಸಮರ್ಥ ಮಣೂರ್ ಮತ್ತು ದೇವ್ ರಾಘವೇಂದ್ರ ಕ್ರಮವಾಗಿ 20 ಮತ್ತು 19 ಪಾಯಿಂಟ್ಸ್ ಕಲೆ ಹಾಕಿದರು.

ಫಲಿತಾಂಶ: ರೌಂಡ್ ರಾಬಿನ್ ಲೀಗ್: ಬಾಲಕರು: ಎಚ್‌ಬಿಆರ್ ಬಿ.ಸಿ 67-62ರಿಂದ ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ವಿರುದ್ಧ; ಡಿವೈಇಎಸ್ ಬೆಂಗಳೂರು 74-39ರಿಂದ ಮೈಸೂರು ಜಿಲ್ಲೆ ಎ ವಿರುದ್ಧ; ಚಿಕ್ಕಮಗಳೂರು ಜಿಲ್ಲೆ 81-65 ಹೂಪ್ಸ್ 7 ಬಿ.ಸಿ ವಿರುದ್ಧ ಗೆಲುವು ಸಾಧಿಸಿತು.

ಬಾಲಕಿಯರು: ಮೌಂಟ್ಸ್ ಕ್ಲಬ್ 63-51ರಿಂದ ವಿವೇಕ್ಸ್ ಎಸ್.ಸಿ ಎದುರು; ಮೈಸೂರು ಜಿಲ್ಲೆ ಎ 61-46ರಿಂದ ಬೆಂಗಳೂರು ವ್ಯಾನ್‌ಗಾರ್ಡ್ಸ್ ಎದುರು ಜಯ ಸಾಧಿಸಿತು.



ವಿವೇಕ್ಸ್ ಎಸ್‌.ಸಿ ತಂಡದ ಆರೋಹಿ (ಎಡ) ಮತ್ತು ಮೌಂಟ್ಸ್ ತಂಡದ ಅನನ್ಯಾ (ಬಲ) ಚೆಂಡಿಗಾಗಿ ಸೆಣಸಾಟ ನಡೆಸಿದರು ಚಿತ್ರ:ಎಸ್‌.ಕೆ.ದಿನೇಶ್